ಪುಸ್ತಕ ಪ್ರಪಂಚ

ಸಂಪುಟ ೫೧ ಮಾರ್ಚಿ ೨೦೦೧ ಸಂಚಿಕೆ ೫



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಪರಿವಿಡಿ

ಮುಖಚಿತ್ರ : ಗಂಜೀಫಾ ಕಲೆ : ಮುಮ್ಮಡಿ ಕೃಷ್ಣರಾಜ ಒಡೆಯರ್

PUSTAKA PRAPANCHA: Monthly

Published and printed by Karnataka State Adult Education Council,Mysore-6,
Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ, ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಗುಜರಾತಿನಲ್ಲಿ ಭೂಕಂಪ

ಮಾನವನ ನಿರ್ಲಕ್ಷ್ಯ, ದುರ್ಬುದ್ಧಿ, ದರ್ಪಾಹಂಕಾರ, ದಾನವತೆಗಳು ಕಾರಣವಾಗಿ, ಪ್ರತಿನಿತ್ಯ ಜಗತ್ತಿನಲ್ಲಿ ನೂರಾರು, ಸಾವಿರಾರು ಅಪಘಾತಗಳು, ಯುದ್ಧಗಳು, ಹೊಡೆದಾಟಗಳು, ಸಾವು ನೋವುಗಳು ಸಂಭವಿಸುತ್ತಿರುವುದು ಸರ್ವವೇದ್ಯ. ಮನುಷ್ಯ ಪ್ರಯತ್ನಿಸಿದರೆ ತಾನೇ ಕಾರಣವಾಗಿರುವ ಈ ಅನಾಹುತಗಳನ್ನು ತಪ್ಪಿಸಬಹುದಾದ ಸಾಧ್ಯತೆಯುಂಟು. ಆದರೆ ಅವನ ಅಟ್ಟಹಾಸ ಅಹಂಕೃತಿಗಳನ್ನು ಅಣಕಿಸಲೆಂಬಂತೆ, ವಿಧಿಯ ಮುಂದೆ ಅವನ ಶಕ್ತಿಸಾಮರ್ಥ್ಯಗಳು ನಿಷ್ಪ್ರಯೋಜಕವೆನ್ನುವಂತೆ ಆಗಾಗ್ಗೆ ಸಂಭವಿಸುವ ಭೀಕರ ಭಯಂಕರ ಪ್ರಾಕೃತಿಕ ಉತ್ಪಾತಗಳನ್ನು ತಪ್ಪಿಸಲು ಯಾವ ಜಗಜ್ಜೇತ ವೀರನಿಂದಾಗಲಿ, ಮಹಾಮೇಧಾವಿ ವಿಜ್ಞಾನಿಯಿಂದಾಗಲಿ ಸಾಧ್ಯವಿಲ್ಲ. ಚಂಡಮಾರುತ, ಕ್ಷಾಮ ಡಾಮರ ಮತ್ತು ಭೂಕಂಪ ಮೊದಲಾದ ನಿಸರ್ಗದ ಮುನಿಸಿನ ದುರ್ಘಟನೆಗಳಿಗೆ ಜಗತ್ತು ತತ್ತರಿಸುತ್ತದೆ, ಮನುಷ್ಯ ತಲ್ಲಣಗೊಳ್ಳುತ್ತಾನೆ, ಜೀವಜಾಲವೇ ಅಸ್ತವ್ಯಸ್ತವಾಗುತ್ತದೆ, ಕೊನೆಗೆ ಭೌಗೋಳಿಕ ರಚನೆಯಲ್ಲಿಯೂ ಕ್ರಾಂತಿ ಯುಂಟಾಗುತ್ತದೆ.

೨೬.೧.೨೦೦೧ ರಂದು ಪ್ರಾತಃಕಾಲ ದೆಹಲಿ ಮಾತ್ರವಲ್ಲ, ರಾಷ್ಟ್ರದ ಎಲ್ಲೆಡೆಗಳೂ ಗಣರಾಜ್ಯೋತ್ಸವದ ಸಂಭ್ರಮ ಸಡಗರಗಳ ಆನಂದದಲ್ಲಿ ತೇಲುತ್ತಿರುವಾಗ, ಹೆತ್ತ ಭೂಮಾತೆಯೇ ಬಾಯಿ ತೆರೆದು, ಕೇವಲ ಒಂದೆರಡು ನಿಮಿಷಗಳಲ್ಲಿ ಜನ ಜಾನುವಾರು ಮನೆಮಠಗಳನ್ನು ನುಂಗಿಕೊಂಡದ್ದು ಮಹಾದುರಂತ. ಭುಜ್‌ನಗರ ಕೇಂದ್ರೀಕೃತವಾಗಿ ನಡೆದ ಭೂಕಂಪದ ಪ್ರಮಾಣ ರಿಕ್ಟರ್ ಮಾಪಕದಲ್ಲಿ ೬.೯ರಷ್ಟಿತ್ತು ಎಂದು ಹೇಳಲಾಗಿದೆ. ಗಾಂಧೀಜಿ ಹುಟ್ಟಿದ ಆ ಪವಿತ್ರ ಪ್ರದೇಶದಲ್ಲಿ ಒಂದು ವರ್ಷದಿಂದೀಚೆಗೆ ಪ್ರಕೃತಿಯ ಮುನಿಸಿನ ಪರಿಣಾಮವಾಗಿ ಚಂಡಮಾರುತ ಕ್ಷಾಮಗಳು ಸಂಭವಿಸಿದ ಪರಿಣಾಮವಾಗಿ ಆದ ಹಾನಿ ಅವರ್ಣನೀಯ. ಪ್ರಬಲ ಭೂಕಂಪ ಸಂಭವಿಸಿದ ಒಂದು ದಿನದೊಳಗಾಗಿ ೧೮೮ ಬಾರಿ ಲಘು ಭೂಕಂಪನವೊದಗಿತೆಂದೂ, ಅಂಥ ಲಘು ಭೂಕಂಪನಗಳು ಮುಂದೆಯೂ ನಡೆಯ ಬಹುದೆಂದೂ ಹೇಳಲಾಗಿದೆ.

ಭೂಕಂಪನದಿಂದ ಸತ್ತವರ ಸಂಖ್ಯೆ ಇಪ್ಪತ್ತು ಸಾವಿರವೆಂದೂ, ಗಾಯಾಳುಗಳ ಸಂಖ್ಯೆ ಒಂದೂ ವರೆ ಲಕ್ಷ ಮೀರಿದೆಯೆಂದೂ, ಆಸ್ತಿಪಾಸ್ತಿಯ ಅಂದಾಜು ನಷ್ಟ ಇಪ್ಪತ್ತು ಸಾವಿರ ಕೋಟಿಯೆಂದೂ ಅಲ್ಲಿಯ ಸರ್ಕಾರದ ವಕ್ತಾರರು ಹೇಳಿದ್ದಾರೆ. ೧೨ ದಿನಗಳ ನಂತರವೂ ಭಗ್ನಾವಶೇಷಗಳ ಅಡಿಯಿಂದ ಹೆಣಗಳನ್ನು ತೆಗೆಯಲಾಗುತ್ತಿದೆಯೆಂದೂ , ಹಲವು ಹೆಣಗಳನ್ನು ಪತ್ತೆಮಾಡಲು ಸಾಧ್ಯವಾಗಿಲ್ಲವೆಂದೂ , ಸತ್ತವರ ಸಂಖ್ಯೆ ಇನ್ನೂ ಹೆಚ್ಚಬಹುದೆಂದೂ ಜವಾಬ್ದಾರಿಯುತ ಗಣ್ಯವ್ಯಕ್ತಿಗಳು ಹೇಳುತ್ತಿದ್ದಾರೆ. ತಂದೆತಾಯಿಯರನ್ನು ನೆಂಟರಿಷ್ಟರನ್ನು ಕಳೆದುಕೊಂಡ ತಬ್ಬಲಿಗಳ, ಮಡದಿಯರನ್ನು ಕಳೆದುಕೊಂಡ ವಿಧುರರ, ಗಂಡಂದಿರನ್ನು ಕಳೆದುಕೊಂಡ ವಿಧವೆಯರ, ಕೈಕಾಲು ಮುಂತಾದ ಅಂಗಗಳನ್ನು ಕಳೆದುಕೊಂಡ ನತದ್ರಷ್ಟ ಗಾಯಾಳುಗಳ, ಆಸ್ತಿಪಾಸ್ತಿಗಳನ್ನು ಕಳೆದು ಕೊಂಡು ನಿರ್ಗತಿಕರಾಗಿರುವ ಅನಾಥರ ನೋವು ಗೋಳುಗಳನ್ನು ಶಮನಗೊಳಿಸಬಲ್ಲ ಶಕ್ತಿಮುಲಾಮು ಜಗತ್ತಿನಲ್ಲಿದೆಯೆ? ವಾಸ್ತವವಾಗಿ ಹೋದವರು ಸುಖಿಗಳು, ಇದ್ದವರು

ದುಃಖಿಗಳು ಎನ್ನಬೇಕಾಗಿದೆ. ಹಿಂದಿನ ಆಸ್ತಿಪಾಸ್ತಿಗಳನ್ನು ಪಡೆಯುವ ಅವಕಾಶ ಲಭಿಸಬಹುದಾದರೂ, ಅವರಿಗೆ ಮಾನಸಿಕ ಸುಖ ಲಭಿಸುತ್ತದೆಯೆ ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಮುನ್ನೂರೈವತ್ತು ಮಂದಿ ಮಕ್ಕಳಿದ್ದ ಶಾಲೆಯೇ ನೆಲಸಮವಾಯಿತೆಂದರೆ, ಜಗತ್ತಿನ ಯಾವ ತಾಯಿತಂದೆಯರಿಗೆ ತಾನೆ ನಿದ್ದೆ ಹತ್ತೀತು!

ಈ ಮಹೋಪದ್ರವದ ಕಾಳಗತ್ತಲೆಯಲ್ಲಿ ಜಗತ್ತಿನ ಅನೇಕ ರಾಷ್ಟ್ರಗಳ ಸಹಾನುಭೂತಿಯ ಕಿರಣ ಪ್ರಕಾಶಿಸುತ್ತಿರುವುದು ಸಮಾಧಾನದ ಸಂಗತಿ. ನಿರೀಕ್ಷೆಗಿಂತ ಮಿಗಿಲಾಗಿ ಎಲ್ಲ ರಾಷ್ಟ್ರಗಳಿಂದ ನಾನಾ ರೀತಿಯ ಸಹಾಯವೊದಗುತ್ತಿದೆ. ಕೇಂದ್ರ ಮತ್ತು ರಾಜ್ಯಸರ್ಕಾರಗಳಿಂದಲೂ ಸಾಕಷ್ಟು ನೆರವು ಹರಿಯುತ್ತಿದೆ. ಬಹು ಪ್ರಮಾಣದ ಈ ನೆರವನ್ನು ಪ್ರಾಮಾಣಿಕವಾಗಿ ನಿಷ್ಪಕ್ಷಪಾತ ಬುದ್ಧಿಯಿಂದ, ವಿವೇಕದಿಂದ, ದಕ್ಷತೆಯಿಂದ, ಉಪಯುಕ್ತವಾಗಿ ಬಳಸಬಲ್ಲ, ಹಂಚಬಲ್ಲ, ಪುನರ್ವಸತೀಕರಣವನ್ನು ಬುದ್ಧಿವಂತಿಕೆಯಿಂದ ನಿರ್ವಹಿಸಬಲ್ಲ, ದುಷ್ಟರನ್ನು ನಿಗ್ರಹಿಸಬಲ್ಲ ಅಧಿಕಾರಿಗಳು ಸಾಕಷ್ಟು ಮಂದಿ ಸಿಗುತ್ತಾರೆಯೇ ಎನ್ನುವುದು ದೊಡ್ಡ ಸಮಸ್ಯೆಯಾಗಿದೆ. ನೀತಿವಂತರಲ್ಲದ, ಅನುಕಂಪೆ ಲವಲೇಶವಿಲ್ಲದ ಭಂಡ ಅಧಿಕಾರಿಗಳ ಹಾಗೂ ಪುಂಡ ರಾಜಕಾರಣಿಗಳ ಹೊಟ್ಟೆಬಾಕತನಕ್ಕೆ ಇಂಥ ಉತ್ಪಾತಗಳು ಭಾರಿ ಹಬ್ಬಗಳು. ಹಿಂದೆ ಲಾತೂರಿನಲ್ಲಿ ಭೂಕಂಪ ಸಂಭವಿಸಿದಾಗ ಕೆಲವು ರಾಜಕಾರಣಿಗಳು ಶ್ರೀಮಂತರಾದರೆಂಬುದು ಜಗತ್ತಿಗೇ ಗೊತ್ತು. ಸ್ವಯಂಸೇವಾ ಸಂಸ್ಥೆಗಳು ಮತ್ತು ಕೈಗಾರಿಕಾ ಘಟಕಗಳು ಪರಿಹಾರ ಮತ್ತು ಪುನರ್ವಸತೀಕರಣ ಕಾರ್ಯವನ್ನು ನಿಯತ್ತಿನಿಂದ ನಿರ್ವಹಿಸಿದುವೆಂದೂ , ಸರ್ಕಾರದ ಕೈಸೇರಿದ ಹಣ ಪೋಲಾಯಿತೆಂದೂ, ನಿವೃತ್ತ ನ್ಯಾಯಾಧೀಶರೊಬ್ಬರ ಅಧ್ಯಕ್ಷತೆಯಲ್ಲಿ ರಚನೆಗೊಂಡಿದ್ದ ಖಾಸಗಿ ಸಮಿತಿಯೊಂದು ಉಗ್ರವಾಗಿ ಖಂಡಿಸಿದ್ದನ್ನು ಮರೆಯುವಂತಿಲ್ಲ. ಇದೇ ಸಂದರ್ಭದಲ್ಲಿ ಕಳ್ಳಕಾಕರು ಮತ್ತು ದರೋಡೆಗಾರರು ಅಳಿದುಳಿದ ಮನೆಗಳಿಗೆ ನುಗ್ಗಿ ಲೂಟಿ ಮಾಡಿದರೆಂಬ ವಾರ್ತೆ ಸುದ್ದಿಮಾಧ್ಯಮಗಳಲ್ಲಿ ಪ್ರಕಟಗೊಂಡದ್ದುಂಟು. ಈ ಅಧಿಕಾರಿಗಳು ಮತ್ತು ರಾಜಕಾರಣಿಗಳು ಕಳ್ಳಕಾಕರ ಗುಂಪಿಗೆ ಸೇರಿದವರೆಂಬುದನ್ನು ಬಿಚ್ಚತವಾಗಿ ಬಿತ್ತರಿಸಬೇಕಾಗಿಲ್ಲ. ಇವರೆಲ್ಲರೂ ಅಮಾನವೀಯರು, ದಾನವರು, ಬರ್ಬರರು , ದುಷ್ಟರು , ಪಾಪಿಷ್ಠರು. ಇಂಥ ಸಂದರ್ಭಗಳಲ್ಲಿ ನಿರ್ವಹಣೆಕಾರರ ಪ್ರಾಮಾಣಿಕತೆ ಪಾರದರ್ಶಿಕತೆ ಮತ್ತು ವೈಚಕ್ಷಣ್ಯ ಜಗತ್ತಿಗೆ ಎದ್ದು ಕಾಣುವಂತಿರಬೇಕು. ಜಗತ್ತಿನ ನಾಲ್ಕು ದಿಕ್ಕುಗಳಿಂದ ಹರಿದು ಬರುವ ಹಣದ ಮೊತ್ತ ಮತ್ತು ವಸ್ತುರೂಪದ ಕೊಡುಗೆಗಳು ನಿರೀಕ್ಷೆ ಅಗತ್ಯಗಳಿಗಿಂತ ಮಿಗಿಲಾಗಿರುತ್ತವೆ. ವಂಚನೆಗವಕಾಶ ವಿಲ್ಲದಂತೆ ಆ ಹಣ ಮತ್ತು ವಸ್ತುಗಳನ್ನು ನ್ಯಾಯವಾಗಿ ಬಳಸಿಕೊಂಡದ್ದಾದರೆ, ಭೂಕಂಪ ಪೂರ್ವ ಗುಜರಾತಿಗಿಂತ ಉತ್ತಮವಾದ, ಅಧಿಕ ಅತ್ಯಾಧುನಿಕ ಸೌಕರ್ಯವುಳ್ಳ ನವಗುಜರಾತನ್ನು ಸೃಷ್ಟಿಸುವ ಸಾಧ್ಯತೆಯಿದೆ. ಆ ಸಾಧ್ಯತೆ ನೆರವೇರಲಿಲ್ಲವಾದರೆ ಅಧಿಕಾರಿಷಾಹಿ ಹಾಗೂ ಸರ್ಕಾರವನ್ನು ಶಂಕಿಸಬೇಕಾಗುತ್ತದೆ. ಹಣ ಸರಕುಗಳ ವಿನಿಯೋಗ ಕಾರ್ಯವನ್ನು ನೀತಿವಂತರೆಂದು, ಶುದ್ಧಾತ್ಮರೆಂದು ಗುರುತಿಸಬಹುದಾದ ಸಜ್ಜನರಿಗೊಪ್ಪಿಸತಕ್ಕದ್ದು ವಿಹಿತ. ಅವರು ಪ್ರತಿವಾರ, ಸಾಧ್ಯವಾದರೆ ಪ್ರತಿದಿನ, ಆಡಿಟ್ ಆದ ಲೆಕ್ಕಪತ್ರಗಳನ್ನು ಗುಜರಾತಿ ಭಾಷೆಯಲ್ಲಿ ಪ್ರಕಟಿಸಬೇಕು. ಅವುಗಳ ಬಗ್ಗೆ ತೂರಿಬರಬಹುದಾದ

ಟೀಕೆಗಳಿಗೆ ಆ ಸಜ್ಜನರು ಕೂಡಲೇ ಸುದ್ದಿಮಾಧ್ಯಮಗಳ ಮೂಲಕ ಉತ್ತರ ನೀಡಬೇಕು.

ಮತೀಯ ಆಧಾರದ ಮೇಲೆ ಭೂಕಂಪ ಪರಿಹಾರ ವಿತರಣೆ ನಡೆಯುತ್ತಿದೆಯೆಂಬ ಸುದ್ದಿಯನ್ನು ಕೆಲವು ಪತ್ರಿಕೆಗಳು ಹೊರಗೆಡಹಿವೆ (ಕನ್ನಡ ಜನಾಂತರಂಗ, ೮.೨.೨೦೦೧). ಈ ದೂರುಗಳಲ್ಲಿ ಸತ್ಯವಿಲ್ಲದಿದ್ದರೂ ನಿರ್ವಾಹಕರು ಜಾಗರೂಕರಾಗಿರಬೇಕಾಗಿದೆ. ಇಂಥ ಅವಘಡಗಳಿಂದಾಗಿ ಪರಿಸರದಲ್ಲಿ, ಜೀವ ಜಾಲದಲ್ಲಿ ತುಂಬ ಬದಲಾವಣೆಗಳಾಗುವ ಸಂಭವವುಂಟು. ಈ ಬದಲಾವಣೆಗಳಲ್ಲಿ ಒಳಿತು ಕೆಡುಕುಗಳೆರಡೂ ಸೇರಿಕೊಂಡಿರುತ್ತವೆ. ಗುಪ್ತಗಾಮಿನಿಯಾದ ಸರಸ್ವತೀನದಿ ಮತ್ತೆ ಕಾಣಿಸಿಕೊಂಡಿದೆಯೆಂದು ವರದಿಯಾಗಿದೆ. ಸಸ್ಯ ಮತ್ತು ಪ್ರಾಣಿ ಸಂಪತ್ತು ನಷ್ಟವಾಗಿರುವ ಸಂಭವವುಂಟು. ಹಿಂದೆ ಕೇಳರಿಯದ ಕಂಡರಿಯದ ಖಾಯಿಲೆಗಳು ಹೊಸದಾಗಿ ಕಾಣಿಸಿಕೊಳ್ಳಬಹುದು. ಇವನ್ನೆಲ್ಲ ತಳುವದೆ ಸಮರ ವಿಧಾನದಲ್ಲಿ, ಶ್ರಮವನ್ನು ನಿರ್ಲಕ್ಷಿಸಿ ಎದುರಿಸಬೇಕಾಗಿದೆ. ಇಂಥ ದೈವ ಕಾರ್ಯದಲ್ಲಿ ಭಾಗಿಯಾಗುವ ಪುಣ್ಯ ಬಡವ ಬಲ್ಲಿದರೆಲ್ಲರಿಗೂ ಏಕಕಾಲದಲ್ಲೊದಗಿ ಬಂದಿದೆ. ನಾಡಿನ ಜನರ ಸ್ಥೈರ್ಯ ಧೈರ್ಯಗಳನ್ನು, ಧರ್ಮಬುದ್ಧಿಯನ್ನು, ಅನುಕಂಪೆಯನ್ನು, ಮಾನವೀಯತೆಯನ್ನು ಪರೀಕ್ಷಿಸುವ ಸಲುವಾಗಿ ಇಂಥ ಘೋರ ಘಟನೆಗಳು ಆಗಾಗ್ಗೆ ಸಂಭವಿಸುತ್ತವೆ. ಇವುಗಳಲ್ಲಿ ಪಡೆಯುವ ವಿಜಯವೇ ಸರ್ವೋತ್ಕೃಷ್ಟವಾದದ್ದೆಂದು ಘಂಟಾಘೋಷವಾಗಿ ಸಾರಬಹುದು.

-ದೇಜಗೌ



ಒಬ್ಬ ಮನುಷ್ಯನ ಯೋಗ್ಯತೆಯನ್ನು ಪರೀಕ್ಷಿಸಬೇಕಾದರೆ, ಅವನಿಗೆ ಅಧಿಕಾರ ಕೊಟ್ಟು ನೋಡಬೇಕು

ಅಬ್ರಹಾಂ ಲಿಂಕನ್

ನಾಡೋಜರಿಗೀಗ "ಪದ್ಮಶ್ರೀ" ಕಿರೀಟ

ಪ್ರೊ. ಸಿ. ನಾಗಣ್ಣ
ನಂ. ೩.೧೯೫, ೨೧/ಸಿ. ಮೆಯಿನ್,
ವಿಜಯನಗರ, ೨ನೇ ಹಂತ,
ಮೈಸೂರು.

[ಮೈಸೂರು ಆಕಾಶವಾಣಿ ಸಂದರ್ಶನಕಾರರಾದ ಡಾ. ವಸಂತಕುಮಾರ್ ಪೆರ್ಲ ಅವರು ಮೂಲತಃ ಬರಹಗಾರರು. ಕಾವ್ಯ, ಕತೆ, ಕಾದಂಬರಿ, ಅಂಕಣ, ಸಂಶೋಧನೆ ಮುಂತಾದ ಪ್ರಕಾರಗಳಲ್ಲಿ ಇದುವರೆಗೆ ಒಟ್ಟು ೧೩ ಕೃತಿಗಳನ್ನು ಪ್ರಕಟಿಸಿದ್ದಾರೆ. ಪ್ರಥಮದರ್ಜೆಯಲ್ಲಿ ಕನ್ನಡ ಎಂ.ಎ. ಮುಗಿಸಿದ ನಂತರ "ಸ್ವಾತಂತ್ರ್ಯೋತ್ತರ ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಜಾನಪದ ಒಳನೋಟಗಳು" ಎಂಬ ವಿಷಯವಾಗಿ ಮೈಸೂರು ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ; ಪತ್ರಿಕೋದ್ಯಮದಲ್ಲಿ ಡಿಪ್ಲೊಮಾ ಮಾಡಿದ್ದಾರೆ.

ಸಾಹಿತ್ಯ, ರಂಗಭೂಮಿ, ರೇಡಿಯೋ ಹಾಗೂ ಸಿನಿಮಾ ಕ್ಷೇತ್ರಗಳಲ್ಲಿ ಪರಿಣತರು. ಆಕಾಶವಾಣಿ ಮೂಲಕ ನೂರಾರು ಹೊಸ ಪ್ರತಿಭೆಗಳ ಶೋಧ ಮಾಡಿದ್ದಾರೆ. ತುಳು ಮತ್ತು ಇಂಗ್ಲಿಷ್ ಭಾಷೆಗಳಲ್ಲೂ ಬರೆಯುತ್ತಾರೆ. ಇಂಗ್ಲಿಷ್‌ನ ಕವನ ಸಂಕಲನ ಅಚ್ಚಿಗೆ ಸಿದ್ಧವಾಗಿದೆ. ದೇಶದೆಲ್ಲೆಡೆ ಪ್ರವಾಸ ಮಾಡಿದ ಅನುಭವವಿದೆ. ಹಲವಾರು ಕಮ್ಮಟಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಹಾಗೂ ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಿದ್ದಾರೆ, ಉಪನ್ಯಾಸ ನೀಡಿದ್ದಾರೆ. ಪತ್ರಿಕೋದ್ಯಮದಲ್ಲಿ ಏಳುವರ್ಷ ಹಾಗೂ ಆಕಾಶವಾಣಿಯಲ್ಲಿ ಹನ್ನೆರಡು ವರ್ಷಗಳ ಅನುಭವವಿದೆ. ಇವರ ಕೃತಿಗಳಿಗೆ ರಾಜ್ಯ ಮಟ್ಟದ ಪ್ರಶಸ್ತಿಗಳು ಬಂದಿವೆ. ಪ್ರಸ್ತುತ ಮೈಸೂರು ಆಕಾಶವಾಣಿಯಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಸಂದರ್ಶನವು ದಿನಾಂಕ: ೩.೨.೨೦೦೧ರಂದು ರಾತ್ರಿ ೯.೧೬ಕ್ಕೆ ಮೈಸೂರು ಆಕಾಶವಾಣಿಯಿಂದ ಪ್ರಸಾರವಾಯಿತು. ದೇಜಗೌ ಅವರ ಆಡುಮಾತಿನ ಶೈಲಿಯಲ್ಲಿ ಗ್ರಾಮ್ಯವೂ, ಜಾನಪದೀಯವೂ ಆದ ಒಂದು ಆಪ್ಯಾಯಮಾನವಾದ ಸೊಗಡಿರುತ್ತದೆ; ಹಾಗಾಗಿ ಲಿಪೀಕರಿಸುವಾಗ ಪ್ರೊ. ನಾಗಣ್ಣ ಅದನ್ನು ಶಿಷ್ಟಗೊಳಿಸದೆ ಆ ಶೈಲಿಯ ವೈಶಿಷ್ಟ್ಯಕ್ಕಾಗಿ ಹಾಗೆಯೇ ಉಳಿಸಿಕೊಂಡಿದ್ದಾರೆ. ಇದನ್ನು ಓದುಗರು ಸ್ವಾಗತಿಸುವರೆಂದು ತಿಳಿಯುತ್ತೇವೆ. -ಸಂ]

ಪೆರ್ಲ: ಶ್ರೋತೃಗಳೇ, ಈ ಬಾರಿಯ ಕೇಂದ್ರ ಸರ್ಕಾರದ ಪ್ರತಿಷ್ಠಿತ "ಪದ್ಮಶ್ರೀ ಪ್ರಶಸ್ತಿ" ಯನ್ನು ಪಡೆದ ಪ್ರೊ. ಡಿ. ಜವರೇಗೌಡ ಅವರು ನಮ್ಮ ಮುಂದಿದ್ದಾರೆ; ಭಾಷಾತಜ್ಞರಾಗಿ, ಸಾಹಿತಿಯಾಗಿ, ಆಡಳಿತಗಾರರಾಗಿ, ಕನ್ನಡದಸೇನಾನಿಯಾಗಿ- ಹೀಗೆ ನಮ್ಮ ಪ್ರಸ್ತುತದ ಬದುಕಿನ ಎಲ್ಲ ಮಗ್ಗಲುಗಳಲ್ಲಿ ಸಾರ್ಥಕ ಕೃಷಿಯನ್ನು ಮಾಡಿದ ಪ್ರೊ. ಜವರೇಗೌಡರು ನಮ್ಮ ತಮ್ಮ ಅನ್ನಿಸಿಕೆ ಗಳನ್ನು ಹಂಚಿಕೊಳ್ಳುವುದಕ್ಕೆ ಮತ್ತು ನಮ್ಮ ಶ್ರೋತೃಗಳ ಕೆಲವು ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ನಮ್ಮ ಸ್ಟುಡಿಯೋಕ್ಕೆ ಆಗಮಿಸಿದ್ದಾರೆ. ನಮಸ್ಕಾರ, ಪ್ರೊ. ದೇ. ಜವರೇಗೌಡ ಅವರೆ

ದೇಜಗೌ: ನಮಸ್ಕಾರ

ಪೆರ್ಲ: ಈ ಪ್ರತಿಷ್ಠಿತ "ಪದ್ಮಶ್ರೀ ಪ್ರಶಸ್ತಿ" ಬಂದಿರುವ ಪ್ರಸ್ತುತದಲ್ಲಿ ತಮ್ಮ ತಕ್ಷಣದ ಪ್ರತಿಕ್ರಿಯೆ ಏನು?

ದೇಜಗೌ: ಪ್ರತಿಕ್ರಿಯೆ ಏನೂ ಆಗಲಿಲ್ಲ, ನನಗೇನೂ ಭಾವೋದ್ರೇಕವೂ ಆಗಲಿಲ್ಲ, ಅಥವಾ ಅದರ ಬಗ್ಗೆ ನನಗೆ ಯಾವ ರೋಮಾಂಚನವೂ ಕೂಡ ಆಗಲಿಲ್ಲ. ಒಂದು ಸಾಮಾನ್ಯ ರೀತಿಯಲ್ಲಿ ನಾನು ಅದನ್ನ ಪಡೆದೆ ಅದ್ರೇನೂಂತ ಹೇಳಿದ್ರೆ ಜನತೆಯ ಅಭೀಪ್ಸೆಯಿಂದಾಗಿ ಇದು ಬಂದಿದೆ; ನನಗೆ ಜನತೆಯ ವಿಶ್ವಾಸ ಮುಖ್ಯ ಎಂಬುದು ನನ್ನ ಭಾವನೆ.

ಪೆರ್ಲ: ಈ ರೀತಿಯ ಪ್ರಶಸ್ತಿಗಳು ಮುಂದೆ ಆಯಾ ಕ್ಷೇತ್ರಗಳಲ್ಲಿ ಕೆಲಸ ಮಾಡುವಲ್ಲಿ ನೆರವು

ಕೃಪೆ: ಮೈಸೂರು ಆಕಾಶವಾಣಿ

ಆದಾವು ಅಂತ ತಮ್ಮ ಅನಿಸಿಕೆ?

ದೇಜಗೌ: ಖಂಡಿತವಾಗಿಯೂ ಅವುಗಳಿಂದ ಪ್ರೋತ್ಸಾಹ ದೊರಕಬಹುದು; ಆದ್ರೆ ವಯಸ್ಸಾದ ಮೇಲೆ ಇಂಥ ಪ್ರಶಸ್ತಿಗಳನ್ನು ಕೊಡುವುದಕ್ಕೆ ಬದಲಾಗಿ ಇವನ್ನು ಇನ್ನೂ ಕೆಲಸ ಮಾಡುತ್ತಿರುವವರಿಗೆ ನೀಡಿದರೆ ಅವರಿಂದ ಹೆಚ್ಚು ಕೆಲಸ ನಿರೀಕ್ಷೆ ಮಾಡಬಹುದು ಅಂತ ಕಾಣ್ತದೆ. ವಯಸ್ಸಾದ್ಮೇಲೆ ಕೊಟ್ರೆ ಅಷ್ಟೊತ್ಗಾಗ್ಲೆ ಇದರಿಂದ ಏನಾಗಬೇಕಾಗಿದೆ ಎಂಬ ನಿರ್ಲಿಪ್ತತೆ ಬಂದು ಬಿಡ್ತದೆ; ಆದ್ದರಿಂದ ಅರ್ಹರಾದವರಿಗೆ ಆದಷ್ಟು ಜಾಗ್ರತೆ ಕೊಟ್ರೆ ಒಳ್ಳೇದು ಅಂತ ನನ್ನ ಭಾವನೆ.

ಪರ್ಲ: ಸರ್, ಈಗ ತಮ್ಮ ಸಾಹಿತ್ಯದ ಕೃಷಿಯ ಕಡೆ ಸ್ವಲ್ಪ ಹೊರಳೋಣ. ಸಾಹಿತಿಗಳಾಗಿ, ಆಡಳಿತಗಾರರಾಗಿ ನೀವು ಹೆಸರು ಮಾಡಿದವರು. ಈ ಸಾಹಿತ್ಯದ ವ್ಯವಸಾಯ ನಿಮ್ಮ ಆಡಳಿತಕ್ಕೆ ಯಾವ ರೀತಿ ನೆರವು ಕೊಡ್ತು ಅನ್ನೋದನ್ನ ಹೇಳ್ತೀರಾ?

ದೇಜಗೌ: ಆಡಳಿತದಿಂದ ಸಾಹಿತ್ಯಕ್ಕೆ ಸ್ವಲ್ಪ ತೊಂದ್ರೆಯೇನೋ ಆಗಿರ್ತದೆ; ಸಾಹಿತ್ಯದ ಕಡೆ ಎಲ್ಲಾ ಗಮನವನ್ನೂ ಕೂಡ ಕೊಡ್ಲಿಕ್ಕಾಗಲ್ಲ. ಆದ್ರೂ ಕೂಡ ಒಂದು ಮಾತು ಮಾತ್ರ ನಿಜ: ನಾನು ಪ್ರಾಮಾಣಿಕವಾಗಿ, ಶ್ರದ್ಧಾಪೂರ್ವಕ ವಾಗಿ ಕೆಲಸ ಮಾಡಬೇಕು ಎಂಬ ತಕ್ಕಂಥ ಭಾವನೆ ಸಾಹಿತ್ಯದಿಂದ ಉಂಟಾಗ್ತದೆ ಎನ್ನುವು ದನ್ನು ನಾನು ಬಲ್ಲೆ. ಏಕೆಂದ್ರೆ, ಸಾಹಿತ್ಯದಿಂದ ನಮಗೆ ಅನೇಕ ಪ್ರಯೋಜನಗಳು ಆಗ್ತವೆ. ಅದ್ರಿಂದ ಆತ್ಮೋದ್ಧಾರವೂ ಕೂಡ ಆಗ್ತದೆ. ಆ ಸಂದರ್ಭದಲ್ಲಿ ನಾವು ಆಡಳಿತವನ್ನ ಚೆನ್ನಾಗಿ ನಡೆಸಬೇಕು, ಕರ್ತವ್ಯ ಪ್ರಜ್ಞೆಯಿಂದ ನಡೆಸಬೇಕು ಎಂಬ ತಕ್ಕಂಥ ಭಾವನೆ ಬರ್ತಕ್ಕಂಥದ್ದು ನಿಜ. ಇದಕ್ಕೆ ಉದಾಹರಣೆ ಬೇಕಾದ್ರೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅಂತ ಇದ್ರು; ಅವರು ಒಳ್ಳೆ ಆಡಳಿತಗಾರರು; ಆದ್ರೆ ಅವರ ಜೀವನ ಬಹಳ ಶುದ್ಧವಾದ್ದು, ಬಹಳ ಹಸನಾದದ್ದು. ಸಾಹಿತ್ಯವೂ ಕೂಡ ಅಷ್ಟೇ ಹಸನಾದದ್ದು. ಅದ್ರಿಂದಾಗಿ ಒಂದು ಮಾತು ಮಾತ್ರ ನಿಜ; ಸಾಹಿತ್ಯಕ್ಕೆ ಆಡಳಿತದಿಂದ ತೊಂದ್ರೆ ಆಗ್ತದೆ. ಆಡಳಿತವನ್ನ ಮಾಡ್ಕೊಂಡು ಸಾಹಿತ್ಯವನ್ನು ರಚನೆ ಮಾಡ್ಬೇಕು ಅಂತ ಹೇಳಿದ್ರೆ ಸ್ವಲ್ಪ ಕಷ್ಟವೇ ಆಗ್ತದೆ. ಅದಕ್ಕೆ ನಾನು ಒಂದು ಉಪಾಯ ಹುಡಿಕ್ಕೊಂಡಿದ್ದೆ: ಬೆಳಗೆ ಜಾಗ್ರತೆ ಎದ್ದು ಬೆಳಗಿನ ನನ್ನ ಕರ್ಮಗಳನ್ನೆಲ್ಲ ಮುಗಿಸಿ ಬರಹಕ್ಕೆ ಕುಳಿತುಬಿಡ್ತಿದ್ದೆ; ಆಮೇಲೆ ನಾನು ಆಫೀಸು ಕಡೆಗೆ ಹೋಗ್ತಿದ್ದೆ. ತಿರುಗಿ ರಾತ್ರಿ ಇನ್ನೇನೂ ಮಾಡಕ್ಕಾಗ್ತಿರ್ಲಿಲ್ಲ, ಆಗ ಒಂದೆರಡು ಗಂಟೆ ಏನೊ ಬರೆಯಬಹುದಾಗಿತ್ತಷ್ಟೇ ಹೊರ್ತಾಗಿ ಬೇರೆ ಹೆಚ್ಗೆ ಬರೆಯಕ್ಕಾಗ್ತಿರ್ಲಿಲ್ಲ. ಆದ್ರೆ ಒಂದು; ಆ ಸಾಹಿತ್ಯದ ಜ್ಞಾನದಿಂದಾಗಿ ಪ್ರಾಯಶಃ, ಇದು ಅಹಂಕಾರದ ಮಾತಲ್ಲ, ಆಡಳಿತಕ್ಕೆ ಒಂದು ರೀತಿಯ ಹಸನು ಬಂತು ಅಂತ ನಾನು ಭಾವಿಸಿದ್ದೇನೆ.

ಪರ್ಲ: ಈವತ್ತಿನ ಪರಿಸ್ಥಿತಿಯಲ್ಲಿ ನಮ್ಮ ದೇಶೀಯ ಭಾಷೆಗಳು- ಕನ್ನಡ ಅಂತ ನಾವು ಹೇಳಬೇಕಾಗಿಲ್ಲ -ದೇಶೀಯ ಭಾಷೆಗಳು ಒಂದು ಸಂಧಿಘಟ್ಟದಲ್ಲಿ ನಿಂತ ಹಾಗೆ ಕಾಣಿಸ್ತಾಯಿದೆ ಅನ್ನುವ ಒಂದು ಅಭಿಪ್ರಾಯವನ್ನ ನಾವು ಕೇಳ್ತಿದ್ದೀವಿ. ಇದಕ್ಕೆ ಯಾವ ರೀತಿಯ ಕಾರಣಗಳನ್ನು ತಾವು ವಿಶ್ಲೇಷಿಸ್ತೀರಿ?

ದೇಜಗೌ : ಕನ್ನಡದ ದೃಷ್ಟಿಯಿಂದ... ಸಾಹಿತ್ಯದ ಹರಿವು ನಿಂತಿಲ್ಲ ಅಂತ ನನ್ನ ಭಾವನೆ. ಅದು ನಿಂತ್ರು ಕೂಡ ಆಶ್ಚರ್ಯವಲ್ಲ, ಪ್ರಕೃತಿ ಸಹಜವಾದದ್ದು ಅಂದ್ಕೊಂಡಿದ್ದೇನೆ. ಏಕೆ ಅಂತ ಅಂದ್ರೆ - ಮೊದ್ಲು ಪಂಪ ಬಂದ, ಆನಂತರ ನೂರಿನ್ನೂರು ವರ್ಷಗಳ ನಂತರ (ಶರಣ ಸಾಹಿತ್ಯ), ವಚನ ಸಾಹಿತ್ಯ ಬಂತು, ಆಮೇಲೆ ದಾಸ ಸಾಹಿತ್ಯ, ಆಮೇಲೆ ಕುಮಾರವ್ಯಾಸ ಬಂದ- ಆಮೇಲೆ ರತ್ನಾಕರವರ್ಣಿ- ಹೀಗೆ ಮಧ್ಯೆ ನೂರಿನ್ನೂರು ವರ್ಷಗಳ ಹಿಗ್ಗ ಇದ್ದೇ ಇರ್ತದೆ. ಆಮೇಲೆ ರತ್ನಾಕರವರ್ಣಿಯ ನಂತರ ಬಹಳ ದಿನಗಳ ತನಕ ಕನ್ನಡ ಸಾಹಿತ್ಯ ಅಷ್ಟು ಫಲವತ್ತಾಗಿ ಇರ್ಲಿಲ್ಲ. ಆಮೇಲೆ ತಿರುಗಿ ಹತ್ತೊಂಭತ್ತನೇ ಶತಮಾನದ ಕೊನೆಯ ಭಾಗದಲ್ಲಿ ಮತ್ತು ಇಪ್ಪತ್ತನೇ ಶತಮಾನದಲ್ಲಿ ಕನ್ನಡಕ್ಕೆ ಸಾಕಷ್ಟು ಪ್ರೋತ್ಸಾಹ ಸಿಕ್ಕು, ಚೆನ್ನಾಗಿ ಬೆಳೀತು. ಪ್ರಾಯಶಃ ಸ್ವಾತಂತ್ರ್ಯ ಸಂಗ್ರಾಮಾನೂ ಕೂಡ ಅದಕ್ಕೆ ಪ್ರಚೋದನೆ ನೀಡಿರಬೇಕು ಅಂತ ಕಾಣ್ತದೆ. ಒಂದೇ ಕಾಲದಲ್ಲಿ, ಅತ್ಯಂತ ಆಶ್ಚರ್ಯಕರವಾದ ವಿಷಯ ಅಂತ ಹೇಳಿದ್ರೆ, ಕನ್ನಡ ಸಾಹಿತ್ಯದ ಸುದೀರ್ಘ ಇತಿಹಾಸದಲ್ಲಿ ಇಷ್ಟೊಂದು ಸಾಹಿತ್ಯ ಹಿಂದೆ ಎಂದೂ ಬಂದಿರ್ಲಿಲ್ಲ; ಇಪ್ಪತ್ತನೇ ಶತಮಾನದಲ್ಲಿ ಏನು ಬಂತು ಆ ಸಾಹಿತ್ಯ-ಅದು ವೈವಿಧ್ಯ ತೆಗೆದುಕೊಳ್ಳಿ, ಅಥವಾ ಘನತೆ ತೆಗೆದುಕೊಳ್ಳಿ, ಎಲ್ಲ ದೃಷ್ಟಿ ಯಿಂದಲೂ ಕೂಡ; ಆ ಸಾಹಿತ್ಯ ಹೊರವಾಗಿ ಬೆಳೀತು ಅನ್ನುವಂಥಾದ್ದು ಒಂದು ಸಂತೋಷದ, ಸಂಭ್ರಮದ ಹಾಗೂ ತೃಪ್ತಿಯ ವಿಷಯ. ಈಗ್ಲೂ ಕೂಡ ನನಗೆ ತಿಳಿದ ಮಟ್ಟಿಗೆ ಅದು ನಿಂತಿಲ್ಲ. ಅದರಲ್ಲೂ ಕೂಡ ಸ್ತ್ರೀ ಸಾಹಿತ್ಯ ಬಹಳ ಹೊರವಾಗಿ ಬೆಳೀತಾಯಿದೆ; ಈಗ ತಾನೆ ಸ್ತ್ರೀಯರು ತಮ್ಮತನವನ್ನು ತಾವು ಕಂಡುಕೊಂಡಿದ್ದಾರೆ. ಪುರುಷರೂ ಕೂಡ, ಏನಾಗಿದೆ, ಅವರಲ್ಲಿ ಒಂದು ವ್ಯಾಮೋಹ ಬಂದಿದೆ; ಏನು ವ್ಯಾಮೋಹ? ಮಹಾಕಾವ್ಯ ಬರೀಬೇಕು ಅಂತ ಈವತ್ತಾನೇ ಪ್ರಾಯಶಃ ನೀವು ಪೇಪರ್‌ನಲ್ಲಿ ನೋಡಿರಬಹುದು: ವೀರಪ್ಪ ಮೊಯ್ಲಿ ಅವರೂ ಕೂಡ ಒಂದು ಮಹಾಕಾವ್ಯ ಬರೀಲಿಕ್ಕೆ ಹೊರ್ಟಿದ್ದಾರಂತೆ, ಒಂದು ಭಾಗ ಆಗಿದೆಯಂತೆ. ಸುಮಾರು ಕನ್ನಡದಲ್ಲಿ ೧೬-೧೮ ಮಹಾಕಾವ್ಯಗಳು ಇಲ್ಲಿವರೆಗೆ ಬಂದಿವೆ, ಬರ್ತಾಯಿವೆ. ಪ್ರಾಯಶಃ ಇನ್ನೆರಡು ಮೂರು ವರ್ಷಗಳಲ್ಲಿ ಇನ್ನೂ ನಾಲ್ಕಾರು ಮಹಾಕಾವ್ಯಗಳು ಬರ್ತಕ್ಕಂಥ ಸಂದರ್ಭ ಇದೆ. ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ ಸಾಹಿತ್ಯದಲ್ಲಿ ಏನೇನು ಆಯಾಮ ಗಳು ಮುಗಿದು ಹೋದವೋ ಅವೆಲ್ಲವನ್ನೂ ಕೂಡ ನಾವಿಲ್ಲಿ ಕಂಡಿದ್ದೇವೆ; ಅದು ನವೋದಯ ಆಗಬಹುದು, ನವ್ಯ ಆಗಬಹುದು, ಪ್ರಗತಿಶೀಲ ಆಗಬಹುದು, ದಲಿತ- ಬಂಡಾಯ -ಆಗಬಹುದು. ಇದು ಸಾಕಷ್ಟು ನಮ್ಮಲ್ಲಿ ಬಂದಿದೆ ಅನ್ನುವು ದನ್ನು ನಾವು ಗಮನಿಸಬೇಕು.

ಪೆರ್ಲ : ಅಂದ್ರೆ ಯಾವುದೋ ಒಂದು ಕಾಲ ಘಟ್ಟದಲ್ಲಿ ಅದು ನಿಂತ ಹಾಗೆ ನಮಗೆ ಕಾಣಿ ಸಿದ್ರೂ ಕೂಡ ಆನಂತರ ಇದ್ದಕ್ಕಿದ್ದ ಹಾಗೆಯೇ ಅದಕ್ಕೆ ಹರಿವಿನ ಪಾತ್ರ ದೊರಕ್ತದೆ ಅನ್ನುವುದು ತಮ್ಮ ಅಭಿಪ್ರಾಯ?

ದೇಜಗೌ : ಖಂಡಿತವಾಗಿಯೂ ಕೂಡ. ಅದರಲ್ಲೂ ಕನ್ನಡದಲ್ಲಿ ಪ್ರಾಯಶ:- ಜಗತ್ತಿನ ಸಾಹಿತ್ಯ

ನಮಗೊತ್ತಿಲ್ಲ ಅಷ್ಟು; ಆದ್ರೂ ಇಂಗ್ಲಿಷ್ ಮೊದಲಾದ ಸಾಹಿತ್ಯವನ್ನು ನೋಡಿದ್ದೇವೆ- ಅವಕ್ಕೆ ಕಡಿಮೆಯಿಲ್ಲದ ರೀತಿಯಲ್ಲಿ ಅನೇಕ ಪ್ರಸ್ಥಾನಗಳು ಕನ್ನಡ ಸಾಹಿತ್ಯದಲ್ಲಿ ಬಂದಿವೆ.

ಪೆರ್ಲ: ಈಗ ಜಾಗತೀಕರಣದ ಮಾತು ಎಲ್ಲ ಕಡೆ ಕೇಳಿ ಬರ್ತಾಯಿದೆ. ಈ ಒಂದು ಪರಿಸ್ಥಿತಿಯಲ್ಲಿ ಕನ್ನಡ ಭಾಷೆ ಇರಬೌದು, ಅಥವಾ ಸಾಹಿತ್ಯ ಇರಬೌದು -ಇದರ ಮುಂದಿನ ಸ್ಥಿತಿಗತಿಯ ಬಗ್ಗೆ- ಏಕೆಂದ್ರೆ ಇದೊಂದು ಸಂಧಿಘಟ್ಟ ಅನ್ನುವುದನ್ನ ಎಲ್ರೂ ಒಪ್ಕೊತಾಯಿದ್ದಾರೆ -ತಮ್ಮ ಅಭಿಪ್ರಾಯ ಏನು?

ದೇಜಗೌ : ಈಗ ಅನೇಕರು ಹೆದರಿದ್ದಾರೆ; ಕೃಷಿ ಕ್ಷೇತ್ರದಲ್ಲಿ ಜನ ಹೆದರಿದ್ದಾರೆ; ಆರ್ಥಿಕ ಕ್ಷೇತ್ರದಲ್ಲಿ ಜನ ಹೆದರಿದ್ದಾರೆ; ಹಾಗೆಯೇ ಸಾಹಿತ್ಯ ಕ್ಷೇತ್ರಕ್ಕೂ ಅದರ ಒಂದು ಹಾನಿ ತಟ್ಟಬಹುದು ಎಂಬತಕ್ಕಂಥ ಭಾವನೆ ಇದೆ. ಏನು ಜಾಗತೀಕರಣವಾದಾಗ ಯಾವುದು ಜಗತ್ತಿನಲ್ಲಿ ಅತ್ಯಂತ ಪ್ರಭಾವಶಾಲಿಯಾಗದೆಯೋ ಆ ಭಾಷೆಗೆ ಮಾನ್ಯತೆ ದೊರೀತದೆ, ಅದೇ ಎಲ್ಲೆಲ್ಲೂ ಕೂಡ ವಿಜೃಂಭಿಸ್ತದೆ ಎಂಬತಕ್ಕಂಥ ಭಯ ಇದೆ. ಪ್ರಾಯಶಃ ಭಾಷಾಕ್ಷೇತ್ರಕ್ಕೆ ಆ ಭಯ ಇರಲಾರ್ದೇನೋ ಅಂತ ನನಗೆ ಅನ್ನಿಸ್ತದೆ. ಏಕೆಂದ್ರೆ ಇದನ್ನ ಬಿಡಲಿಕ್ಕೆ ಸಾಧ್ಯವಿಲ್ಲ, ಇದನ್ನ ಬಿಟ್ರೆ ಅಂತ ಹೇಳಿದ್ರೆ ಸಂಸ್ಕೃತಿಯೇ ಹೋಯ್ತು. ಪ್ರಾದೇಶಿಕ ಸಂಸ್ಕೃತಿ ಆಗಬಹುದು, ಅಥವಾ ರಾಷ್ಟ್ರೀಯ ಸಂಸ್ಕೃತಿ ಆಗಬಹುದು. ಅದು ಹೋಯ್ತು. ಮೆಕಾಲೆ ಒಂದು ಮಾತನ್ನ ಹೇಳ್ತಾನೆ: ಒಂದು ಸಂಸ್ಕೃತಿಯನ್ನ ಕೊಲ್ಲಬೇಕಾಗಿದ್ರೆ ಬೇರೆ ಒಂದು ಭಾಷೆಯನ್ನ ಹಾಳು ಮಾಡು ಅಂತ. ಆ ಭಾಷೆಯನ್ನ ಹಾಳು ಮಾಡು ಅಂತ. ಅದಕ್ಕೇ ಅವನು ಲೆಕ್ಕ ಹಾಕಿದ್ದು: ಆದಷ್ಟೂ ಜಾಗ್ರತೆ ಇಂಗ್ಲಿಷ್ ಭಾಷೆಯನ್ನ ಎಲ್ಲರಿಗೂ ಕಲಿಸಿದ ಪಕ್ಷದಲ್ಲಿ ಇಲ್ಲಿನ ಸಂಸ್ಕೃತಿ ಹೋಗ್ತದೆ; ಇಲ್ಲಿನ ಸಂಸ್ಕೃತಿ ಹೋದ ಪಕ್ಷದಲ್ಲಿ ಚಿರಂತನವಾಗಿ ನಾವು ಆಳಬಹುದು ಎಂಬತಕ್ಕಂಥ ದೃಷ್ಟಿ ಅವನಲ್ಲಿತ್ತು. ಆದ್ರಿಂದ ಜಾಗತೀಕರಣದಿಂದ ಹಿಂದಿಗಾಗಲೀ, ಕನ್ನಡಕ್ಕಾಗಲೀ, ಒಟ್ಟಿನಲ್ಲಿ, ಈ ಭಾಷೆಗಳಿಗೆ ಹಾನಿ ತಟ್ಟುವ ಪಕ್ಷಕ್ಕೆ ಆಗ ಏನೂ ಹೇಳ್ಲಿಕ್ಕಾಗೋಲ್ಲ: ಅದು ನಷ್ಟ, ದೊಡ್ಡ ನಷ್ಟ; ದೇಶದ ಅವನತಿಯೂ ಕೂಡ ಅದ್ರಿಂದಉಂಟಾಗ್ತದೆ ಅಂತ ನಾನು ಅಂದ್ಕೊಂಡಿದ್ದೇನೆ. ಅಷ್ಟು ದೂರ ಹೋಗಲಾರ್ದು. ಈಗ್ಲೇನೇ ಆರ್ಥಿಕ ಕ್ಷೇತ್ರದಲ್ಲಿ ಅನೇಕ ಪ್ರಶ್ನೆಗಳು ಹೊರಟಿವೆ; ಸವಾಲುಗಳು ಹೊರಟಿವೆ ಈಗಾಗ್ಲೇನೆ: ಇದು ಸರಿಯೇ? ಈಗ ಆರು ವರ್ಷಕ್ಕೊಮ್ಮೆನೋ ನಿಯಮಗಳನ್ನ ಬದಲಾಯಿಸುವ ಕ್ರಮ ಸರಿಯೆ? ಎಂಬ ಪ್ರಶ್ನೆ. ಅಂದ ಮೇಲೆ ಅಲ್ಲಿಯೂ ಭಯ ಇದೆ; ಸಾಹಿತ್ಯ ಕ್ಷೇತ್ರಕ್ಕೂ, ಭಾಷಾ ಕ್ಷೇತ್ರಕ್ಕೂ ಸ್ವಲ್ಪ ಭಯ ಇದೆ, ಇಲ್ಲ ಅಂತ ನಾನು ಹೇಳೋದಿಲ್ಲ. ಇನ್‌ಫರ್ಮೇಶನ್ ಟೆಕ್ನಾಲಜಿ ಇರುವುದ್ರಿಂದ ಈ ಭಾಷೆಗಳು ಏಕೆ ಬೇಕು ಎಂಬ ಭಾವನೆ ಇದ್ದ ಹಾಗೆ ಕಾಣ್ತದೆ.

ಪೆರ್ಲ: ಭಾಷಾ ಕ್ಷೇತ್ರದಲ್ಲಿ ನೀವು ಸಾಕಷ್ಟು ದುಡಿದವರು; ಈಗ ಮಾಹಿತಿ ತಂತ್ರಜ್ಞಾನದ ವಿಷಯವನ್ನೂ ಕೂಡ ಹೇಳಿದ್ರಿ. ಈ ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲಿ, ಅಂದ್ರೆ ಇಂಟರ್‌ನೆಟ್ ಇರಬಹುದು- ಅಂದ್ರೆ ನಮ್ಮ ಆಧುನಿಕ ಸಂಪರ್ಕವ್ಯವಸ್ಥೆ ಇದೆಯಲ್ಲ, ಇದಕ್ಕೆ ನಮ್ಮ ಭಾಷೆಯನ್ನ ಹೇಗೆ ಒಗ್ಗಿಸಿಕೊಳ್ಳ ಬಹುದು ಅಂತ ತಮ್ಮ ಅಭಿಪ್ರಾಯ?

ದೇಜಗೌ : ಅದನ್ನ ತಂತ್ರಜ್ಞರು ಹೇಳಬೇಕು ಅಂತ ಕಾಣ್ತದೆ. ಒಗ್ಗಿಸ್ಕೋಬೇಕು, ಆದ್ರೆ ಅಸಾಧ್ಯ ವಲ್ಲ ಅಂತ ನನ್ನ ಭಾವನೆ. ಈವತ್ತು ನಮಗೆ ಗೊತ್ತಿರುವ ಹಾಗೆ ಇಂಟರ್‌ನೆಟ್ ಮುಖಾಂತರ ಎಷ್ಟು ದೂರ ಬೇಕಾದ್ರೂ ಕನ್ನಡದಲ್ಲಿ ಮೆಸ್ಸೇಜ್ ಕಳಿಸಬಹುದು. ಆದ್ರಿಂದ ಈ ಇನ್ ಫರ್‌ಮೇಶನ್ ಟೆಕ್ನಾಲಜಿ ಏನಿದೆ, ಅದೆಲ್ಲವನ್ನೂ ಕೂಡ ಬಳಸಿ ಕೊಳ್ಳಬೇಕು. ಆ ಕಡೆಪ್ರಯತ್ನ ಈಗಾಗ್ಲೇ ನಡೀತಾಯಿದೆ ಅನ್ನೋದನ್ನ ನಾನು ಬಲ್ಲೆ.

ಪೆರ್ಲ: ಸರ್, ಈಗ ನಿಮ್ಮ ಗದ್ಯಶೈಲಿಯ ಬಗ್ಗೆ ಒಂದು ಮಾತು. ಇವರು ಬಹಳ ಸುಂದರ ವಾದ ಶೈಲಿಯನ್ನ ರೂಢಿಸಿಕೊಂಡಿದ್ದಾರೆ ಎಂದು ಓದುಗರು ಹೇಳುವ ಮಾತನ್ನ ನಾವು ಎಲ್ಲ ಬಲ್ಲೆವು. ಇಂಥ ಒಂದು ಗದ್ಯ ಶೈಲಿಯನ್ನ ತಮಗೆ ರೂಪಿಸಿಕೊಳ್ಳು ವುದಕ್ಕೆ ಹೇಗೆ ಸಾಧ್ಯವಾಯಿತು?

ದೇಜಗೌ : ನಾನು ಮೊದ್ಲು ಕುವೆಂಪು ಅವರ ಸಾಹಿತ್ಯವನ್ನ ಓದಿ ಬೆರಗಾದೆ. ಆನಂತರ ಡಿ. ವಿ. ಜಿ. ಮತ್ತು ಎ. ಆರ್. ಕೃಷ್ಣಶಾಸ್ತ್ರಿಗಳು - ಇವರ ಶೈಲಿಯನ್ನ ನಾನು ಬಹಳ ಮೆಚ್ಚಿಕೊಂಡಿದ್ದೆ. ಸಾಮಾನ್ಯವಾಗಿ ಮಾಸ್ತಿಯವರ ಶೈಲಿಯನ್ನ ಯಾರೂ ಒಪ್ಪೊಲ್ಲ, ಅನೇಕರು ಒಪ್ಪೊಲ್ಲ. ಆದ್ರೆ ನಾನೊಪ್ಕೊಂಡಿದ್ದೀನಿ. ಏಕೆಂದ್ರೆ, ಅತ್ಯಂತ ಸರಳವಾಗಿ, ಅಷ್ಟೇ ಅರ್ಥಪೂರ್ಣ ವಾಗಿ ಬರೀತಕ್ಕಂಥಾದ್ದು ಅವರೊಬ್ಬರಿಗೇ ಸಿದ್ಧಿಸಿರತಕ್ಕಂಥಾದ್ದು. ನನ್ನ ಶೈಲಿ ನಾನಂದು ಕೊಂಡಿರುವಂಥಾದ್ದು ಈ ಎಲ್ಲ ಶೈಲಿಗಳ ರಸಾಯನ ಅಂತ. ಏಕೆ ಅಂತ ಅಂದ್ರೆ ನಾನು ಕುವೆಂಪು ಶೈಲಿಯನ್ನು ಅನುಕರಣ ಮಾಡುವುದಕ್ಕೆ ಹೋಗಿ ನನಗಾ ಗಲಿಲ್ಲ; ಡಿ. ವಿ. ಜಿ. ವಿಷಯದಲ್ಲೂ ಹಾಗೇ ಆಯ್ತು. ಎ. ಆರ್. ಕೃಷ್ಣಶಾಸ್ತ್ರಿಗಳ ಶೈಲಿ ನನಗೆ ಬಹಳ ಮೆಚ್ಚಿಗೆಯಾದದ್ದು. ಹಾಗೇ ಮಾಸ್ತಿ ಯವರು. ಹೀಗೆ ಈ ನಾಲ್ವರಶೈಲಿಯ ಒಂದು ಸಮ್ಮಿಲನವನ್ನ ನನ್ನ ಶೈಲಿಯಲ್ಲಿ ನಾನು ಕಾಣ್ತಾಯಿದ್ದೇನೆ. ಅಂದಮೇಲೆ, ಯಾರೇ ಆದ್ರೂ ಬೇರೊಬ್ಬರ ಶೈಲಿಯನ್ನ ಅನುಕರಣ ಮಾಡ್ತಾ ಅಲ್ಲಿಗೇ ನಿಲ್ಲುವುದಕ್ಕೆ ಸಾಧ್ಯವಿಲ್ಲ; ತನ್ನ ಶೈಲಿಯನ್ನ ತಾನು ಬೆಳೆಸಿಕೊಳ್ಳಲೇಬೇಕು.

ಪೆರ್ಲ: ತನ್ನ ಅಸ್ತಿತ್ವವನ್ನ ಕಾಪಾಡಿಕೊಳ್ಳಬೇಕು.

ದೇಜಗೌ : ಕಾಪಾಡಿಕೊಳ್ಳಲೇಬೇಕು. ಈ ಎಲ್ಲ ಶೈಲಿಗಳನ್ನ ನೋಡಿದ ನಂತರ, ಖಂಡಿತವಾಗಿಯೂ ನನ್ನದೇ ಒಂದು ಶೈಲಿಯನ್ನ ನಾನು ರೂಪಿಸಿಕೊಂಡಿದ್ದೇನೆ ಅಂತ ನಾನು ಭಾವಿಸಿದ್ದೇನೆ.

ಪೆರ್ಲ: ಈಗ ಸದ್ಯ ನಿಮ್ಮ ಹೊಸ ಬರವಣಿಗೆ ಏನು? ಆಮೇಲೆ ನಿಮ್ಮ ಮುಂದಿರುವ ಹೊಸಯೋಜನೆಗಳ ಬಗ್ಗೆ ಕೆಲವು ಮಾತುಗಳನ್ನ ಹೇಳ್ತೀರಾ?

ದೇಜಗೌ : ನಾನು ಮೊದ್ಲಿಂದ್ಲೂ ಈ ಶಿಕ್ಷಣ ಕ್ಷೇತ್ರದಲ್ಲಿ ಬಹಳ ಆಸಕ್ತಿ ಇರ್ತಕ್ಕಂಥವನು. ಅದರ್ಲೂ ಕೂಡ ಸಾಮಾನ್ಯರ ಮನೆತನಗಳಿಂದ ಬಂದಿರತಕ್ಕಂಥ, ನಿರಕ್ಷರಿಗಳ ಮನೆಯಿಂದ ಬಂದಿರ ತಕ್ಕಂಥ ಮಕ್ಕಳಿಗೆ ಸರಿಯಾದ ವಿದ್ಯೆಯನ್ನ ಕೊಡಬೇಕು ಎಂಬತಕ್ಕಂಥವನು ನಾನು. ಅದಕ್ಕೋಸ್ಕರವಾಗಿ ನಾನು ಕುವೆಂಪು ಅವರ ಹೆಸರಿನಲ್ಲಿ ಒಂದು ಟ್ರಸ್ಟನ್ನೂ ಕೂಡ ನಾನು ಮಾಡಿ ಬೇರೆ ಬೇರೆ ಕಡೆ ಪ್ರವೇಶ ಸಿಕ್ಕದ ಮಕ್ಕಳನ್ನ ಮಾತ್ರವೇ ನಾನು ಸೇರಿಸ್ಕೊಂಡು ಅವರಿಗೆ ತರಬೇತನ್ನ ಕೊಡತಕ್ಕಂಥದ್ದು ಒಂದು ವಿದ್ಯಾಸಂಸ್ಥೆ ಸ್ಥಾಪಿಸಿ ದ್ದೇನೆ. ಅನೇಕರಿಗೆ ಗೊತ್ತಿರುವ ಹಾಗೆ ನಾನು ಫಿಕ್ಷನ್ ಕಡೆಗೆ ಹೆಚ್ಚು ಗಮನ ಕೊಡಲಿಲ್ಲ;

ಕಥೆ, ಕಾದಂಬರಿಯ ಕಡೆ ಹೆಚ್ಚು ಗಮನ ಕೊಡಲಿಲ್ಲ. ನನ್ನ ಕ್ಷೇತ್ರ ವಿಶೇಷವಾಗಿ ಪ್ರಬಂಧ, ಜೀವನ ಚರಿತ್ರೆ, ವಿಮರ್ಶೆ, ಸಂಶೋಧನೆ- ಆಮೇಲೆ ನನಗನ್ನಿಸ್ತು ಬರ್ತಾ ಬರ್ತಾ- ನಾನೇಕೆ ಕಥೆಗಳನ್ನ ಬರೆಯಬಾರದು ಅಂತ. ಈಗ ಕೇವಲ ಐದಾರು ತಿಂಗಳ ಕಾಲದಲ್ಲಿ ಅನೇಕ ಕಥೆಗಳನ್ನ ಬರೆದು ಅವು ಅಚ್ಚಾಗ್ತಾಯಿವೆ.

ಪೆರ್ಲ: ಸೃಜನ ಕ್ಷೇತ್ರಕ್ಕೂ ಕಾಲಿಟ್ಟದ್ದೀರಿ?

ದೇಜಗೌ: ಕಾಲಿಟ್ಟಿದ್ದೀನಿ. ಆದ್ರೆ ಜೀವನ ಚರಿತ್ರೆ ಸೃಜನ ಕ್ಷೇತ್ರದಿಂದ ದೂರ ಇದೆ ಅಂತ ನಾನಂದು ಕೊಂಡಿಲ್ಲ.

ಪೆರ್ಲ: ಸರಿ

ದೇಜಗೌ: ಅನೇಕರು ಹಾಗಂದು ಕೊಂಡಿದ್ದಾರೆ; ನಾನಂದು ಕೊಂಡಿಲ್ಲ. ಕಾದಂಬರಿಯಷ್ಟು ಸುಲಭವಲ್ಲ ಜೀವನ ಚರಿತ್ರೆ ಬರೀ ತಕ್ಕಂಥಾದ್ದು. ಕಾದಂಬರಿ ಫಿಕ್ಷನ್ ಆದ್ರಿಂದ ನೀವು ಏನು ಬರೆದ್ರೂ ಆಗ್ತದೆ. ಆದ್ರೆ ಜೀವನ ಚರಿತ್ರೆ ಹಾಗಲ್ಲ.

ಪೆರ್ಲ: ವಸ್ತುನಿಷ್ಠತೆ ಇರಬೇಕ್ತಾದೆ

ದೇಜಗೌ: ವಸ್ತುನಿಷ್ಠತೆ ಅತ್ಯಾವಶ್ಯಕ; ಯಥಾರ್ಥತೆ ಬಹಳ ಮುಖ್ಯ; ಜೊತೆಗೆ ಸಾಹಿತ್ಯದ ಲೇಪನ ವನ್ನೂ ಅದಕ್ಕೆ ಕೊಡಬೇಕಾಗ್ತದೆ. ಆಮೇಲೆ ಸಂಶೋಧನೆ - ಒಂದು ಜೀವನ ಚರಿತ್ರೆ ಬರೀಬೇಕಾಗಿದ್ರೆ, ಒಂದು ವರ್ಷಕಾಲ ಅಥವಾ ಎರಡುವರ್ಷಗಳವರೆಗೆ ಸಂಶೋಧನೆ ನಡೆಸಬೇಕು. ಆದ್ರಿಂದ ನಾನು "ಜೀವನಚರಿತ್ರೆ"ಗೆ ಸ್ವಲ್ಪ ವಿಶೇಷ ಗಮನವನ್ನು ಕೊಟ್ಟದ್ದುಂಟು. ಸುಮಾರು ಇಪ್ಪತ್ತಕ್ಕೆ ಮೇಲ್ಪಟ್ಟು ಜೀವನ ಚರಿತ್ರೆಗಳನ್ನು ನಾನು ಬರೆದಿದ್ದೀನಿ. ಈಗ ಸದ್ಯಕ್ಕೆ ಅವೆಲ್ಲ ನಿಲ್ಲಿಸಿದ್ದೀನಿ. ಆ ಮೇಲೆ, ಭಾಷಾಂತರ. ನನ್ನ ಅಭಿಪ್ರಾಯದಲ್ಲಿ ಒಂದು ಭಾಷೆ ಬೆಳೀಬೇಕಾಗಿದ್ರೆ, ಭಾಷಾಂತರ ಅತ್ಯಾವಶ್ಯಕ; ಅದು ನನ್ನ ಅಭಿಪ್ರಾಯ, ಸ್ವಂತ ಅಭಿಪ್ರಾಯ. ಯಾವ ಭಾಷೆ ತೆಗೆದುಕೊಳ್ಳಿ; ಇಂಗ್ಲಿಷ್ ಉದಾಹರಣೆಗೆ - ಗ್ರೀಕ್ ಮತ್ತು ರೋಮನ್ ಭಾಷೆಗಳಿಂದ ಅವರು ಭಾಷಾಂತರ ಮಾಡದೇ ಇದ್ದ ಪಕ್ಷದಲ್ಲಿ ಇಂಗ್ಲಿಷ್ ಭಾಷೆ ಇಷ್ಟೊಂದು ಸಮೃದ್ಧವಾಗಿ ಬೆಳೀತಾಯಿರ್ಲಿಲ್ಲ; ವೆರೈಟಿ ಇರ್ತಿರ್ಲಿಲ್ಲ; ವೈವಿಧ್ಯ ಇರ್ತಿರ್ಲಿಲ್ಲ. ಅಷ್ಟೇ ಅಲ್ಲ; ಬೇರೆ ಭಾಷೆಗಳಿಂದ ನಮಗೆ ಅನುವಾದ ಗಳನ್ನ ಮಾಡ್ಕೊಂಡಾಗ ಆ ಬೇರೆ ಭಾಷೆ ಗೊತ್ತಿಲ್ಲದವರು ಓದಿ ಹೊಸ ಪ್ರಚೋದನೆಯನ್ನ ಪಡೀತಕ್ಕಂಥಾದ್ದು ಉಂಟು. ಕುವೆಂಪು ಅವರಿಗೇನೆ ಕಾದಂಬರಿಗಳಲ್ಲಿ ಆಸಕ್ತಿ ಇರ್ಲಿಲ್ಲ, ಅವರೇ ಬರ್ಕೊಂಡಿದ್ದಾರೆ. ಟಾಲ್‌ಸ್ಟಾಯಿನ ಕಾದಂಬರಿಗಳನ್ನ ಓದಿದ ನಂತರ ಅವರು ಕಾದಂಬರಿಗಳ ಬಗ್ಗೆ ವಿಶೇಷವಾದ ಆಸ್ಥೆಯನ್ನ ವಹಿಸಿದ್ದುಂಟು. ಯಾವ ಭಾಷೆಯೇ ಆಗ್ಲಿ, ಸಾಹಿತ್ಯವೇ ಆಗ್ಲಿ ಸಮೃದ್ಧವಾಗಿ, ವೈವಿಧ್ಯಮಯವಾಗಿ ಪೂರ್ಣವಾಗಿ ಬೆಳೆಯಬೇಕಾಗಿದ್ರೆ ಭಾಷಾಂತರ ಅತ್ಯಾವಶ್ಯಕ. ಇಂಗ್ಲಿಷ್ ಭಾಷೆಯನ್ನ ನೋಡಿದಾಗ ನಮಗೆ ಸಾಕಷ್ಟು ಇದಕ್ಕೆ ನಿದರ್ಶನ ಸಿಕ್ತದೆ. ಇಂಗ್ಲಿಷ್‌ನವರು ಗ್ರೀಕ್ ಭಾಷೆಯಿಂದ, ಲ್ಯಾಟಿನ್ ಭಾಷೆಯಿಂದ ಸಾಕಷ್ಟು ಸೂರೆಗೊಂಡರು - ಫ್ರೆಂಚ್ ಭಾಷೆಯಿಂದಲೂ ಅನುವಾದಿಸಿ ಕೊಂಡರು. ಹಾಗೆಯೇ ನಮ್ಮ ಭಾಷೆಗಳು, ಕನ್ನಡವಾಗಿರ್ಲಿ, ಇಂಡಿಯಾದ

ಯಾವುದೇ ಭಾಷೆಯಾಗಿರ್ಲಿ, ಸಮೃದ್ಧವಾಗಿ ಬೆಳಿಯಬೇಕಾಗಿದ್ರೆ ಭಾಷಾಂತರ ಅತ್ಯಾವಶ್ಯಕ. ಅದಕ್ಕೋಸ್ಕರವಾಗಿ ಹಾರ್ಡಿ, ಟಾಲ್‌ಸ್ಟಾಯ್ ಇವರ ಕಾದಂಬರಿಗಳನ್ನ ಭಾಷಾಂತರ ಮಾಡುವುದಕ್ಕೆ ಶುರುಮಾಡಿದೆ. ಸುಮಾರು ಐದುಸಾವಿರ ಪುಟಗಳನ್ನ ನಾನು ಭಾಷಾಂತರ ಮಾಡಿದ ಮೇಲೆ ಸಾಕು ಅಂತ ಅನ್ನಿಸ್ತು ನನಗೆ. ಈಗ ಅದೆಲ್ಲವನ್ನೂ ಬಿಟ್ಟು ಈಗ ಸ್ವಲ್ಪ ಕಥೆ ಕಾದಂಬರಿ ಬರೆಯಲು ಸಾಧ್ಯವೇ ಅಂತ ಯೋಚನೆ ಮಾಡ್ತಾಯಿದ್ದೇನೆ. ಕಥೆಗಳನ್ನ ಸಾಕಷ್ಟು ಬರೆದೆ. ಮುವ್ವತ್ತರ ಹತ್ತತ್ರ ಬರೆದಿದ್ದೀನಿ ಈಗ; ಇಪ್ಪತ್ತೈದು ಕೊಟ್ಟಿದ್ದೀನಿ ಅಚ್ಚಿಗೆ- ಇನ್ನು ಮುಂದೆ ಏನಾಗ್ತದೆ ನೋಡಣ.

ಪೆರ್ಲ: ಸರ್, ಕಾದಂಬರಿ ಅಂದ್ರಲ್ಲ? ಯಾವ ರೀತಿ ಕಾದಂಬರಿ ?

ದೇಜಗೌ : ಗೊತ್ತಿಲ್ಲ ಇನ್ನೂವೇ, ಏನ್ ಬರೀತಿನಿ ಅಂತ. ಇದೆ ತಲೇನಲ್ಲಿ; ಮಂಜು ಮಂಜಾಗಿದೆ ಏನೇನು ಬರೀಬೇಕು ಅಂತ. ಕೊನೇ ಪಕ್ಷ ಎರಡು ಕಾದಂಬರಿಗೆ ವಸ್ತು ನನ್ನ ತಲೇನಲ್ಲಿದೆ ಈಗ.

ಪೆರ್ಲ : ಈ ವಯಸ್ಸಿನಲ್ಲಿ ನಿಮಗೆ ಸೃಜನ ಸಾಹಿತ್ಯಕ್ಕೆ ಹೊರಳಲಿಕ್ಕೆ ಮನಸ್ಸಾಗಿದ್ದಾದ್ರೂ ಯಾತಕ್ಕೆ?

ದೇಜಗೌ : ನನಗೆ ಜೀವನಚರಿತ್ರೆ ಸಾಕು ಅನ್ನಿಸ್ತು. ಸಾಕಷ್ಟು ಬರೆದೆ; ಭಾಷಾಂತರ ಒಂದು ರೀತಿಯಲ್ಲಿ ಆಯಾಸವನ್ನ ಮಾಡ್ತು; ಬೇಸರ ಅನ್ನಲಾರೆ; ಆಯಾಸವಾಗ್ತದೆ ಭಾಷಾಂತರ ಮಾಡುವಾಗ-ತುಂಬಾ ಆಯಾಸವಾಗ್ತದೆ.

ಪೆರ್ಲ: ಮಾನಸಿಕ ಆಯಾಸ ?

ದೇಜಗೌ : ಮಾನಸಿಕ ಆಯಾಸ ತುಂಬಾ ಆಗ್ತದೆ. ಅದಕ್ಕೋಸ್ಕರ ಬೇಡ ಅನ್ನುಸ್ತು. ಇನ್ನೂ ಸ್ವಲ್ಪ ದಿವ್ಸ ಬದುಕೋಣ, ಆಯಾಸ ಬ್ಯಾಡ ಅನ್ನುಸ್ತು.

ಪೆರ್ಲ :(ದೇಜಗೌ ಮಾತಿಗೆ ನಗುತ್ತಾರೆ)

ದೇಜಗೌ : ಈ ಸೃಜನಶೀಲ ಸಾಹಿತ್ಯದಲ್ಲಿ ಏನೂ ಇಲ್ಲ- ಯಾವ ಆಯಾಸವೂ ಇಲ್ಲ. ಆಯಾಸವಾದಾಗ ಪಕ್ಕದಲ್ಲಿಟ್ಟು ಬಿಡಬಹುದು ; ಏನಿಲ್ಲ. ಆದ್ರೆ ನಾನು ಬರೆಯೋದಕ್ಕೆ ಶುರು ಮಾಡಿದ ಮೇಲೆ ನನಗನ್ನಿಸಿದ್ದು ಏನು ಅಂದ್ರೆ ,ಪೆನ್ನು ನಿಲ್ಲುದೂ ಇಲ್ಲ. ಒಂದು ಕಥೆ ಮುಗಿಯು ತನಕ ಪೆನ್ನು ನಿಲ್ಲುದೇ ಇಲ್ಲ.

ಪೆರ್ಲ: ಅಂದ್ರೆ ನಿಮ್ಮ ಜಾನಪದೀಯ ಬದುಕು,ಶ್ರೀಮಂತವಾದ ಅನುಭವ, ಮತ್ತೆ ಬೇರೆ ಬೇರೆ ಸಾಹಿತ್ಯದಿಂದ, ಬೇರೆ ಬೇರೆ ಭಾಷೆಗಳಿಂದ ಪಡೆದುಕೊಂಡಂಥ ಅನುಭವಗಳಿಂದ ನಿಮ್ಮ ಸೃಜನ ಸಾಹಿತ್ಯ ಸಂಪನ್ನವಾಗಿ ಮೂಡಿ ಬರಬಹುದು ಅಂತ ನಾವು ಅಂದುಕೊಂಡಿದ್ದೀವಿ.

ದೇಜಗೌ : ನಾನೂ ಹಾಗೇ ಅಂದುಕೊಂಡಿದ್ದೀನಿ. ಆದ್ರೆ ಇಲ್ಲಿ ಸಾಮಾಜಿಕ ಬದ್ಧತೆ ಬಹಳ ಮುಖ್ಯ ಸಾಹಿತ್ಯದಲ್ಲಿ. ಇತ್ತೀಚೆಗೆ ತಾನೆ ನಿಸ್ಸಾರ್ ಅಹ್ಮದ್‌ರ ಬಗ್ಗೆ ಮಾತಾಡ್ತಾ ಹೇಳಿದೆ ಇದನ್ನ. ಅವರೂ ಕೂಡ ಸ್ಪಷ್ಟವಾಗಿ ಹೇಳಿದ್ದಾರೆ, ಸಾಮಾಜಿಕ ಬದ್ಧತೆ ಬೇಕು ಸಾಹಿತ್ಯಕ್ಕೆ ಅಂತ. ಅಂದ್ರೆ ಒಂದು ಸಮಾಜದಲ್ಲಿ ಏನು ಸಮಸ್ಯೆಗಳಿವೆ, ಸವಾಲುಗಳಿವೆ, ಲೋಪದೋಷಗಳಿವೆ,ನ್ಯೂನತೆಗಳಿವೆ, ಅವನ್ನೆಲ್ಲ ಕವಿಯಾದವನು, ಸಾಹಿತಿಯಾದವನು ಪ್ರತಿಬಿಂಬಸತಕ್ಕಂಥದ್ದು ಅವನ ಕರ್ತವ್ಯ. ಈ ದೇಶ ಕಟ್ಟಬೇಕಾದ್ರೆ ಈ ಮುಖಾಂತರ ಹೋಗಬೇಕು

ಅಂತ ಕಾಣ್ತದೆ. ಅದು ನಮ್ಮ ಕೊಡುಗೆ ದೇಶಕ್ಕೆ. ಈ ದೃಷ್ಟಿಯಿಂದ ನಾನು ಕಥೆ, ಕಾದಂಬರಿಯನ್ನ ಬರೀಲಿಕ್ಕೆ ಪ್ರಯತ್ನವನ್ನ ಮಾಡ್ತಿನಿ.

ಪೆರ್ಲ: ಅಂದ್ರೆ, ಬದ್ಧತೆ ಅಂದ್ರೆ ಒಂದು ಮಾತು ನೆನಪಾಯ್ತು

ದೇಜಗೌ: ಕಮಿಟ್‌ಮೆಂಟ್

ಪೆರ್ಲ: ಕಮಿಟ್‌ಮೆಂಟ್. ಇಲ್ಲಿ ವಯಕ್ತಿಕ ಬದ್ಧತೆ ಮುಖ್ಯವೊ ಅಥವಾ ಒಂದು ಚಳವಳಿಯ ಮೂಲಕ ಗುರ್ತಿಸಿಕೊಂಡು ಆ ಮೂಲಕ ಬರೆಯುವ ಬದ್ಧತೆ ಮುಖ್ಯ ಅಂತೀರೊ?

ದೇಜಗೌ : ಇಷ್ಟೆ, ಸಾಮಾಜಿಕವಾಗಿ ಆಗ ಬೇಕಾಗ್ತದೆ, ನನ್ನಭಿಪ್ರಾಯದಲ್ಲೂ ಕೂಡ. ಈಗ ಅತ್ಯಂತ ವಯಕ್ತಿಕವಾಗಿದ್ದ ಪಕ್ಷದಲ್ಲಿ ಒಳ್ಳೆ ಸಾಹಿತ್ಯ ಆಗೋದಿಲ್ಲ. ಅಂದ್ರೆ, ಅನುಭವ ಇದ್ದೇ ಇರ್ತದೆ ಬಿಡಿ; ನನ್ನ ಅನುಭವ ಏನಿದೆಯೋ ಇನ್ನೊಬ್ಬನ ಅನುಭವ ಅದೇ ಆಗಿರ್ತದೆ. ನಾವು ಪೇಪರ್‌ನಲ್ಲಿ ಓದ್ತಾಯಿದ್ದಾಗ ಗೊತ್ತಾಗ್ತದೆ, ನಾನು ಏನು ಯೋಚ್ನೆ ಮಾಡಿ ರ್ತೇನೊ ಸಾವಿರಾರು ಜನ ಅದೇ ಯೋಚ್ನೆ ಮಾಡಿರ್ತಾರೆ. ಅಂದ ಮೇಲೆ ಅದು ಒಂದು ರೀತಿನಲ್ಲಿ ವಯಕ್ತಿಕವಾದ್ರೂ ಕೂಡ ಅದಕ್ಕೆ ಸಾಮೂಹಿಕ ಮೌಲ್ಯ ಇದ್ದೇ ಇರ್ತದೆ. ಪ್ರತಿಯೊಬ್ಬ ಸಾಹಿತಿಯೂ ಕೂಡ ಅದನ್ನ ದೃಷ್ಟಿಯಲ್ಲಿ ಇಟ್ಟುಕೊಳ್ಳಲೇಬೇಕು.

ಪೆರ್ಲ : ಅಂದ್ರೆ, ಈಗ ಚಳವಳಿಯ ದೃಷ್ಟಿಯಿಂದ ನಾನು ಈ ಮಾತನ್ನ ಕೇಳ್ತಾಯಿದ್ದೇನೆ; ನಮ್ಮಲ್ಲಿ ಕನ್ನಡ ಸಾಹಿತ್ಯದ ಸಂದರ್ಭದಲ್ಲೇನೆ ನವೋದಯ, ನವ್ಯ, ಪ್ರಗತಿಶೀಲ, ಬಂಡಾಯ, ದಲಿತ- ಹೀಗೆ ಚಳವಳಿಗಳನ್ನ ನಾವು ಗುರ್ತಿಸಿ ಕೋತೀವಿ. ಚಳವಳಿಗಳ ಮೂಲಕ ಗುರ್ತಿಸಿ ಕೊಂಡಂಥ ಬದ್ಧತೆಯ ಸಾಹಿತ್ಯವೊ ಅಥವಾ ವಯಕ್ತಿಕ ಬದ್ಧತೆಯಿಂದ ಬರೆಯುವಂಥ ಸಾಹಿತ್ಯವೊ?

ದೇಜಗೌ : ಈಗ ಬಂಡಾಯ ಸಾಹಿತಿಗಳೇನು ಹೇಳ್ತಾಯಿದ್ದಾರೆ, ನಾವು ಸಾಮೂಹಿಕ ಬದ್ಧತೆಯ ದೃಷ್ಟಿಯಿಂದಲೇ ಬರಿತಾಯಿದ್ದೇವೆ ಅಂತ. ಅದು ಸರಿ, ಅವರು ಬರೀಲಿ. ಆದ್ರೆ ನಮ್ಮ ಹಿಂದಿನ ಕವಿಗಳಲ್ಲೂ ಕೂಡ, ನವೋದಯ ಕವಿಗಳಲ್ಲೂ ನಾವು ಬಂಡಾಯ ಕಾಣ್ತಾಯಿದ್ದೇವೆ. ಕೊನೆಗೆ ಕಾರಂತರಿಗಿಂತ, ಕುವೆಂಪು ಅವರಿಗಿಂತ ಬಂಡಾಯಗಾರರು ಬೇರೆ ಇಲ್ಲ. ಕಾರಂತರು ತುಂಬಾ ದೊಡ್ಡ ಬಂಡಾಯಗಾರರು ಅವರು.

ಪೆರ್ಲ: ಆ ಕಾಲಕ್ಕೆ

ದೇಜಗೌ : ಆ ಕಾಲಕ್ಕೂ, ಎಲ್ಲ ಕಾಲಕ್ಕೂ ಆದರ್ಶವಾಗಿದ್ದಾರೆ. ಕುವೆಂಪು ಆದರ್ಶವಾಗಿದ್ದಾರೆ, ಅವರಲ್ಲೂ ಬಂಡಾಯ ಸಾಕಷ್ಟಿದೆ: ಬಸವಣ್ಣನವರಲ್ಲಿ ಬಂಡಾಯ ಬೇಕಾದಷ್ಟಿದೆ. ವಚನಕಾರರಲ್ಲಿ, ಬಹುಶಃ ಜಗತ್ತಿನಲ್ಲೇ ಅಂಥ ಬಂಡಾಯಗಾರರಿಲ್ಲ ಅಂತ ಕಾಣ್ತದೆ. ಆದ್ರಿಂದ ಒಂದು ಹೆಸರು ಕೊಟ್ಟು ಒಂದು ಚಳವಳಿಯನ್ನ ನಡೆಸುವುದು ತಪ್ಪು ಅಂತ ನಾನು ಹೇಳುವುದಿಲ್ಲ. ಬಂಡಾಯಗಾರ ಅಂತ ಹಣೆಪಟ್ಟಿ ಬರೆದುಕೊಳ್ಳದಿರುವಂಥವರೂ ಬಂಡಾಯಗಾರರಿದ್ದಾರೆ. ಆದ್ರೆ ಕೆಲವರು ಯಾವ ದೃಷ್ಟಿಯಿಂದಲೋ ಒಂದು ಹಣೆಪಟ್ಟಿಯನ್ನ ಹಾಕ್ಕೊಳ್ತಾರೆ. ಹಾಕ್ಕೊಳ್ಳಿ ಪಾಪ! ಏನೂ ತೊಂದ್ರೆ ಇಲ್ಲ, ತೊಂದ್ರೆ ಇಲ್ಲ. ಒಟ್ಟನಲ್ಲಿ ಬಂಡಾಯವಾಗಲಿ, ನವ್ಯವಾಗಲಿ - ಸಾಹಿತ್ಯದ ಲಕ್ಷಣಗಳಿಗೆ ಒಳಪಡಲೇಬೇಕು. ಕಾವ್ಯ ಮೀಮಾಂಸೆಯ ತತ್ವಗಳಿಗೆ ಒಳಪಡಲೇಬೇಕು. ಅಲ್ಲದಿದ್ದರೆ

ಅನುಭವ ಸಂಪಾದಿಸಿಕೊಳ್ಳಬೇಕು. ಕಾರಂತರು ಮೇಲಿಂದ ಮೇಲೆ ಈ ಮಾತನ್ನ ಹೇಳ್ತಾಯಿದ್ರು: ಮೊದ್ಲು ಅನುಭವ ಸಂಪಾದನೆ ಮಾಡ್ಕೊಳ್ಳಿ ಆಮೇಲೆ ಸಾಹಿತ್ಯ ಕ್ಷೇತ್ರಕ್ಕೆ ಇಳೀರಿ ಅಂತ. ಕಾರಂತರು ಹೇಳಿದ್ದು ಸರಿ. ಅನುಭವ ಬಹಳ ಮುಖ್ಯ. ಬಂಡಾಯ ದವರಲ್ಲೂ ಕೂಡ ಅನುಭವಿಗಳಿದ್ದಾರೆ; ಒಳ್ಳೆ ಸಾಹಿತಿಗಳಿದ್ದಾರೆ.

ಪೆರ್ಲ: ತಮ್ಮ ಸೃಜನ ಸಾಹಿತ್ಯಕ್ಕೂ ಕೂಡ, ತಮ್ಮ ಸೃಜನೇತರ ಸಾಹಿತ್ಯಕ್ಕೆ ಸಿಕ್ಕಿದ ಯಶಸ್ಸು ಸಿಕ್ಕಲಿ ಅಂತ ಶ್ರೋತೃಗಳ ಪರವಾಗಿ ನಾವು ಹಾರೈಸ್ತೀವಿ.

ದೇಜಗೌ: (ನಗುತ್ತಾ) ತುಂಬಾ ಧನ್ಯವಾದಗಳು

ಪೆರ್ಲ: ಪ್ರೊಫೆಸರ್ ಜವರೇಗೌಡರೆ, ಇಲ್ಲಿಯವರೆಗೆ ಆಗಮಿಸಿ "ಪದ್ಮಶ್ರೀ ಪ್ರಶಸ್ತಿ" ಬಂದಿರುವಂಥ ಈ ಸಂದರ್ಭದಲ್ಲಿ ನಿಮ್ಮ ಸಂತೋಷವನ್ನ ನಮ್ಮ ಸಂತೋಷದ ಜೊತೆಗೆ, ಶ್ರೋತೃಗಳ ಸಂತೋಷದ ಜೊತೆಗೆ ಹಂಚಿಕೊಂಡಿದ್ದಕ್ಕೋಸ್ಕರ ತಮಗೆ ಆಭಾರ ವಂದನೆಗಳು.

ದೇಜಗೌ: ನಾನೂ ಕೂಡ ನಿಮಗೆ ಅನೇಕ ಧನ್ಯವಾದುಗಳನ್ನ ಅರ್ಪಿಸ್ತೇನೆ. ನಾನು ಮೊದ್ಲೇ ಹೇಳಿದ ಹಾಗೆ ನಮ್ಮ ಜನ ಏನಿದ್ದಾರೆ ಅವರ ವಿಶ್ವಾಸ, ಅಭೀಪ್ಸೆಯೇ ನನ್ನ ಅಭಿವೃದ್ಧಿಗೆ ಕಾರಣ ಅಂತ ನಾನು ಭಾವಿಸಿದ್ದೇನೆ.

ಪೆರ್ಲ: ನಮಸ್ಕಾರ

ದೇಜಗೌ: ನಮಸ್ಕಾರ.



ರಚನಾತ್ಮಕ ಕಾರ್ಯಕ್ರಮದಲ್ಲಿ ಅಸ್ಪೃಶ್ಯತಾ ನಿವಾರಣೆಯ ಸ್ಥಾನವು ಇದು ಸಂಪೂರ್ಣ ಪ್ರೇಮದ ಕಾರ್ಯಕ್ರಮ. ಈ ದೃಷ್ಟಿಯಿಂದಲೇ ನಾವು ರಚನಾತ್ಮಕ ಕಾರ್ಯಕ್ರಮವನ್ನು ಅಧಿಕಾಧಿಕವಾಗಿ ಸಾಧಿಸುವ ಪ್ರಯತ್ನವನ್ನು ಅವಶ್ಯವಾಗಿ ಮಾಡಬೇಕಾಗಿದೆ.

-ಗಾಂಧೀಜಿ

ಗಂಜೀಫಾ ಕಲೋಪಾಸಕ ರಘುಪತಿ ಭಟ್ಟ

ಗಂಗಾ ಬಿ. ರಾಜಪುರೋಹಿತ
೭೧೬, ೧೬ನೇ ಮುಖ್ಯ ರಸ್ತೆ,
ಸರಸ್ವತೀಪುರ,
ಮೈಸೂರು-೫೭೦ ೦೦೯

ಗಂಜಫಾ ಎಂಬುದು ಪ್ರಾಚೀನ ಭಾರತದ ಒಂದು ಸುಂದರ ಕುತೂಹಲಕಾರಿ ಆಟ. ಇದಕ್ಕಾಗಿ ಬಳಸುವ ದುಂಡನ್ನ ಎಲೆಯ ಮೇಲೆ ಭಾರತೀಯ ಪುರಾಣ ಪುರುಷರ ಚಿತ್ರಗಳನ್ನು ಸೂಕ್ಷ್ಮವಾದ ಗೆರೆಗಳಲ್ಲಿ ಬರೆದು ಮೋಹಕ ಬಣ್ಣಗಳನ್ನು ತುಂಬುತ್ತಿದ್ದರು. ಸಾವಿರ ವರ್ಷಗಳಾದರೂ ಬಣ್ಣ ಸ್ವಲ್ಪವೂ ಮಾಸದಂತೆ ಉಳಿಯುತ್ತಿತ್ತು. ಕಾಲಕ್ರಮದಲ್ಲಿ ಈ ಆಟ ಮತ್ತು ಇದಕ್ಕಾಗಿ ಚಿತ್ರ ರಚಿಸುವ ಕಲೆ ನಶಿಸುತ್ತ ಬಂತು. ಆದರೆ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರು(೧೭೬೪-೧೮೬೮) ಈ ಆಟದ ಬಗ್ಗೆ ತುಂಬಾ ಸಂಶೋಧನೆ ಮಾಡಿ ಗಂಜೀಫಾ ಆಟವನ್ನು ಪುನರುಜ್ಜೀವನಗೊಳಿಸಿದರು. ಅದರಲ್ಲಿ ಸುಮಾರು ಹದಿನೆಂಟು ಆಟಗಳನ್ನು ಬರೆದರು. ವಿಶ್ವದಲ್ಲಿಯೇ ಅತಿ ಸುಂದರವಾದ ಕಲಾಕೃತಿಗಳನ್ನು ಗಂಜೀಫಾದಲ್ಲಿ ಬರೆಯಿಸಿದರು. ಈ ಆಟಕ್ಕೆ 'ಕ್ರೀಡಾಪತ್ರ' ಅಥವಾ 'ದೇವರ ಆಟದ ಎಲೆ' ಎಂಬ ನಮ್ಮದೇ ಆದ ಹೆಸರುಗಳಿದ್ದರೂ 'ಗಂಜೀಫಾ' ಎಂಬ ಹೆಸರನ್ನೇ ಮುಂದುವರಿಸಿದರು. ಇದರ ಬಗ್ಗೆ 'ಶ್ರೀತತ್ವನಿಧಿ' ಎಂಬ ಗ್ರಂಥದಲ್ಲಿ ವಿವರಣೆಯನ್ನೂ ಬರೆದಿದ್ದಾರೆ. ಆ ಕಾಲದಲ್ಲಿ ಗಂಜೀಫಾ ಎಲೆಗಳನ್ನೂ ಇಸ್ಪೀಟನ ಹಾಗೆ ಆಡುತ್ತಿದ್ದರಂತೆ. ನಮ್ಮಲ್ಲಿಯ ಈ ಆಟದ ಎಲೆಗಳಿಂದ ಸ್ಫೂರ್ತಿಗೊಂಡು ಟಾರೋಟ್ ಎಲೆಗಳನ್ನೂ ಅನಂತರ ಇಸ್ಪೀಟು ಎಲೆಗಳನ್ನೂ ಸೃಷ್ಟಿಸಿದರೆಂದು ಹೇಳಲಾಗುತ್ತಿದೆ. ಆಟದೆಲೆಗಳಾದರೂ ಅತ್ಯಂತ ಕಲಾಪೂರ್ಣವಾಗಿರುವ ಈ ಎಲೆಗಳನ್ನೂ ಅವುಗಳ ಮೇಲಿರುವ ಕಲಾಪ್ರಕಾರವನ್ನೂ ಗಂಜೀಫಾ ರಘುಪತಿ ಭಟ್ಟರು (೧೯೫೭) ಪುನಃ ಪ್ರಚಾರಕ್ಕೆ ತಂದರು.

ಗಂಜೀಫಾ ರಘುಪತಿ ಭಟ್ಟರು ಅರಮನೆಯಲ್ಲಿದ್ದ ಕೆಲವು ಹಳೆಯ ಗಂಜೀಫಾ ಚಿತ್ರಗಳನ್ನು ನೋಡಿ ಈ ಕಲೆಯನ್ನು ಉಳಿಸಬೇಕೆಂಬ ದೃಷ್ಟಿಯಿಂದ ಅದೇ ಬಣ್ಣ, ಅದೇ ಕಾಗದ ಮೊದಲಾದವನ್ನು ಹುಡುಕಿ ಗಂಜೀಫಾ ಬಲ್ಲವರಿಂದ ವಿವರಣೆಗಳನ್ನು ಪಡೆದು ೧೯೮೦ರಲ್ಲಿ 'ಮೈಸೂರು ಗಂಜೀಫಾ' ಕಲೆಯನ್ನು ಪುನರ್ನಿರ್ಮಿಸಿದರು. ಇವರ ಈ ಪ್ರಯತ್ನವನ್ನು ಮೊದಲು ವಿದೇಶೀಯರು ಗುರುತಿಸಿದರು. ಅನಂತರ ನಮ್ಮ ನಾಡಿನ ಪತ್ರಿಕೆಗಳು ಪ್ರಚಾರ ನೀಡಿ ಈ ಕಲೆಯನ್ನು ಪ್ರೋತ್ಸಾಹಿಸಿದವು.

ಈ ಎಲೆಗಳಲ್ಲಿ ದೇವತೆಗಳ ಚಿತ್ರಗಳಿದ್ದು ಸಂಖ್ಯೆಗಾಗಿ ಪ್ರಾಣಿ ಅಥವಾ ಆಯುಧಗಳನ್ನು ಬಳಸುತ್ತಿದ್ದರು. ಸುಪ್ರಸಿದ್ಧ ರಾಮಾಯಣ, ದಶಾವತಾರದ ಚಿತ್ರಗಳಿರುವ ಎಲೆಗಳು ಸಾಮಾನ್ಯವಾಗಿ ಬಳಕೆಯಲ್ಲಿದ್ದುವು. ಕ್ರಮೇಣ ಮೊಗಲರ ಆಕ್ರಮಣದ ಬಳಿಕ ದೇವರ ಚಿತ್ರಗಳ ಬದಲು ಅಧಿಪತಿಗಳ ಚಿತ್ರಗಳನ್ನು ಮಾಡಿಸಿದರು. ಹೆಸರನ್ನೂ ಬದಲಾವಣೆ ಮಾಡಿದರು. 'ಕ್ರೀಡಾಪತ್ರ'ಕ್ಕೆ ಬದಲು 'ಗಂಜೀಫಾ' ಎಂಬ ಹೆಸರಾಯಿತು. ಗಂಜೀಫಾ ಎಂಬುದು ಪರ್ಶಿಯನ್ ಭಾಷೆಯ ಶಬ್ದ. 'ಗಂಜ್' ಎಂದರೆ ಹಣ. ಗಂಜೀಫಾ ಎಂದರೆ 'ಹಣವನ್ನು ಪಣವಾಗಿ ಇಟ್ಟು ಆಡುವ ಆಟ' ಎಂದು ಅರ್ಥ. ನಾವು ಬದಲಾವಣೆಯಾದ ಗಂಜೀಫಾ ಎಂಬ ಹೆಸರನ್ನು ಒಪ್ಪಿದೆವು. ಆದರೆ

ನಮ್ಮ 'ದೇವರ ಆಟ' ಎಂಬ ಹೆಸರನ್ನು ಮೊಗಲರು ಒಪ್ಪಲಿಲ್ಲ. ಮುಂದೆ ಕರ್ನಾಟಕದಲ್ಲಿ ಈ ಆಟ ನಶಿಸುತ್ತ ಬಂದಾಗ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರು ಅದರ ಪುನರುಜ್ಜೀವನ ಮಾಡಿದರು.

ಭಾರತದಲ್ಲಿ ಗಂಜೀಫಾ ಆಟ ಮತ್ತು ಅದಕ್ಕೆ ಬೇಕಾಗುವ ಚಿತ್ರಗಳನ್ನು ಬರೆಯುವ ಶೈಲಿ ಕಾಶ್ಮೀರ, ಹಿಮಾಚಲ, ಪಶ್ಚಿಮ ಬಂಗಾಲ, ಒಡಿಸ್ಸಾ, ರಾಜಸ್ತಾನ, ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ಕರ್ನಾಟಕದಲ್ಲಿ ಮೈಸೂರು ಮೊದಲಾದ ಪ್ರದೇಶಗಳಲ್ಲಿ ಪ್ರಚಲಿತವಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಈ ಆಟದೆಲೆಗಳಿಗೆ ಬೇರೆ ಬೇರೆ ಹೆಸರುಗಳಿವೆ.

ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ ಅನಂತರ ನಿಂತೇ ಹೋಗಿದ್ದ ಈ ಕಲೆಯನ್ನು ಮೈಸೂರಿನಲ್ಲಿ ರಘುಪತಿ ಭಟ್ಟ ಅವರು ಉಳಿಸಿಕೊಂಡು, ಬೆಳೆಸಿಕೊಂಡು ಬಂದಿದ್ದಾರೆ. ಇವರು ಮೈಸೂರು ಶೈಲಿಯ ಗಂಜೀಫಾ ಕಲೆಯ ಏಕೈಕ ಕಲಾಕಾರರು ಎಂದರೆ ತಪ್ಪಾಗಲಾರದು. ಈ ಕಲೆಗೆ ತಮ್ಮ ಜೀವನವನ್ನೇ ಮುಡಿಪಾಗಿ ಇಟ್ಟಿರುವುದು ಗಂಜೀಫಾ ರಘುಪತಿ ಭಟ್ಟ ಎಂದೇ ಪ್ರಖ್ಯಾತರಾಗಿದ್ದಾರೆ. ಬರಿ ಗಂಜೀಫಾ ಕಲೆಗೇ ಮೀಸಲಾಗದೇ ಇವರು ರಾಮಾಯಣ, ಮಹಾಭಾರತ, ಭಾಗವತ ಮತ್ತು ಭಗವದ್ಗೀತೆ ಇವುಗಳಿಂದ ತಮ್ಮ ಚಿತ್ರಗಳಿಗೆ ವಸ್ತುವನ್ನು ಆಯ್ದುಕೊಂಡು ತಮ್ಮದೇ ಆದ ಕಲ್ಪನೆಯಿಂದ ಚಿತ್ರಗಳಿಗೆ ಜೀವಕಳೆ ತುಂಬಿ ಚಿತ್ರಿಸುವ ಅವರ ಕಲಾಕೃತಿಗಳನ್ನು ನೋಡುವುದೇ ಒಂದು ಸಂತೋಷ. ಅವರ ಕೈಯಲ್ಲಿ ಏನು ಮೋಡಿ ಇದೆಯೋ! ಎಲ್ಲ ಚಿತ್ರಗಳು ಒಂದಕ್ಕಿಂತ ಒಂದು ಮುದ್ದುಮುದ್ದಾಗಿ, ಮೋಹಕವಾಗಿ ನೋಡುವವರನ್ನು ಮುಗ್ಧಗೊಳಿಸುತ್ತವೆ. ನೋಡುತ್ತಿದ್ದರೆ ಹಾಗೇ ನೋಡುತ್ತಲೇ ಇರಬೇಕೆನ್ನಿಸುವ ಸುಂದರ ಕಲೆ. ಒಂದೊಂದು ಚಿತ್ರಕ್ಕೂ ಅದಕ್ಕೆ ಸಂಬಂಧಿಸಿದ ಶ್ಲೋಕಗಳನ್ನು ರಾಮಾಯಣ, ಭಗವದ್ಗೀತೆ ಮೊದಲಾದವುಗಳಿಂದ ಆಯ್ದು ಬರೆದಿದ್ದಾರೆ.

ಹಿಂದೆ ಈ ಕಲೆಗಾಗಿ ದಂತ, ಆಮೆಯ ಚಿಪ್ಪು, ಶಿಂಪು, ಗಂಧದ ಮರ ಮೊದಲಾದವುಗಳನ್ನೂ ಉಪಯೋಗಿಸುತ್ತಿದ್ದರಂತೆ. ರಘುಪತಿ ಭಟ್ಟರು ತಮ್ಮ ಚಿತ್ರಕಲೆಗೆ ಕೈಯಿಂದ ಮಾಡಿದ ಕಾಗದವನ್ನೇ ಹೆಚ್ಚಾಗಿ ಉಪಯೋಗಿಸುತ್ತಾರೆ.



ನಮ್ಮ ದೇಶದ ಸಂಪದ್ಭರಿತವಾದ ಭೂಮಿಯ ಮಣ್ಣು, ಮರದ ಸೊಪ್ಪು, ಬೇರು ಮತ್ತು ತೊಗಟೆ ಮೊದಲಾದವುಗಳಿಂದ ದೊರೆಯುವ ಸ್ವಾಭಾವಿಕ ಬಣ್ಣಗಳನ್ನು ಸ್ವತಃ ತಾವೇ ತಯಾರಿಸಿಕೊಂಡು ಬಿಡಿಸುವ ಆ ಚಿತ್ರಗಳು ನಮ್ಮೊಡನೆ ಮಾತಾಡುತ್ತಿವೆಯೇನೊ ಎನಿಸುತ್ತವೆ. ಅಳಿಲಿನ ಕೂದಲಿನಿಂದ ಅತಿ ಸೂಕ್ಷ್ಮವಾದ ಕುಂಚಗಳನ್ನು ಅವರು ಸಿದ್ಧಪಡಿಸಿಕೊಂಡು ಚಿತ್ರ ಬರೆಯುತ್ತಾರೆ. ದುರ್ಬೀನಿನಿಂದ ನೋಡಬಹುದಾದಂಥ ಚಿತ್ರಗಳನ್ನು ಅವರು ಬರಿಗಣ್ಣಿನಿಂದಲೇ ಬರೆಯುತ್ತಾರೆ. ಇದರಿಂದ ಚಿತ್ರದಲ್ಲಿಯ ಅವರ ತಲ್ಲೀನತೆ ಮತ್ತು ಏಕಾಗ್ರತೆ ಎಂಥ ಗುಣಮಟ್ಟದ್ದಿರಬಹುದು ಎಂಬುದನ್ನು ಊಹಿಸಬಹುದು.

ಬರಿ ಬಣ್ಣವೊಂದೇ ಅಲ್ಲ, ಚಿತ್ರಕ್ಕೆ ಹೆಚ್ಚಿನ ಮೆರಗು ಕೊಡುವುದಕ್ಕಾಗಿ ಚಿನ್ನ ಮತ್ತು ಬೆಳ್ಳಿಯ ಅತೀ ತೆಳುವಾದ ತಗಡುಗಳನ್ನು ಬಳಸುತ್ತಾರೆ. ಅಂಥ ಚಿತ್ರಗಳು ಸುವರ್ಣ ಮತ್ತು ರಜತ ವರ್ಣಗಳನ್ನೂ ಒಳಗೊಂಡು ಹೊಳಪಾಗಿ ಇನ್ನೂ ಮುದ್ದಾಗಿ ಕಾಣುತ್ತವೆ.

ರಘುಪತಿ ಭಟ್ಟರು ಶ್ರೀರಂಗಪಟ್ಟಣದಲ್ಲಿ ಶ್ರೀರಂಗನಾಥ ಸ್ವಾಮಿಯ ದೇವಸ್ಥಾನದ ಎದುರು ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರು ಹುಟ್ಟಿದ ಸ್ಥಳದಲ್ಲಿ ಅನೇಕ ವರ್ಷಗಳ ಕಾಲ ತಮ್ಮ ಕಲಾಭವನವನ್ನು ನಡೆಸಿದರು. ಈಗ ಮೈಸೂರಿನ ಇರ್ವಿನ್ ರಸ್ತೆಯಲ್ಲಿ ವೆಲಿಂಗ್ಟನ್ ಭವನದಲ್ಲಿ ತಮ್ಮ ಕಲಾಕೃತಿಗಳ ಪ್ರದರ್ಶನವನ್ನು ಏರ್ಪಡಿಸುವ ವಿಚಾರವನ್ನು ಇಟ್ಟುಕೊಂಡಿದ್ದಾರೆ.

ಭಟ್ಟರು ನಮ್ಮ ದೇಶದ ಅನೇಕ ಸ್ಥಳಗಳಲ್ಲಿ ತಮ್ಮ ಕಲಾಪ್ರದರ್ಶನಗಳನ್ನು ನೀಡಿದ್ದಾರೆ. ಹೊರದೇಶದ ಪ್ರಥಮ ಕಲಾಪ್ರದರ್ಶನವನ್ನು ಲಂಡನ್ನಿನ ಭಾರತೀಯ ವಿದ್ಯಾಭವನದಲ್ಲಿ ೧೯೯೨ ರಲ್ಲಿ ನಡೆಸಿದರು. ಅದಲ್ಲದೇ ಜರ್ಮನಿ, ಅಮೆರಿಕಾ, ಇಂಗ್ಲೆಂಡ್, ನೆದರ್ಲ್ಯಾಂಡ್, ಟ್ಯೂನೀಸಿಯಾ ಮತ್ತು ಜಪಾನ್ ದೇಶಗಳಲ್ಲಿ ತಮ್ಮ ಕಲಾಪ್ರದರ್ಶನಗಳನ್ನು ನೀಡಿದ್ದಾರಲ್ಲದೇ ಪ್ರಾತ್ಯಕ್ಷಿಕೆಗಳನ್ನೂ ನಡೆಸಿಕೊಟ್ಟಿದ್ದಾರೆ. ಇಂಗ್ಲೆಂಡಿನ ವಿಕ್ಟೋರಿಯಾ ಆಲ್ಬರ್ಟ್ ಮ್ಯೂಜಿಯಮ್‌ನಲ್ಲಿ ಇವರ ೬೦ ಗಂಜೀಫಾ ಚಿತ್ರಗಳು ಪ್ರದರ್ಶನಕ್ಕಿವೆ. ಅವರು ಇತ್ತೀಚೆಗೆ ಜಪಾನಿನ ಟೋಕಿಯೋ, ಓಸಾಕಾ ಮತ್ತು ಹಿರೋಶಿಮಾ ನಗರಗಳಲ್ಲಿ ನಡೆಸಿಕೊಟ್ಟ ಕಲಾಪ್ರದರ್ಶನ ಮತ್ತು ಗಂಜೀಫಾ ಚಿತ್ರಕಲೆಯ ಪ್ರಾತ್ಯಕ್ಷಿಕೆಗಳು ಅತ್ಯಂತ ಯಶಸ್ವಿಯಾಗಿವೆ.

ಭಟ್ಟರಿಗೆ ಸಂದ ಪ್ರಶಸ್ತಿಗಳೂ ಹಲವು. ೧೯೮೯ರಲ್ಲಿ ವಿಶ್ವಕರ್ಮ ಪ್ರಶಸ್ತಿ, ೧೯೯೨ರಲ್ಲಿ ಜೆ.ಸೀ. ಸಂಸ್ಥೆಯ ಪ್ರಶಸ್ತಿ, ೧೯೯೩ರಲ್ಲಿ ರಾಷ್ಟ್ರಪ್ರಶಸ್ತಿ, ೧೯೯೬ರಲ್ಲಿ ಲಲಿತ ಕಲಾ ಅಕಾಡೆಮಿ ಪ್ರಶಸ್ತಿ ಮುಂತಾದವು ಮುಖ್ಯವಾದವು.

ಗಂಜೀಫಾ ರಘುಪತಿ ಭಟ್ಟರು ೧೯೫೭ನೆಯ ಇಸ್ವಿಯಲ್ಲಿ ಉಡುಪಿಯ ಹತ್ತಿರ ಬೆಳ್ಮಣ್ಣು ಎಂಬ ಹಳ್ಳಿಯಲ್ಲಿ ಶಿವಳ್ಳಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಮಾಡಿದರು. ಶಾಲೆಗಿಂತ ಅವರಿಗೆ ಕಲೆಯ ಮೇಲಿನ ಪ್ರೀತಿ ಅಪಾರವಾಗಿದ್ದುದರಿಂದ ಕಲಾಜೀವನವನ್ನೇ ಆಯ್ದುಕೊಂಡು ಬೆಂಗಳೂರಿಗೆ ಬಂದರು. ಅಲ್ಲಿ ಸಿನೆಮಾ ಪೋಸ್ಟರುಗಳನ್ನು ಬರೆದು ತಮ್ಮ ಉಪಜೀವನಕ್ಕೆ ಮಾರ್ಗ ಮಾಡಿಕೊಂಡರು. ಅದರಿಂದ ಹೊಟ್ಟೆ ತುಂಬುತ್ತಿತ್ತೇ ಹೊರತು ಅವರ ಕಲಾಜೀವಕ್ಕೆ ತೃಪ್ತಿ ಸಿಗುತ್ತಿರಲಿಲ್ಲ. ಏಕೆಂದರೆ ಪೋಸ್ಟರುಗಳಲ್ಲಿಯ ನೆರಳು-ಬೆಳಕಿನ ಸಂಯೋಜನೆ ಛಾಯಾಚಿತ್ರದಂತೆ ಪ್ರತಿಕೃತಿ ಎನಿಸುವುದರಿಂದ ಅದರಲ್ಲಿ ಸೃಜನಶೀಲತೆ ಇಲ್ಲ ಎಂದು ಅವರಿಗೆ ಅನಿಸಿದಾಗ ಒಬ್ಬ ಸಮರ್ಥ ಕಲಾಗುರುವಿನ ಶೋಧನೆಯನ್ನು ನಡೆಸಿಯೇ ಇದ್ದರು.

ಚಿತ್ರಕಲಾ ಪರಿಷತ್ತಿನಲ್ಲಿ ಎಂ.ಎಸ್. ನಂಜುಂಡರಾವ್ ಅವರನ್ನು ಕಂಡು ತಮ್ಮ ಕೋರಿಕೆಯನ್ನು ಅವರ ಮುಂದೆ ಇಟ್ಟಾಗ ಅವರು ಈ ಶಿಷ್ಯನಲ್ಲಿ ಒಂದು ಅಸಾಧಾರಣ ಸಾಮರ್ಥ್ಯವನ್ನು ಗುರುತಿಸಿದರು. ಅಂದಿನಿಂದ ಭಟ್ಟರು ಚಿತ್ರಕಲಾ ಪರಿಷತ್ತಿನ ವಿದ್ಯಾರ್ಥಿಯಾದರು. ಆಗ ಅವರಿಗೆ ೧೪ ವರ್ಷ ವಯಸ್ಸು. ಅಲ್ಲಿ ನಂಜುಂಡರಾವ್ ಅವರು ಭಾರತೀಯ ಸಾಂಪ್ರದಾಯಿಕ ಚಿತ್ರಕಲೆಯನ್ನು ಹೇಳಿಕೊಟ್ಟರು. ಭಟ್ಟರು ಆ ರೀತಿಯ ಸಾಂಪ್ರದಾಯಿಕ ಕಲೆಯನ್ನು ಮುಂದುವರಿಸಿ ಹೆಚ್ಚಿನ

ಸಂಶೋಧನೆ ಮಾಡಿ ಸಾಂಪ್ರದಾಯಿಕತೆಯಲ್ಲಿಯೇ ಹೊಸತನ್ನು ನೀಡಬೇಕೆಂದು ಸೂಕ್ಷ್ಮ ಗೆರೆಗಳ, ಜೀವರೇಖೆಗಳಿರುವ ಗಂಜೀಫಾ ಚಿತ್ರಕಲೆಯನ್ನು ಮೆಚ್ಚಿಕೊಂಡು ಅದನ್ನೇ ಬೆಳೆಸಿಕೊಂಡು ಬಂದರು.

ಗಂಜೀಫಾ ಆಟದಲ್ಲಿ ಮೀನಿನ ಅಥವಾ ಬೇರೆ ಚಿತ್ರಗಳಿಂದ ಸಂಖ್ಯೆಯನ್ನು ಸೂಚಿಸುವ ೧೦ ಎಲೆಗಳು, ದೇವರ ಚಿತ್ರವಿರುವ ೨ ಎಲೆಗಳು ಸೇರಿ ಒಂದು ಗುಂಪಿನಲ್ಲಿ ೧೨ ಎಲೆಗಳಾಗುತ್ತವೆ. ಹೀಗೆ ಪತ್ತು ಅವತಾರಗಳಿಗೆ ಒಟ್ಟು ೧೨೦ ಎಲೆಗಳಾಗುತ್ತವೆ. ಅವುಗಳ ಆಟದ ನಿಯಮಗಳನ್ನು ಶ್ರೀತತ್ವನಿಧಿಯಲ್ಲಿ ಹೇಳಲಾಗಿದೆ. ಹೀಗೆ ಬೇರೆ ಬೇರೆ ಆಟಗಳಿಗೆ ಬೇರೆ ಬೇರೆ ಸಂಖ್ಯೆಯ ಎಲೆಗಳನ್ನು ಬಳಸಲಾಗುತ್ತದೆ. ಗಂಜೀಫಾ ಆಟದ ಬಗ್ಗೆ ಹೆಚ್ಚಿನ ವಿವರಗಳನ್ನು ರಘುಪತಿ ಭಟ್ಟರನ್ನು ಕೇಳಿಯೇ ತಿಳಿದುಕೊಳ್ಳಬೇಕು.

ಮೈಸೂರಲ್ಲಿಯೇ ಆಗಲಿ, ನಾಡಿನ ಹೊರಗೇ ಆಗಲಿ, ಭಟ್ಟರ ಪರಿಚಯವಿಲ್ಲದವರಿಲ್ಲ. ಅನೇಕ ಗಣ್ಯ ವ್ಯಕ್ತಿಗಳ ಪರಿಚಯವೂ ಭಟ್ಟರಿಗಿದೆ. ಎಲ್ಲರೊಂದಿಗೆ ನಗುನಗುತ್ತ ಮಾತಾಡುವ ಸರಳ ಸ್ವಭಾವದ ನಿಗರ್ವಿ, ನಿಸ್ವಾರ್ಥಿ ವ್ಯಕ್ತಿ ಗಂಜೀಫಾ ರಘುಪತಿ ಭಟ್ಟರು.

ಸಾಕ್ಷಾತ್ ಜೀವನದಿಂದ ಮತ್ತು ಪ್ರತ್ಯಕ್ಷ ನಿಸರ್ಗದಿಂದ ಸ್ಫೂರ್ತಿಹೀರಿ ಗಂಜೀಫಾ ಮೂಲಕ ತಮ್ಮ ಸೃಜನ ಶೀಲ ಮನೋಧರ್ಮಕ್ಕೆ ಅಭಿವ್ಯಕ್ತಿ ನೀಡುತ್ತಿರುವ ಈ ಕಲಾವಿದರ ಜೀವನ ಮತ್ತು ಕಲೆ ನೆನಪಿಗೆ ತರುವುದು ಡಿವಿಜಿಯವರ ಕಗ್ಗ:

ಕಲೆಗಳಲಿ ಪರಮಕಲೆ ಜೀವನದ ಲಲಿತಕಲೆ
ಕಲಿಸದನಳವಲ್ಲ ಬಾಹ್ಯ ಬೋಧನೆಯಿಂ
ಒಲಿದೊಳಿಸಿಕೊಳುವ ಲೌಕಿಕ ನಯದ ಸೊಗಸ ನೀಂ
ತಿಳಿವುದೊಳಹದದಿಂದ ಮಂಕುತಿಮ್ಮ



ಲಾಭಕ್ಕಿಂತ ಕರ್ತವ್ಯ ಮುಖ್ಯ. ಜಯಕ್ಕಿಂತ ಸಾಧನೆ ಮುಖ್ಯ.
ಫಲಕ್ಕಿಂತ ಪ್ರಯತ್ನ ಮುಖ್ಯ. ಮಾತಿಗಿಂತ ಕೃತಿ ಮುಖ್ಯ.
-ವೇದ

ನಿದ್ರಾಹೀನತೆಯೆ? ಪರಿಹಾರ ಇಲ್ಲಿದೆ

ಸವಿತಾ ಪ್ರಭಾಕರ
ನಂ.೬೬೮, ೧೧ನೇ ಕ್ರಾಸ್
ಗೋಕುಲಂ, ೩ನೇ ಹಂತ
ಮೈಸೂರು-೨

ಒಮ್ಮೆ ನನ್ನ ರೋಗಿಯೊಬ್ಬಳು ನಿದ್ರಾಹೀನತೆಯಿಂದಾಗಿ ಸಾಕಷ್ಟು ಹಾನಿಗೊಳಗಾಗಿದ್ದಳು. ಆಕೆ ತಾನು ತೊಳೆಯಬೇಕಾಗಿದ್ದ ಪಾತ್ರೆಗಳನ್ನು ಪಾತ್ರೆ ತೊಳೆಯುವ ಯಂತ್ರದೊಳಕ್ಕೆ ಹಾಕುವ ಬದಲು ಬಟ್ಟೆ ಒಗೆಯುವ ಯಂತ್ರದೊಳಕ್ಕೆ ಹಾಕಿ ಅದನ್ನು ಚಾಲನೆಗೊಳಿಸಿದ್ದರಿಂದ ಬೆಲೆಬಾಳುವ ಗಾಜಿನಪಾತ್ರೆಗಳೆಲ್ಲವೂ ಪುಡಿ ಪುಡಿಯಾದುವು.

ಮತ್ತೊಬ್ಬ ವ್ಯಕ್ತಿಯು ಕಾಲ್ಚೆಂಡಿನಾಟವನ್ನು ವೀಕ್ಷಿಸುವ ಹಂಬಲದಿಂದ ಬಹಳ ಕಷ್ಟಪಟ್ಟು ಪ್ರವೇಶಪತ್ರವನ್ನು ಪಡೆದುಕೊಂಡ. ಆದರೆ ಪ್ರಾರಂಭದಿಂದ ಅಂತ್ಯದವರೆಗೂ ತೂಕಡಿಸುತ್ತಲೇ ಕಾಲ ಕಳೆದುಬಿಟ್ಟ.

ದೈನಂದಿನ ಬದುಕಿನಲ್ಲಿ ಈ ತೂಕಡಿಸುವ ಜನರು ಹಲವು ತಪ್ಪುಗಳನ್ನು ಮಾಡುತ್ತಾರೆ. ಕುಟುಂಬದ ಸದಸ್ಯರೊಡನೆ, ಸ್ನೇಹಿತರೊಡನೆ, ಜೊತೆಗಾರರೊಡನೆ ಇವರು ಹೊಂದಿಕೊಳ್ಳಲಾರರು. ಅಪರೂಪಕ್ಕೊಮ್ಮೊಮ್ಮೆ ದುಃಖಕರ ಪರಿಣಾಮಗಳಾಗುವುದೂ ಉಂಟು. ಆದರೆ ತಪ್ಪಿಸಲಾಗದಂತಹ ಎಷ್ಟೋ ಕಾರಿನ ಅಪಘಾತಗಳು ಚಾಲಕರ ನಿದ್ರೆಯಿಂದಲೇ ಘಟಿಸುತ್ತವೆ ಎಂಬುದನ್ನು ರುಜುವಾತು ಮಾಡುವುದು ಒಂದಿಷ್ಟು ಕಷ್ಟವಾಗುತ್ತದೆ. ಆದರೆ ನನ್ನ ನಂಬಿಕೆ ಏನೆಂದರೆ ಇಂತಹ ಸಂಖ್ಯಾಬಲವೇ ಕೊಂಚ ಹೆಚ್ಚಾಗಿದೆ. ಕೆಲವು ಪ್ರಯೋಗಗಳಿಂದ ತಿಳಿದುಬರುವುದೇನೆಂದರೆ ನಿದ್ರಾಹೀನತೆಯಿರುವಾಗ ಚಿತ್ತವು ಬಹುಬೇಗ ಕಿರುನಿದ್ರೆಯ ಕಡೆಗೆ ಜಾರಿಬಿಡುತ್ತದೆ. ಹೀಗೆ ಪ್ರಜ್ಞೆ ತಪ್ಪಿದಂತಾಗುವ ಸಮಯ ಅದೆಷ್ಟು ಕಡಿಮೆ ಅವಧಿಯದೆಂದರೆ ಅದನ್ನು ಅನುಭವಿಸಿದವರಿಗೆ ಅದರ ಅರಿವೇ ಆಗಿರುವುದಿಲ್ಲ.

ಸ್ಟಾನ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಒಮ್ಮೆ ಒಬ್ಬ ವ್ಯಕ್ತಿಯ ಮೇಲೆ ಪ್ರಯೋಗವೊಂದನ್ನು ನಡೆಸಲಾಯಿತು. ಆತನಿಗೆ ಕೇವಲ ನಾಲ್ಕು ಗಂಟೆಗಳಷ್ಟು ಮಾತ್ರ ನಿದ್ರಿಸಲು ಅವಕಾಶ ಮಾಡಿಕೊಟ್ಟು, ಅನಂತರ ಅವನ ಕಣ್ಣುಗಳನ್ನು ತೆರೆಸಿ ಪಟ್ಟಿ ಹಾಕಿದರು. ಅವನ ಮುಂದೆ ಪ್ರತೀ ಸಾರಿ ದೀಪ ಮಿಂಚಿದಾಗಲೂ ತನ್ನ ಎದುರಿನ ಗುಂಡಿಯನ್ನು ಒತ್ತಲು ಆದೇಶ ನೀಡಲಾಯಿತು. ಕೆಲವು ನಿಮಿಷಗಳವರೆಗೆ ಅವನು ಗುಂಡಿಯನ್ನು ಒತ್ತುತ್ತಿದ್ದ. ಆದರೆ ಮುಂದೆ ಪ್ರಕಾಶಮಾನವಾದ ಬೆಳಕು ಅವನ ಕಣ್ಣ ಮುಂದೆಯೇ ಮಿಂಚಿದರೂ ಅವನು ಏನೂ ಮಾಡಲೇ ಇಲ್ಲ.

''ಈಗ ನೀನು ಗುಂಡಿಯನ್ನು ಏಕೆ ಒತ್ತಲಿಲ್ಲ?'' ಎಂಬ ನಮ್ಮ ಪ್ರಶ್ನೆಗೆ

''ಏಕೆಂದರೆ ಅಲ್ಲಿ ದೀಪ ಬೆಳಗಲಿಲ್ಲ'' ಎಂಬ ಉತ್ತರ ಬಂತು.

ನಾವು ಉಪಯೋಗಿಸಿದ್ದ ಮಿದುಳಿಗೆ ಎಚ್ಚರಿಕೆ ಕೊಡುವ ಯಂತ್ರವನ್ನು ಪರಿಶೀಲಿಸಿದಾಗ ತಿಳಿದು ಬಂದಿದ್ದೇನೆಂದರೆ ಆ ಯುವಕ ದೀಪ ಬೆಳಗಿದ ಆ ಕ್ಷಣದಲ್ಲಿ ಅವನಿಗೇ ಅರಿವಾಗದಂತೆ ನಿದ್ರೆಗೊಳಗಾಗಿದ್ದ. ಎರಡು ಸೆಕೆಂಡಿನವರೆಗೆ ಕಣ್ಣು ತೆರೆದಿದ್ದಂತೆಯೇ ಆತ ನಿದ್ರೆಗೆ ಜಾರಿಬಿಟ್ಟಿದ್ದ. ಆ ಸಮಯದಲ್ಲಿ ಆತ ಕಾರಿನಲ್ಲಿದ್ದಿದ್ದರೆ ಆ ಎರಡು ಸೆಕೆಂಡುಗಳು ಅವನಿಗೆ ವಿಪತ್ತನ್ನು ಕಲ್ಪಿಸಿಬಿಡುತ್ತಿದ್ದುವು ಎಂಬುದರಲ್ಲಿ ಸಂಶಯವಿಲ್ಲ.

ಇಂದಿನ ಸಾಮಾಜಿಕ ಪರಿಸ್ಥಿತಿಯಿಂದಾಗಿ

ಮೇ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ವಿಲಿಯಂ ಸಿ. ಡಿಮೆಂಟ್ ಮತ್ತು ಕ್ರಿಸ್ಟೋಫರ್ ವಾವ್‌ಘನ್ ರವರ 'ಗೆಟ್ಟಿಂಗ್ ಇನಫ್ ಸ್ಲೀಪ್? ಡ್ರೀಮ್ ಆನ್' ಲೇಖನದ ಅನುವಾದ

ಹೆಚ್ಚು ಕೆಲಸವನ್ನು ಸಮಯದ ಪರಿವೆಯಿಲ್ಲದೆಯೇ ಮಾಡಬೇಕಾಗಿದೆ. ಆದ್ದರಿಂದ ಹಿಂದಿನ ಶತಮಾನಕ್ಕೆ ಹೋಲಿಸಿದರೆ ನಮ್ಮ ನಿದ್ರೆಯು ಶೇಕಡಾ ಇಪ್ಪತ್ತರಷ್ಟು ಕಡಿಮೆಯಾಗಿದೆ. ಹಾಗಿರುವಾಗ ಇದಕ್ಕೆ ನಮ್ಮ ಇಂದಿನ ಹೆಚ್ಚು ಕೆಲಸ ಮಾಡುವ ಪ್ರವೃತ್ತಿ, ಕೌಟುಂಬಿಕ ಅನಿವಾರ್ಯತೆಗಳು, ಆಟ, ವಿನೋದಗಳ ವೀಕ್ಷಣೆ, ಮತ್ತು ನಮ್ಮ ಇತರ ಹವ್ಯಾಸಗಳನ್ನು ಸೇರಿಸಿದಾಗ ನಮ್ಮ ನಿದ್ರಾ ಸಮಯವು ಅದೆಷ್ಟು ಕಡಿಮೆಯಾಗಿದೆಯೆಂದು ಊಹಿಸಬಹುದು. ನಿದ್ರಾಹೀನತೆಯು ಒಂದು ಗಂಭೀರ ಸಮಸ್ಯೆಯೆಂದು ನನ್ನ ಅಭಿಪ್ರಾಯ.

ನಿದ್ರೆಯ ಸಾಲ ಮತ್ತು ಬುದ್ಧಿಯ ಅಡಮಾನ: ಸಾಮಾನ್ಯವಾಗಿ ವಯಸ್ಕರಿಗೆ ಎರಡು ಗಂಟೆಗಳ ಎಚ್ಚರಕ್ಕೆ ಒಂದು ಗಂಟೆಯ ನಿದ್ರೆ ಸಾಕಾಗುತ್ತದೆ. ಹೀಗಾಗಿ ಹೆಚ್ಚಿನ ಜನರಿಗೆ ಎಂಟು ಗಂಟೆಗಳ ನಿದ್ರೆಯ ಆವಶ್ಯಕತೆ ಇದೆ. ಇದರಲ್ಲಿ ಒಂದಿಷ್ಟು ಹೆಚ್ಚು ಕಡಿಮೆಯಾಗಲೂ ಬಹುದು. ಮಕ್ಕಳು ಮತ್ತು ಹದಿಹರೆಯದವರಿಗೆ ಹತ್ತು ಗಂಟೆಗಳ ನಿದ್ರೆ ಬೇಕಾಗುತ್ತದೆ.

ನಮ್ಮ ಮಿದುಳು ತನಗೆ ಬಾಕಿ ಇರುವ ನಿದ್ರೆಯ ಲೆಕ್ಕಾಚಾರವನ್ನು ಸರಿಯಾಗಿಯೇ ಇಟ್ಟುಕೊಂಡಿರುತ್ತದೆ. ನಾನು ಮತ್ತು ನನ್ನ ಸಹೋದ್ಯೋಗಿಗಳು ನಿದ್ರೆಯ ಕಾಲಾವಧಿಯ ವಿವರವನ್ನು ಕಂಡು ಹಿಡಿದೆವು. ಕಳೆದುಕೊಂಡ ನಿದ್ರೆಯನ್ನು ಮತ್ತೆ ಸಂಗ್ರಹಿಸುವುದು ಹಣಕಾಸಿನ ಸಾಲದಂತೆ. ಇದನ್ನು ಕೂಡ ಮತ್ತೆ ಹಿಂತಿರುಗಿಸಬೇಕು. ಒಂದು ವೇಳೆ ನಿಮ್ಮ ಪೂರ್ಣಾವಧಿಯ ನಿದ್ದೆಯಲ್ಲಿ ಒಂದು ಗಂಟೆ ಕಡಿಮೆಯಾಗಿಬಿಟ್ಟರೆ ಈ ಒಂದು ಗಂಟೆಯ ನಿದ್ರಾಸಾಲವನ್ನು ಮರುದಿನಕ್ಕೆ ಒಯ್ಯಬೇಕಾಗುತ್ತದೆ. ಅದಲ್ಲದೇ ಹಗಲು ಹೊತ್ತಿನ ನಿಮ್ಮ ನಿದ್ರಾಪ್ರವೃತ್ತಿಯು ಮತ್ತಷ್ಟು ದಟ್ಟವಾಗುತ್ತದೆ.

ನೀವು ವಾರದಲ್ಲಿ ೫ ದಿನಗಳ ಕೆಲಸಗಾರರಾಗಿದ್ದು ನಿಮಗೆ ಪ್ರತೀ ನಿತ್ಯವೂ ೮ ಗಂಟೆಗಳ ಕಾಲ ನಿದ್ರೆ ಬೇಕಾಗಿದ್ದರೂ ನೀವು ಕೇವಲ ೬ ಗಂಟೆಗಳಷ್ಟು ಮಾತ್ರ ನಿದ್ರಿಸುತ್ತಿದ್ದರೆ ನೀವು ಹತ್ತು ಗಂಟೆಗಳ ಕಾಲ ನಿದ್ರೆಯ ಸಾಲ ಉಳಿಸಿಕೊಂಡಂತಾಗುತ್ತದೆ. (೫ ದಿನಗಳವರೆಗೆ ೨ ಗಂಟೆಯ ಕಾಲದಂತೆ) ಏಕೆಂದರೆ ನಿಮ್ಮ ನಿದ್ರಾಸಾಲವು ಶೇಖರಣೆಯಾಗುತ್ತಾ ಹೋಗುತ್ತದೆ. ೫ನೇ ದಿನದ ಕೊನೆಯಲ್ಲಿ ನಿಮಗೆ ನಿದ್ರಾ ಒಲವು ಎಷ್ಟೊಂದು ಹೆಚ್ಚಿಬಿಡುತ್ತದೆಂದರೆ ನೀವು ಇಡೀ ರಾತ್ರಿ ಎಚ್ಚರವಾಗಿದ್ದರೇನೋ ಅನಿಸುತ್ತಿರುತ್ತದೆ. ಈ ಪ್ರಮಾಣದಲ್ಲಿ ಹೇಳುವುದಾದರೆ ಶನಿವಾರ ಮಧ್ಯಾಹ್ನದವರೆಗೂ ನೀವು ನಿದ್ರಿಸಿದರೂ ಕಳೆದುಕೊಂಡ ಹತ್ತು ಗಂಟೆಗಳ ಸಾಲವನ್ನು ತೀರಿಸಲಾಗುವುದಿಲ್ಲ. ಮತ್ತೆ ಸಂಜೆ ೫ ರವರೆಗೂ ನೀವು ನಿದ್ರಿಸಬೇಕಾಗುತ್ತದೆ.

ಆದರೆ ನಮ್ಮ ಜೈವಿಕ ಗಡಿಯಾರದಿಂದಾಗಿ ನಿಖರವಾದ ಸಮಯಕ್ಕೆ ಸರಿಯಾಗಿ ಎಚ್ಚರವಾಗಿ ಬಿಡುವುದರಿಂದ ಹೆಚ್ಚಿನ ಜನರಿಗೆ ಹೀಗೆ ನಿದ್ರಿಸಲು ಸಾಧ್ಯವಾಗುವುದಿಲ್ಲ.

ಪೂರ್ತಿ ಎಚ್ಚರವಿರುವ ಆದರೆ ವಿಶ್ರಾಂತಿಯಿಲ್ಲದ ಚರ್ಯೆ: ನಿದ್ರೆ ಮತ್ತು ಎಚ್ಚರಿಕೆಗಳು ನಮ್ಮ ದೇಹದೊಳಗೆ ಬಹು ಆಶ್ಚರ್ಯಕರವಾಗಿ ಮತ್ತು ಖಚಿತವಾದ ರೀತಿಯಲ್ಲಿ ನಿಯಂತ್ರಿಸಲ್ಪಡುತ್ತವೆ, ಮತ್ತು ದೇಹದಲ್ಲಿನ ಜೀವರಾಸಾಯನಿಕ ಚಟುವಟಿಕೆಗಳೂ ಜೈವಿಕ ಗಡಿಯಾರದಿಂದಾಗಿ ಸರಿಯಾದ ರೀತಿಯಲ್ಲಿ ಹೊಂದಿಸಲಾಗುತ್ತವೆ. ಆದ್ದರಿಂದಲೇ ಹಲವು ಸಾರಿ ಗಡಿಯಾರದ ಅಲಾರಮ್ ಸದ್ದು ಕೇಳುವ ಮೊದಲೇ ಎಚ್ಚರಿಕೆಯಾಗಿ ಬಿಡುವುದು.

ಹಲವು ಜನರು ಬೆಳಗಿನ ೯ ಗಂಟೆ ಮತ್ತು ರಾತ್ರಿ ೯ ಗಂಟೆಯ ವೇಳೆಯಲ್ಲಿ ಹೆಚ್ಚಿನ ಚಟುವಟಿಕೆಯುಳ್ಳವರಾಗಿರುತ್ತಾರೆ. ಇವರ

ಚಟುವಟಿಕೆಯು ಮಧ್ಯಾಹ್ನದ ೩ ಗಂಟೆಯ ಹೊತ್ತಿಗೆ ತೀರಾ ಕಡಿಮೆಯಾಗಿ ಬಿಡುತ್ತದೆ. ಆದರೆ ಅದು ಮತ್ತೆ ಕ್ರಮೇಣವಾಗಿ ಹೆಚ್ಚುತ್ತಾ ಹೋಗುತ್ತದೆ. ಎಷ್ಟೋ ಸಲ ನಿದ್ರಾ ಸಾಲ ವಿದ್ದರೂ, ಇಡೀ ದಿನ ಕಷ್ಟಪಟ್ಟು ದುಡಿದಿದ್ದರೂ ನಿಗದಿಯಾದ ವೇಳೆಯಲ್ಲಿ ಹೆಚ್ಚು ಜಾಗೃತರಾಗಿದ್ದೇವೆಂದು ಭಾವಿಸುವ ಜನರ ನಡವಳಿಕೆಯನ್ನು ಇದು ವಿವರಿಸುತ್ತದೆ. ಈ ಗಡಿಯಾರದ ಅವಲಂಬನೆಯು ಜನರು ತಮಗೆ ಸರಿಯಾದ ಪ್ರಮಾಣದ ನಿದ್ರೆ ದೊರೆಯುತ್ತಿದೆ ಎಂದು ಭ್ರಮಿಸುವಂತೆ ಮಾಡುತ್ತದೆ ಎಂದು ನನ್ನ ನಂಬಿಕೆ.

ಸಮ[illegible] ಸರಿಯಾಗಿ ಚುರುಕಾಗಿಬಿಡುವ ಒಂದು ಉತ್ತಮ ಉದಾಹರಣೆಯನ್ನು ಕೆಲವು ವರ್ಷಗಳ ಹಿಂದೆ ಗಮನಿಸುವ ಅವಕಾಶ ನನ್ನದಾಯಿತು. ಕಾಲೇಜು ವಿದ್ಯಾರ್ಥಿನಿಯಾಗಿದ್ದ ನನ್ನ ಮಗಳು ಕ್ಯಾಥಿಯನ್ನು ನೋಡಲು ನಾನೊಮ್ಮೆ ಹೋಗಿದ್ದೆ. ಆಗ ಅವಳು ನಿಷ್ಕಾರಣವಾಗಿ ನಿರುತ್ಸಾಹಗೊಂಡಿದ್ದಳು. ನನ್ನ ಬರುವಿಕೆಯಲ್ಲಿ ಅವಳಿಗೆ ಆಸಕ್ತಿಯೇ ಇರಲಿಲ್ಲ. ಒಂದಿಷ್ಟು ಹೊತ್ತು ತಿರುಗಾಡಿ ಬರೋಣವೆಂದು ನಾನವಳಿಗೆ ಸೂಚಿಸಿದೆ. ಆಗ ಅಪರಾಹ್ನದ ನಾಲ್ಕು ಗಂಟೆಯ ಸಮಯವಾಗಿತ್ತು. ಅನಂತರದ ಕೇವಲ ೨೦ ಅಥವಾ ೩೦ ನಿಮಿಷಗಳಲ್ಲಿ ಅವಳು ನಗುನಗುತ್ತಾ ಮಾತನಾಡುವ, ಉತ್ಸಾಹ ತುಂಬಿ ತುಳುಕುವ ಹುಡುಗಿಯಾಗಿ ಮಾರ್ಪಾಡಾಗಿ ಬಿಟ್ಟಳು.

ಆಶ್ಚರ್ಯಕರವಾಗಿ ಬದಲಾಗಿಬಿಡುವ, ಸಮಯಕ್ಕೆ ಸರಿಯಾಗಿ ಚುರುಕಾಗಿಬಿಡುವ ಈ ಕ್ರಿಯೆಗೆ ಸ್ಪಷ್ಟೀಕರಣವೆಂದರೆ ನಿದ್ರೆಯಿಂದ ವಂಚಿತರಾಗುವ ಕ್ಯಾಥಿಯಂತಹ ಕಾಲೇಜು ವಿದ್ಯಾರ್ಥಿನಿಯರು ಕೂಡ ಮಧ್ಯಾಹ್ನ ಅಥವಾ ಸಾಯಂಕಾಲದ ವೇಳೆಗೆ ಸಂಪೂರ್ಣವಾಗಿ ಮಾನಸಿಕ ಚೈತನ್ಯವನ್ನು ಹೊಂದಿದವರಾಗಿ ಬಿಡುತ್ತಾರೆ. ಕ್ಯಾಥಿಯ ಆ ಪರಿಸ್ಥಿತಿಯಲ್ಲಿ ಅವಳ ದಣಿವನ್ನು ಪೂರ್ಣವಾಗಿ ತೊಡೆದು ಹಾಕಿಬಿಡಲಾಯಿತು. ಇಷ್ಟಾದರೂ ಅವಳು ಹೆಚ್ಚಿನ ನಿದ್ರಾಸಾಲವನ್ನು ಹೊರಬೇಕಾಯಿತು.

ನಿದ್ರೆ ಮತ್ತು ಕ್ಷೇಮ :

ಕಾಲೇಜು ದಿನಗಳಲ್ಲಿ ನಿದ್ರೆಗೆಟ್ಟವರೆಲ್ಲರೂ ಹಲವು ವರ್ಷಗಳ ಮೇಲೂ ನಿದ್ರಾಸಾಲಗಾರರಾಗಿಯೇ ಉಳಿದು ಬಿಡುತ್ತಾರೆಯೆ? ಎಂದು ನನ್ನನ್ನು ಹಲವರು ಪ್ರಶ್ನಿಸುತ್ತಾರೆ. ಬಹಳ ದಿನಗಳ ಮೇಲೆ ನಿದ್ರಾಸಾಲಕ್ಕೆ ಏನಾಗುತ್ತದೆ ಎಂಬುದು ನಮಗೆ ತಿಳಿದಿಲ್ಲ. ಏಕೆಂದರೆ ಎರಡು ವಾರಗಳ ಅವಧಿವರೆಗಿನ ವಿಷಯವನ್ನು ಮಾತ್ರ ಅಧ್ಯಯನ ಮಾಡಲಾಗಿದೆ. ನೀವು ಖಾಯಿಲೆ ಬಿದ್ದಾಗ ನಿರಂತರವಾಗಿ ೧೮ ಗಂಟೆಗಳವರೆಗೂ ನಿದ್ರಿಸಿ ನೀವು ಆ ಕೊರತೆಯನ್ನು ತುಂಬಿಕೊಂಡಿರಬಹುದು ಅಥವಾ ತಿಂಗಳುಗಟ್ಟಲೆಯ ಮತ್ತು ವರ್ಷಗಟ್ಟಲೆಯ ನಿದ್ರಾ ಸಾಲದ ಲೆಖ್ಖದ ಬಗ್ಗೆ ನಿಮ್ಮ ಮಿದುಳು ಹಾದಿ ತಪ್ಪಿರಲೂಬಹುದು.

ಅಥವಾ ಬಹಳ ಕಾಲದವರೆಗೂ ಬೆಳೆಯುತ್ತಾ ಹೋಗುವ ಸಾಲವು ಬಹು ದಿನಗಳ ತರುವಾಯ ನಿಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಬೀರಬಹುದು. ೧೯೫೯ರಲ್ಲಿ ಅಮೆರಿಕಾದ ಕ್ಯಾನ್ಸರ್ ಸೊಸೈಟಿಯೊಂದು ಒಂದು ಅಧ್ಯಯನವನ್ನು ಪ್ರಾರಂಭಿಸಿತು. ಆಗ ಸುಮಾರು ಹತ್ತು ಲಕ್ಷ ಜನರನ್ನು ಅವರ ಆಹಾರ, ನಿದ್ರೆ, ಧೂಮಪಾನ ಮತ್ತು ಇತರ ಅಭ್ಯಾಸಗಳ ಬಗ್ಗೆ ಸಮೀಕ್ಷಿಸಲಾಯಿತು. ಆರು ವರ್ಷಗಳವರೆಗೆ ಗುಂಪಿನ ಜಾಡು ಹಿಡಿದು ಮುಂದುವರೆದಾಗ ಕಡಿಮೆ ನಿದ್ರೆಗೂ ಸಾವಿಗೂ ಪರಸ್ಪರ ಸಂಬಂಧವಿದೆ ಎಂಬ ಅಂಶ ತಿಳಿದು ಬಂದಿದೆ. ಸಾಮಾನ್ಯವಾಗಿ ೭ಗಂಟೆಗಳಿಗಿಂತಲೂ ಕಡಿಮೆ ಕಾಲ ನಿದ್ರಿಸುವ ಅಭ್ಯಾಸವಿರುವಂತಹವರು ಪ್ರತೀ ರಾತ್ರಿಯೂ ೭ಗಂಟೆಗಳ ಕಾಲ ನಿದ್ರಿಸುವವರಿಗಿಂತ ೬ ವರ್ಷ ಕಡಿಮೆ ಆಯುಸ್ಸನ್ನು ಹೊಂದಿರುತ್ತಾರೆ.

ಮುಂದೆ ಅನೇಕ ಪ್ರಯೋಗಗಳು ನಡೆದರೂ ಪ್ರಾರಂಭದಲ್ಲಿ ಪಡೆಸಿದ ಈ ಅಧ್ಯಯನದ ಫಲಿತಾಂಶ ಮಾತ್ರ ಹಾಗೆಯೇ ಉಳಿದಿದೆ. ಈ ನಿದ್ರಾ ಪ್ರಮಾಣವು ಒಬ್ಬರಿಂದ ಒಬ್ಬರಿಗೆ ಕೊಂಚ ವ್ಯತ್ಯಾಸವಾದರೂ ಸಾಮಾನ್ಯವಾಗಿ ೮ ಗಂಟೆ ನಿದ್ರೆ ಅನುಭವಿಸು ವವರು ಹೆಚ್ಚು ಕಾಲ ಬದುಕಬಲ್ಲರು.

ಪ್ರಯೋಗಗಳಿಂದ ಮತ್ತೊಂದು ಅಂಶ ತಿಳಿದು ಬಂದಿದೆ: ದಿನಕ್ಕೆ ೧೦ ಗಂಟೆಗಳ ಕಾಲ ಅಥವಾ ಅದಕ್ಕೂ ಹೆಚ್ಚಿನ ಕಾಲ ನಿದ್ರಿಸುವವರೂ ಕಡಿಮೆ ಆಯುಸ್ಸನ್ನು ಹೊಂದಿರುತ್ತಾರೆ. ನಮ್ಮ ಊಹೆ ಏನೆಂದರೆ ಹೆಚ್ಚು ಕಾಲ ನಿದ್ರಿಸುವವರು ಸಾವಿಗೆ ಹತ್ತಿರವಾಗುವ ಕಾರಣ ಬಹುಶಃ ಕಂಡು ಹಿಡಿಯಲಾಗದಂತಹ ನಿದ್ರಾ ತೊಂದರೆಗಳು. ಉದಾಹರಣೆಗೆ ನಿದ್ರಾಶ್ವಾಸ ಬಂಧನ. ಈ ತೊಂದರೆಯಲ್ಲಿ ಹತ್ತು ಸೆಕೆಂಡಿನವರೆಗೆ ಉಸಿರಾಟವೇ ನಿಂತುಹೋಗುತ್ತದೆ. ಹೀಗೆ ಪ್ರತಿ ರಾತ್ರಿಯೂ ನೂರು ಸಲ ಆಗಬಹುದು.ಇದು ಪದೇ ಪದೇ ನಿದ್ರಾ ಭಂಗಕ್ಕೆ ಕಾರಣವಾಗಿ ಭಯಹುಟ್ಟಿಸುವಂತಹ ಅನೇಕ ದೈಹಿಕ ತೊಂದರೆಗಳನ್ನು ಹುಟ್ಟು ಹಾಕಬಹುದು.

ಆರೋಗ್ಯದ ಮೇಲೆ ನಿದ್ರಾಹಾನಿಯಿಂದಾಗುವ ಮತ್ತೊಂದು ಪರಿಣಾಮವು ಪ್ರಯೋಗಗಳಿಂದ ರುಜುವಾತಾಗಿದೆ. ನಿದ್ರಾ ಹಾನಿಯಿಂದಾಗಿ ದೈಹಿಕ ನಿರ್ವಹಣೆ, ತಿಳುವಳಿಕೆ ಇವು ದುರ್ಬಲಗೊಳ್ಳುತ್ತವೆ. ಅಲ್ಲದೇ ಮನಸ್ಸಿನ ಸ್ಥಿತಿಯ ಮೇಲೆ ಇದು ಇನ್ನೂ ಹೆಚ್ಚಿನ ಪರಿಣಾಮ ಬೀರುತ್ತದೆ. ರಾತ್ರಿಯ ಹೊತ್ತು ಕಡಿಮೆ ನಿದ್ರಿಸುವವರಿಗೆ ಹೆಚ್ಚಿನ ನೆಮ್ಮದಿ ಇರುವುದಿಲ್ಲ. ಮಾನಸಿಕ ಒತ್ತಡ, ದೈಹಿಕ ದೌರ್ಬಲ್ಯ ಕಾಡುತ್ತವೆ. ಇದರಿಂದಾಗಿ ದೈಹಿಕವಾಗಿ ಮತ್ತು ಮಾನಸಿಕವಾಗಿ ನಿತ್ರಾಣಗೊಳ್ಳುತ್ತಾರೆ. ನಾವು ನೆಮ್ಮದಿಯಾಗಿ, ಸಂತೋಷವಾಗಿ, ಹೆಚ್ಚು ಉತ್ಸಾಹವಂತರಾಗಿ ಚೈತನ್ಯ ವಂತರಾಗಿರಬೇಕಾದರೆ ನಿದ್ರಾಹೀನತೆಯನ್ನು ಕಡಿಮೆ ಮಾಡಿಕೊಳ್ಳ ಬೇಕಾಗುತ್ತದೆ.

ನಿದ್ರೆ ಮತ್ತು ಹಸನಾದ ಬದುಕಿನೆಡೆಗೆ...

ನಾವು ಸಾಮಾನ್ಯವಾಗಿ ನಿದ್ರೆಯ ಬಗ್ಗೆ ತಪ್ಪು ತೀರ್ಮಾನಕ್ಕೆ ಬಂದುಬಿಡುತ್ತೇವೆ. ನನ್ನ ಸ್ನೇಹಿತ ಮತ್ತು ಸಹೋದ್ಯೋಗಿಯಾಗಿದ್ದ ಟಾಮ್ ರೋತ್ ಮತ್ತು ಆತನ ತಂಡದವರು ೧೯೮೮ರಲ್ಲಿ ಒಂದಷ್ಟು ಜನರ ಬಗ್ಗೆ ಅಧ್ಯಯನ ನಡೆಸಿದೆವು. ಮಧ್ಯಾಹ್ನದ ನಿದ್ರೆ, ರಾತ್ರಿ ನಿದ್ರೆಗೆಟ್ಟಿದ್ದರ ಪರಿಣಾಮ ಮತ್ತು ಅದರಿಂದ ಯಾವ ತೊಂದರೆಯೂ ಇಲ್ಲವೆಂದು ವಾದಿಸುತ್ತಿದ್ದರು ಆ ಗುಂಪಿನವರು. ಟಾಮ್ ರೋತ್ ಮೊದಲಿಗೆ ಆ ಜನರಿಗೆ ೮ ಗಂಟೆಗಳವರೆಗೂ ನಿದ್ರಿಸಲು ಅವಕಾಶ ಮಾಡಿಕೊಟ್ಟ. ಹೆಚ್ಚು ಜನರು ಒಪ್ಪಿಕೊಳ್ಳುವಂತೆ ಅದು ಒಳ್ಳೆಯ ನಿದ್ರೆ. ಎಂಟುಗಂಟೆ ನಿದ್ರಿಸಿದ ಮೇಲೆ ಪ್ರಯೋಗಕ್ಕೆ ಒಳಪಟ್ಟವರೆಲ್ಲರಿಗೂ ಹಿತವಾದ ಅನುಭವವೇ ಆಗಿತ್ತು.

ಆದರೂ ಅನಂತರದ ದಿನಗಳಲ್ಲಿ ಅವರ ಹಗಲಿನ ಚಟುವಟಿಕೆಗಳ ಬಗ್ಗೆ ಪರೀಕ್ಷಿಸಿದಾಗ ಶೇಕಡಾ ೮೦ರಷ್ಟು ಜನ ಅಷ್ಟೇನೂ ಚುರುಕಾಗಿರಲಿಲ್ಲ. ಹಿತಕರವಾದ ಅನುಭವವೆಂದೇ ಹೇಳಿಕೊಂಡ ಶೇಕಡಾ ೨೫ರಷ್ಟು ಮಂದಿಗೆ ಮತ್ತಷ್ಟು ನಿದ್ರೆ ಬೇಕಾಗಿದ್ದುದರಿಂದ ಅವರು ಒಂದಿಷ್ಟು ಅಪಾಯಕ್ಕೆ ಸಿಲುಕಿಕೊಂಡರು ಅಥವಾ ಬೇರೆಯವರನ್ನು ಸಿಲುಕಿಸಿದರು. ಕೇವಲ ಹತ್ತರಲ್ಲಿ ಇಬ್ಬರು ಮಾತ್ರ ಸಂಪೂರ್ಣ ವಾಗಿ ಚುರುಕಾಗಿದ್ದರು.

ಒಂದು ದಿನ ಇಡೀ ರಾತ್ರಿ ನಿದ್ರೆ ಮಾಡಿದಲ್ಲಿ ನಿದ್ರಾಸಾಲವೆಲ್ಲ ತೀರಿತೆಂದು ಪುನಃ ಹೆಚ್ಚು ಕೆಲಸದಲ್ಲಿ ತೊಡಗುವುದು ಸರಿಯಲ್ಲ. ಸಾಕಷ್ಟು ನಿದ್ರೆ ಮಾಡಿ, ಚುರುಕುತನ-ನಿದ್ರೆಗಳ ಕೂಡಿದ ಜೀವನ ಕ್ರಮದಿಂದ ನಿದ್ರಾಸಾಲವನ್ನು ಆದಷ್ಟು ಕಡಿಮೆ ಮಾಡಿಕೊಳ್ಳಬೇಕು :

ನೀವು ಚುರುಕಾಗಿ ಚಟುವಟಿಕೆಯಿಂದ

ಇರಬೇಕಾದರೆ ೨೪ ಗಂಟೆಗಳಲ್ಲಿ ನಿಮಗೆ ಎಷ್ಟು ಗಂಟೆಗಳ ಕಾಲದ ನಿದ್ರೆಯು ಅಗತ್ಯವಿದೆ ಎಂಬುದನ್ನು ಕಂಡುಕೊಳ್ಳಿ. ಸಾಮಾನ್ಯವಾಗಿ ಹೆಚ್ಚು ಜನರಿಗೆ ೮ ಗಂಟೆಗಳ ಕಾಲದ ನಿದ್ರೆ ಸಾಕಾಗುತ್ತದೆ. ಕೆಲವು ದಿನಗಳವರೆಗೆ ಅಷ್ಟೇ ಕಾಲ ನಿದ್ರಿಸಿ ಮತ್ತು ಹಗಲಿನಲ್ಲಿ ನಿಮ್ಮ ಅನುಭವವನ್ನು ಪರೀಕ್ಷಿಸಿಕೊಳ್ಳಿ, ಮುಖ್ಯವಾಗಿ ಕೆಲಸದ ನಡುವಿನ ವಿರಾಮ, ಊಟದ ಅನಂತರದ ಸಮಯ ಹಾಗೂ ವಾಹನದ ಚಾಲನೆಯ ಸಮಯದಲ್ಲಿ.

. ಮುಂದಿನ ದಿನಗಳಲ್ಲಿ ನಿಮಗೆ ತೂಕಡಿಕೆ ಬಂದರೆ ನಿಮಗೆ ಕಡಿಮೆ ನಿದ್ರೆ ದೊರೆಯುತ್ತಿದೆ ಎಂದು ಅರ್ಥ, ಆಗ ನಿಮ್ಮ ದೈನಂದಿನ ನಿದ್ರೆಗೆ ೧೫ ರಿಂದ ೩೦ ನಿಮಿಷ ಹೆಚ್ಚಿಗೆ ಸೇರಿಸಿ. ನಿಮ್ಮ ತೂಕಡಿಕೆ ಇನ್ನೂ ಮುಂದುವರೆದರೆ ನಿಮ್ಮ ನಿದ್ರೆಗೆ ಮತ್ತಷ್ಟು ಕಾಲ ಸೇರಿಸಿ. ಆದರೆ ನಿದ್ರಾಸಮಯದಲ್ಲಿ ಮಾತ್ರ ತೂಕಡಿಸುವಂತಾದರೆ ಅದು ಸ್ವಾಭಾವಿಕ ಸ್ಥಿತಿಯೆಂದೇ ತಿಳಿಯಬೇಕು.

ನಿಮ್ಮಲ್ಲಿರುವ ಜೈವಿಕ ಗಡಿಯಾರವನ್ನು ನೀವು ಗಣನೆಗೆ ತೆಗೆದುಕೊಳ್ಳಬೇಕು. ನೀವೂ ನನ್ನಂತೆಯೇ ಬೇಗ ಏಳುವವರಾದರೆ ಹಗಲು ಹೊತ್ತಿನಲ್ಲಿ ಸಮಯಕ್ಕೆ ಸರಿಯಾಗಿ ನೀವು ಚುರುಕಾಗಿಬಿಡುತ್ತೀರಿ. ನನಗೆ ಹೆಚ್ಚು ನಿದ್ರೆ ಬೇಕಾದಲ್ಲಿ ನಾನು ಒಂದಿಷ್ಟು ಬೇಗ ನಿದ್ರಿಸಿಬಿಡುತ್ತೇನೆ. ಆದರೆ ತಡವಾಗಿ ಏಳಲು ಪ್ರಯತ್ನಿಸುವುದಿಲ್ಲ. ಆದರೆ ನಿಶಾಚರರು ಬೇಗ ನಿದ್ರಿಸಲಾರರು. ಅವರು ಬೆಳಿಗ್ಗೆ ತಡವಾಗಿ ಎದ್ದು ತಮಗೆ ಕಡಿಮೆಯಾದ ನಿದ್ರೆಯನ್ನು ತುಂಬಿಕೊಳ್ಳುತ್ತಾರೆ.

ಕಡೆಯದಾಗಿ ಒಂದು ಮಾತು. ನಿಮಗೆ ನಿದ್ರೆಯ ಬಗ್ಗೆ ಯಾವುದೇ ರೀತಿಯ ತೊಂದರೆ ಇದೆ ಎಂದು ನಿಮಗನಿಸಿದರೆ ಇದಕ್ಕೆ ಸಂಬಂಧಪಟ್ಟ ತಜ್ಞ ವೈದ್ಯರ ಸಹಾಯವನ್ನು ಪಡೆದುಕೊಳ್ಳಲು ಖಂಡಿತ ಹಿಂಜರಿಯಬೇಡಿ.

ತರಗತಿಯಲ್ಲಿ ತೂಕಡಿಕೆ ಅನುಭವ

ನಿದ್ರೆ ಬರುತಿದೆ ಪಾಠ ಕೇಳಲು
ಬುದ್ಧಿಯೆಲ್ಲವು ಮಂದವಾಗಿದೆ
ಸದ್ದ ಕರ್ಣವು ಕೇಳಲೊಲ್ಲದು ಕರದ ಲೇಖನಿಯು
ಉದ್ಯಮದಿ ತೊಡಗಿರದು ಕಣ್ತೆರೆ-
ದಿದ್ದರೂ ವಸ್ತುಗಳ ನೋಡದು
ಬದ್ಧ ವೈರಿಗು ಬೇಡವಿಂತಹ ಕಷ್ಟ ಹಾದೇವ!
ಲೆಕ್ಚರರು ಪಾಠವನು ಭರದಿಂ-
ದುಚ್ಚರಿಸುತಿರಲಗಲಮಾಗಿಯೆ
ಬಿಚ್ಚಿ ಕಂಗಳು ನೋಡುವುವು ಅವರನ್ನು ಮನ ಮಾತ್ರ
ಇಚ್ಛೆ ಬಂದೆಡೆಗೋಡಿ ಕಾಲವ
ವೆಚ್ಚಗೈವುದು ಪ್ರಶ್ನೆ ಕೇಳ್ದೊಡೆ
ಬೆಚ್ಚಿ ಬೀಳುತಲೇನನಾದರು ಹೇಳತೊಡಗುವುದು!

ಪ್ರೀತಿಯು ಸರಿಯಾದ ಬೆಳಕು ಬೀರುತ್ತಿರುವಾಗ, ಆನಂದವು ಅದಕ್ಕೆ ಹೊಣೆಯಾಗಿರುವಾಗ, ನಮ್ಮ ಸ್ವಭಾವ ಉಲ್ಲಾಸವೂ ಸುಖಕರವೂ ಆಗಿರುವುದು. ನಮ್ಮ ಜೀವನ ಶಾಂತಿಮಯವಾಗಿರುವುದು.

-ವರ್ಡ್ಸವರ್ಥ್

ಮಾಳಿ ಕಲ್ಲಪ್ಪ

ಡಾ. ಸ.ಜ.ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬಿ.ವಿ.ವ.ಸಂಘ, ಬಾಗಲಕೋಟೆ-೫೮೭ ೧೦೧

ಯಾವ ಮಹಾಕಾರ್ಯವೂ ಧನಾಭಾವದಿಂದ ಕುಂಠಿತವಾದದ್ದಿಲ್ಲ. ನಿಮ್ಮ ಸಂಕಲ್ಪ ಎಷ್ಟು ದೃಢ ಮತ್ತು ನಿರ್ವಹಣೆ ಎಷ್ಟು ಶುದ್ಧ-ಇವೇ ಕಾರ್ಯಸಿದ್ಧಿಯ ಸೂತ್ರಗಳು'' ಎಂದರು ಡಾ. ಟಿ.ಮಾಧವ ಪೈ

ನಾನು ಬೆಳಗಾವಿಯ ಮೆಡಿಕಲ್ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಅಲ್ಲಿ ಒಂದು ದೇವಸ್ಥಾನ ನಿರ್ಮಾಣದ ಜವಾಬ್ದಾರಿ ನನ್ನ ಮೇಲೆ ಹಾಕಿದ್ದರು. ದೇವಸ್ಥಾನ ಕಮಿಟಿಯ ಅಧ್ಯಕ್ಷರೆಂದು ಶ್ರೀಮತಿ ಆರ್.ಎಸ್.ದೇಸಾಯಿ ಅವರಿದ್ದರು. ನಾನು ಕಾರ್ಯದರ್ಶಿ ಆಗಿದ್ದೆ. ಸಣ್ಣದೊಂದು ಮಂದಿರಬೇಕೆಂದು ಎಲ್ಲರ ಆಶೆ ಆಗಿತ್ತು. ಅದಕ್ಕಾಗಿ ಎಲ್ಲರೂ ಕೂಡಿ ಪ್ರಯತ್ನ ಮಾಡುತ್ತಿದ್ದೆವು. ಕಾಲೇಜಿನಿಂದ ಹಣ ಕೊಡಲು ಬರುವುದಿಲ್ಲವೆಂದು ಎಲ್ಲರಿಗೂ ಗೊತ್ತಿತ್ತು. ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ವಂತಿಗೆ ಹಾಕಿ ಕಟ್ಟಿಸಲು ಪ್ರಾರಂಭಿಸಿದೆವು. ಹೆಸರಾಂತ ಇಂಜನೀಯರ ಶ್ರೀಎ.ಎಚ್. ಅಣ್ಣಿಗೇರಿಯವರು ಕಟ್ಟಿಸುವ ಜವಾಬ್ದಾರಿ ಹೊತ್ತಿದ್ದರು. ನನ್ನ ಕೆಲಸ ಹಣ ಕೂಡಿಸಿ ಕೊಡುವುದು.

ಗರ್ಭಗುಡಿ ಮುಗಿಯುತ್ತ ಬಂದಿತು. ಅಷ್ಟರಲ್ಲಿ ಒಂದು ಸೂಚನೆ ಬಂದಿತು. ಗರ್ಭಗುಡಿಯ ಒಳಪ್ಮೈಗೆ ಅಮೃತ ಶಿಲೆ ಹೊದಿಸಿದರೆ ಒಳ್ಳೆಯದು. ಎಲ್ಲರೂ ಅದಕ್ಕೆ ಒಪ್ಪಿದರು. ಮತ್ತೆ ವಂತಿಗೆ ಕೂಡಿಸಿ ಗುಡಿಯ ಒಳಮೈಗೆ ಎಂಟು ಫೂಟಿನ ಅಮೃತ ಶಿಲೆ ಹಾಕಿಸಲು ಸಿದ್ಧರಾಗಿ ಕಲ್ಲಿಗೆ ಆದೇಶ ಕೊಟ್ಟೆವು. ಆದೇಶ ತೆಗೆದುಕೊಂಡ ರಾಜಸ್ಥಾನಿಯು ಊರಿಗೆ ಹೋಗಿ ಅಲ್ಲಿಂದ ಅಮೃತ ಶಿಲೆ ಖರೀದಿಸಿ ಕಳುಹಿಸಿದ. ಶಿಲೆಗಳು ಒಳ್ಳೆಯ ಗುಣಮಟ್ಟದ್ದಾಗಿದ್ದುವು. ಎಲ್ಲರೂ ಸಂತೋಷ ಪಟ್ಟೆವು. ರಾಜಸ್ಥಾನಿಯ ವ್ಯಾಪಾರಸ್ಥ ಬಂದು ನನ್ನನ್ನು ಕಂಡ. ಅವನಿಗೆ ಕೃತಜ್ಞತೆ ತಿಳಿಸಿದೆ. ಅವನು ಸಂತೋಷ ಪಟ್ಟ. ಆದರೆ ಗುಡಿಯ ವರೆಗೆ ಬರಲು ಕೇಳಿದ. ಯಾಕೆಂದು ಕೇಳಿದೆ. ಅವನೋ ಅಲ್ಲಿಗೆ ಬರಬೇಕೆಂದು ಮತ್ತೆ ವಿನಂತಿಸಿದ. ಅವನ ವಿನಂತಿಯಂತೆ ಅವನೊಡನೆಯೇ ಗುಡಿಗೆ ಬಂದೆ. ಅಲ್ಲಿ ಅವನು ತನ್ನ ಸಮಸ್ಯೆ ತಿಳಿಸಿದ. ನಾವು ಅವನಿಗೆ ಆದೇಶ ಕೊಟ್ಟಿದು ಎಂಟು ಫೂಟಿನ ಅಮೃತ ಶಿಲೆಗೆ. ಅವನು ಖರೀದಿಸುವಾಗ ಹನ್ನೊಂದು ಫೂಟಿನ ಕಲ್ಲು ಖರೀದಿಸಿದ್ದ. ಅದಕ್ಕಾಗಿ ಹೆಚ್ಚಿನ ಹಣ ಕೊಟ್ಟಿದ್ದ. ಹೆಚ್ಚಿದ್ದ ಹಣವನ್ನು ನಾವು ಭರಿಸಬೇಕೆಂದು ಸೂಚಿಸಿದ. ಆದರೆ ನಮ್ಮ ಶಕ್ತಿ ಮೀರಿ ಹಣ ಕೂಡಿಸಿದ್ದೆವು. ಇನ್ನುಮುಂದೆ ಯಾರನ್ನಾದರೂ ವಂತಿಗೆ ಕೇಳಿದರೆ ಬೈಯಿಸಿ ಕೊಂಡು ಬರುವುದಂತೂ ಖಾತ್ರಿಯಾಗಿತ್ತು. ಅಂಥ ಸಮಯದಲ್ಲಿ ಇವನು ಮಾಡಿದ ಕೆಲಸ ನನಗೆ ಬೇಜಾರು ತಂದಿತು. ಯಾವ ಮೂಲದಿಂದಲೂ ಹಣ ದೊರೆಯದೆಂದು ಖಚಿತವಾಗಿತ್ತು. ಇಷ್ಟರಲ್ಲಿ ಎಲ್ಲವೂ ಪೂರೈಸಬೇಕೆಂದು ಹಿರಿಯರು ಹೇಳಿದ್ದರು. ನಿಸ್ಸಹಾಯಕನಾಗಿದ್ದೆ. ಅವನಿಗೆ ಹೇಳಿಬಿಟ್ಟೆ. ''ನೋಡು ಮಹಾರಾಯ, ನೀನೇನು ನಮ್ಮನ್ನು ಮೋಸ ಮಾಡಿಲ್ಲ. ಆದರೆ ಖರ್ಚು ಬೆಳೆಸುತ್ತ ಹೋಗುತ್ತಿರುವೆ. ಅದನ್ನು ಸಹಿಸುವ ಶಕ್ತಿ ನಮಗಿಲ್ಲ. ಈ ಕಲ್ಲುಗಳನ್ನು ಬೇರೆಯವರಿಗೆ ಕೊಡು. ನಾವು ಹೇಳಿದ ಅಳತೆಯ ಕಲ್ಲು ನಮಗೆ ಬರಲಿ. ಈ ದೊಡ್ಡ ಸೈಜಿನ ಕಲ್ಲುಗಳನ್ನು ನಮ್ಮ

ಗುಡಿಗೆ ಕೂಡ್ರಿಸುವುದು ಬೇಡ. ಅವುಗಳನ್ನು ವಾಪಸ್ ತೆಗೆದುಕೊಂಡು ಹೋಗು'' ಎಂದು ಹೇಳಿ ನನ್ನ ವಿಭಾಗಕ್ಕೆ ಬಂದೆ. ನನ್ನ ಕಾರ್ಯ ದಲ್ಲಿ ಮಗ್ನನಾದೆ.

ಈಗ ರಾಜಸ್ಥಾನಿ ವ್ಯಾಪಾರಿಗೆ ಗುದು-ಗುದು ಪ್ರಾರಂಭವಾಯಿತು. ಒಂದು ಸಲ ನಾನು ಹೇಳಿದೆನೆಂದರೆ ಅದೇ ಕಡೆಯ ಮಾತು ಎಂಬುದು ಅವನಿಗೆ ಪರಿಚಯವಾಗಿತ್ತು. ಆದರೆ ಅವನಿಗೆ ಹಾನಿಮಾಡಿಕೊಳ್ಳಲೂ ಸಾಧ್ಯವಿಲ್ಲ. ಮತ್ತೇ ಬಂದು ವಿನಂತಿಸಿದ. ನಾನು ಜೋರಿನಿಂದಲೇ ಹೇಳಿದೆ, ''ನೋಡು ರಾಜಸ್ಥಾನಿ, ನನ್ನ ಹತ್ತಿರ ಹಣವಿಲ್ಲ. ಬೇರೆ ಹಣ ಬರುವ ಸಾಧ್ಯತೆಗಳೂ ಕಡಿಮೆ. ಸುಮ್ಮನೆ ತಲೆನೋವಾಗಬೇಡ. ತಂದ ಕಲ್ಲುಗಳನ್ನು ಸ್ತ್ರ [illegible]ಶದ ಪ್ರಕಾರ ಕತ್ತರಿಸು. ಹೆಚ್ಚಾದ ಕಲ್ಲು ಬೇರೆಯವರಿಗೆ ಮಾರು'' ಎಂದು ಹೇಳಿದೆ.

ಅವನು ಸಪ್ಪೆಮೋರೆ ಮಾಡಿಕೊಂಡು ಗುಡಿಯ ಕಡೆಗೆ ನಡೆದ. ದಾರಿಯಲ್ಲಿ ಅವನು ಹೋಗುವುದನ್ನು ಹೂದೋಟದಲ್ಲಿ ಕಳೆ ತೆಗೆಯುತ್ತಿದ್ದ ಮಾಳಿ ನೋಡಿದ. ಮಾಳಿಯ ಹೆಸರು ಕಲ್ಲಪ್ಪ ಮಾದರ ಎಂದು. ವಯಸ್ಸಿನಲ್ಲಿ ಹಿರಿಯ. ಆಗಲೇ ಅವನಿಗೆ ಎಂಬತ್ತು ದಾಟಿತ್ತು. ಬಹಳ ನುರಿತ ಮಾಳಿ ಅವನು. ಹೂಗಿಡಗಳು ಅವನು ಹೇಳಿದಂತೆ ಕೇಳುತ್ತಿದ್ದುವು. ಇಂಥ ದಿನ ಮೊಗ್ಗು ಬರಬೇಕು, ಹೂ ಬಿಡಬೇಕು ಎಂದು ಅವನು ಹೇಳಿದರೆ ಹಾಗೇ ನಡೆಯುತ್ತಿತ್ತು. ಅವನೋ ಗಿಡಗಳನ್ನು ಮಕ್ಕಳಿಗಿಂತಲೂ ಕಾಳಜಿಪೂರ್ವಕ ನೋಡುತ್ತಿದ್ದ. ಅವುಗಳಿಗೆ ಬೇಕಾದ ನೀರು, ಗೊಬ್ಬರ, ಔಷಧ ಸುತ್ತಲಿನ ಕಳೆ ತೆಗೆಯುವುದನ್ನು ಅವನು ಬಲು ಪ್ರೀತಿಯಿಂದ ಮಾಡುತ್ತಿದ್ದ. ಅವುಗಳೊಡನೆ ಮಾತಾಡುವುದು ಒತ್ತಟ್ಟಿಗೆ ಇರಲಿ, ನಾನು ಕಂಡ ಸಂಗತಿಯೆಂದರೆ ಗಿಡಗಳು ಹಾಗೂ ಹೂಗಳು ಅವನೊಡನೆ ಮಾತನಾಡುತ್ತಿದ್ದುವು. ಅಷ್ಟು ಅನ್ಯೋನ್ಯತೆ ಅವನಿಗೂ ಹೂಗಿಡ ಗಳಿಗೂ ಇತ್ತು. ಅವನು ಯಾರನ್ನೂ ತೋಟ ದಲ್ಲಿ ಬಿಡುತ್ತಿರಲಿಲ್ಲ. ಯಾರೂ ಗಿಡಗಳಿಂದ ಹೂ ಕೀಳುವ ಹಾಗಿಲ್ಲ.

ಒಂದು ವೇಳೆ ಯಾರಾದರೂ ಗಿಡದಲ್ಲಿಯ ಸುಂದರ ಹೂಗಳನ್ನು ಉಗುರುಗಳಿಂದ ಚಿವುಟಿ ಕಿತ್ತುಕೊಂಡರೆ ಮುಗಿಯಿತು. ಅವನು ಅವರನ್ನು ಬಾಯಿಗೆ ಬಂದಂತೆ ಬೈಯ್ಯುತ್ತಲೇ ಬರುತ್ತಿದ್ದ. ಅವರ ಎದುರೇ ಆ ಗಿಡವನ್ನು ಬೇರು ಸಹಿತ ಕಿತ್ತು ಎಸೆಯುತ್ತಿದ್ದ. ಹೂ ಚಿವುಟಿದವರಿಗೆ ಮುಜುಗರ. ಎಲ್ಲಿಲ್ಲದ ಸಂಕಟ, ಅಷ್ಟು ಒಳ್ಳೆಯ ಗಿಡವನ್ನು ಕಿತ್ತೆ ಹಾಕಿದ ನಲ್ಲ ಎನ್ನುವ ಕೊರಗು. ಹೂ ಕಿತ್ತಿದವರು ಹಲವು ಸಲ ಅಳುತ್ತಲೇ ನಿಲ್ಲುತ್ತಿದ್ದರು.

ಒಂದು ಸಲ ನಾನು ಅವನು ಸಿಟ್ಟಿನಲ್ಲಿಲ್ಲ ದಾಗ ಕೇಳಿದೆ, ''ಎ ಕಲ್ಲಪ್ಪ, ಅಲ್ಲೋ ಗಿಡ ಕಿತ್ತಿಯಲ್ಲೋ ? ಯಾಕ ಹಂಗ ಮಾಡತಿ ?''

ಕಲ್ಲಪ್ಪ : ''ಸಾಹೇಬರ ಹುಚ್ಚನಾಯಿ ನಿಮ್ಮನ್ನ ಕಡದರ ನೀವು ಉಳಿಯುತ್ತೀರೇನು? ಹಾಗೆಯೇ ಮನುಷ್ಯರ ಉಗುರು ವಿಷದಿಂದ ತುಂಬಿರುತ್ತವೆ. ಹೂ ಗಿಡಗಳು ಮನುಷ್ಯರಂತೆ. ಅವುಗಳಿಗೆ ವಿಷ ಏರಿ ಅವೂ ಸಾಯುತ್ತವೆ. ನನ್ನ ಮಕ್ಕಳಿಗೆ ನಂಜಾಗಿ ಸಾಯುವುದು ನನಗೆ ನೋಡಾನ ಆಗಾಕಿಲ್ಲರಿ ಸಾಹೇಬ್ರ''. ಅವನ ಮಾತು ಕೇಳಿ ನಾನು ಸುಮ್ಮನಾಗಿ ಬಿಟ್ಟೆ. ಅಷ್ಟು ಶ್ರದ್ಧೆ ಅವನದು.

ಕಲ್ಲಪ್ಪನೂ ದೇವಾಲಯ ಕಟ್ಟಿಸುವಲ್ಲಿ ಪ್ರಮುಖ ಪಾತ್ರಧಾರಿ. ಗುಡಿಯ ಸುತ್ತಲೂ ಹೂದೋಟ ಅವನ್ನ ಜವಾಬ್ದಾರಿ. ದೇವರ ಪೂಜೆಗೆ ಬೇಕಾದ ಹೂಗಳನ್ನು ಕೊಡುವುದು ಅವನ ಹಕ್ಕು. ಗುಡಿಯನ್ನು ಕಟ್ಟುವ ವಿವಿಧ

ಹಂತುಗಳಲ್ಲಿ ಅವನನ್ನು ಸಭೆಗೆ ಕರೆಸಿ ಅವನಿಂದ ಸಲಹೆ ಸೂಚನೆ ಪಡೆಯುತ್ತಿದ್ದೆವು. ಅವನೂ ದೇವರಲ್ಲಿ ಶ್ರದ್ಧೆ ಇರಿಸಿದವನು. ಕಲ್ಲಪ್ಪ ತನ್ನ ತೋಟದಿಂದಲೇ ರಾಜಸ್ಥಾನಿ ವ್ಯಾಪಾರಿಯನ್ನು ಗಮನಿಸಿದ. ಏನೋ ಎಡವಟ್ಟು ನಡೆದಿದೆ ಎಂಬುದನ್ನು ಊಹಿಸಿದ. ದೂರದಿಂದಲೇ ಒಂದು ಕೂಗು ಹಾಕಿ ರಾಜಸ್ಥಾನಿಯ ಗಮನ ಸೆಳೆದ. ರಾಜಸ್ಥಾನಿ ಕಲ್ಲಪ್ಪನನ್ನು ಕಂಡ. ಕಲ್ಲಪ್ಪ ಇವನನ್ನು ಅಲ್ಲಿಯೇ ನಿಲ್ಲಲು ಹೇಳಿ ತನ್ನ ಕೈಯಲ್ಲಿದ್ದ ಕುರುಪಿ ಹಿಡಿದುಕೊಂಡು ರಾಜಸ್ಥಾನಿಯ ಬಳಿ ಬಂದ,''ಏನು ಸಮಾಚಾರ ಮುಖ ಬಾಡಿದೆಯಲ್ಲ''ಎಂದ. ರಾಜಸ್ಥಾನಿ ಹೇಳಿದ, ''ಕಲ್ಲಪ್ಪನವರೆ ಒಂದು ತಪ್ಪಾಗಿದೆ. ನಾನು ಗುಡಿಗೆ ಎಂಟು ಫೂಟಿನ ಅಮೃತ ಶಿಲೆ ಖರೀದಿಸುವ ಬದಲು ಹನ್ನೊಂದು ಫೂಟಿನ ಶಿಲೆಯನ್ನು ಖರೀದಿಸಿದೆ. ಯಾಕಂದರೆ ಎಂಟು ಫೂಟಿನ ಆರ್ಡರ ಇದ್ದರೂ ಗಣಿಗಳಲ್ಲಿ ಆ ಅಳತೆಯ ಕಲ್ಲು ಲಭ್ಯವಿರಲಿಲ್ಲ.ಏನು ಮಾಡುವದು. ಸಾಹೇಬರಿಗೆ ಹೇಳಿಕೊಂಡರಾಯಿತೆಂದು ದೊಡ್ಡ ಕಲ್ಲುಗಳನ್ನೇ ಖರೀದಿಸಿ ತಂದಿರುವೆ. ಈ ಕಲ್ಲುಗಳು ಗುಡಿಯೊಳಗೆ ಬಹಳ ಚೆಂದಾಗಿ ಕೂಡುತ್ತವೆ. ಆದರೆ ಇವುಗಳ ಬೆಲೆ ಸ್ವಲ್ಪ ಹೆಚ್ಚಿನದು. ಸಾಹೇಬರು ಕಡ್ಡಿ ಮುರಿದಂತೆ ತಂದ ಕಲ್ಲು ಕತ್ತರಿಸು. ನಮಗೆ ಎಂಟು ಫೂಟನವು ಸಾಕೆಂದು ಹೇಳಿದರು.''ಕಲ್ಲಪ್ಪನು ಉಳಿದ ವಿವರಗಳನ್ನು ತಿಳಿದುಕೊಂಡು ಗುಡಿ ಕಟ್ಟುವ ಸ್ಥಳಕ್ಕೆ ಹೋದ. ಅಲ್ಲಿ ತಂದ ಕಲ್ಲುಗಳನ್ನು ನೋಡಿ ಸಂತೋಷ ಪಟ್ಟ. ರಾಜಸ್ಥಾನಿಗೆ ಹೇಳಿದ, ''ಎ ಸೆಡಜಿ, ನೀವು ಸುಮ್ಮಕ ಕೆಲಸ ಮಾಡ್ರಿ. ಹನ್ನೊಂದು ಫೂಟಿನ ಕಲ್ಲು ಕೂಡ್ರಿಸಿರಿ ಭಾಳ ಛಲೋ ಕಾಣಸ್ತಾವು. ಸಾಹೇಬ್ರ ಜವಾಬ್ದಾರಿ ನನಗ ಬಿಡ್ರಿ.'' ಹಾಗೆಯೇ ಕೈಯಲ್ಲಿ ಕುರುಪಿ ಹಿಡಿದುಕೊಂಡು ನನ್ನ ವಿಭಾಗಕ್ಕೆ ಬಂದನು. ನಾನು ಯಾವುದೋ ಕಾರ್ಯದಲ್ಲಿ ಮಗ್ನನಾಗಿದ್ದೆ. ಅದು ಮುಗಿಯುವವರೆಗೆ ಅಲ್ಲಿಯೇ ಸದ್ದು ಮಾಡದೇ ನಿಂತಿದ್ದ. ನಾನು ಹೊರಳಿದಾಗ ಇವನು ನಿಂತಿದ್ದ. ರೂಢಿಯಂತೆ, ''ಏನು ಕಲ್ಲಪ್ಪನ ಸವಾರಿ ಈ ಕಡೆಗೆ? ಎಂದೆ. ಕಲ್ಲಪ್ಪ, ''ಸುಮ್ಮಕ ಮಾತಾಡುವಂಗ ಆತ್ರಿ ಅದಕ ತಮ್ಮನ್ನು ಕಂಡು ಹೋಗೋಣ ಎಂದು ಬಂದಿನ್ರಿ.''ನಾನು : ''ಹೇಳ ಕಲ್ಲಪ್ಪ, ನೀನು ಸುಮ್ಮನ ಬರುವಂಥ ಆಸಾಮಿ ಅಲ್ಲೋಪಾ ಹೇಳ ಏನ ಹೇಳು'' ಎಂದು ಒತ್ತಾಯಿಸಿದೆ. ಕಲ್ಲಪ್ಪ: ''ಸಾಹೇಬ್ರ ನಿಮ್ಮ ಜೊತ ಜಗಳ ಮಾಡಿ ಭಾಳದಿನ ಆತ್ರಿ. ಅದಕ್ಕ ಸಣ್ಣದೊಂದು ಜಗಳ ಮಾಡಾಕ ಬಂದಿನ್ರಿ.'' ನಾನು ನಗಹತ್ತಿದೆ, ''ಕಲ್ಲಪ್ಪಜ್ಜ ನಿನ್ನ ಜತೆ ಜಗಳಾ ಆಡುದಂದ್ರ ನನಗೂ ಖುಷಿ. ಜಗಳ ತಗದ ಬೀಡ ಈಗ'' ಎಂದೇ.

ಕಲ್ಲಪ್ಪನೂ ನಗಹತ್ತಿದ, ''ಸಾಹೇಬ್ರ ದೇವರ ನಮ್ಮಿಬ್ಬರನ್ನೂ ಹಿಂಗ ಜಗಳ ಆಡಿಸುತ್ತ ಇಡಬೇಕ್ರಿ. ಅಂದ್ರ ರುಚಿ ಇರತ್ರೈತಿ.''

ನಾನು: ''ಹೇಳಪಾ ನಾನು ಜಗಳಕ್ಕ ರೆಡಿ ನೋಡು.''

ಕಲ್ಲಪ್ಪ: ''ನೋಡ್ರಿ, ಆಮೇಲೆ ಸಿಟ್ಟಿಗೇಳಬೇಡ್ರಿ.''

ನಾನು: ''ಇಲ್ಲೋ ಮಾರಾಯ ಹೇಳು''

ಕಲ್ಲಪ್ಪ: ''ಸಾಹೇಬ್ರ ದೇವ್ರ ಗುಡಿ ನೀವ ಕಟ್ಟಸಾಕ ಹತ್ತಿರುವಿರೋ ? ಏನ ದೇವರು ತಾನ ಕಟ್ಟಿಸಿಕೊಳ್ಳಾಕ ಹತ್ಯಾನೋ ?'' ಆ ಮಾತುಗಳನ್ನು ಕೇಳುತ್ತಿದ್ದಂತೆಯೇ ನನ್ನ ತಲೆಯಲ್ಲಿ ಗೊಂದಲ ಪ್ರಾರಂಭವಾಯಿತು. ನಾನು ಏನೂ ಹೇಳದ ಸ್ಥಿತಿಗೆ ತಲಪಿದೆ. ಆಗ ಕಲ್ಲಪ್ಪ ನನ್ನ ಪರಿಸ್ಥಿತಿಯನ್ನು ಕಂಡು ನನಗಿಂತ ಜೋರಾಗಿ ನಗಹತ್ತಿದ. ಹೇಳಿದ, ''ಸಾಹೇಬ್ರ ಆ ಸೆಡಜಿ ನನಗೆ ಎಲ್ಲಾ

ಹೇಳ್ಯಾನ್ರಿ. ಮಾರಿ ಸಣ್ಣ ಮಾಡಕೊಂಡ ಹೊಂಟದ್ಹಾ. ನಾನು ಅವನ ದಾರ್‍ಯಾಗ ತರಬಿ ಎಲ್ಲ ಕೇಳಿದ್ನಿರಿ. ಹೋಗಿ ಕಲ್ಲ ನೋಡಿ ಬಂದಿನ್ರಿ..''ಭಾಳ ಛಂದ ಕಾಣಸ್ತಾವು. ನೀವು ಹೂಂ ಅನ್ರಿ. ಅವನು ತಂದ ಕಲ್ಲ ಕೊಯ್ಯುದು ಬ್ಯಾಡ್ರಿ.''

ನಾ ಹೇಳಿದೆ : ''ಕಲ್ಲಪ್ಪಜ್ಜ, ನೀನು ಹೇಳುದು ಸರಿ. ನನಗೂ ಸರಿ ಅನಿಸ್ತೈತಿ. ಆದರ ಹಣ ಇಲ್ಲೋ ಮಾರಾಯಾ.''

ಕಲ್ಲಪ್ಪ: ''ಸಾಹೇಬ್ರ, ಇದ ಈಗ ಅಂದ್ನೆಲಾ ಅದನ್ನ ಮತ್ತ ಅನ್ನತ್ತೆನಿ ನೋಡ್ರಿ ''ಆ ಗುಡಿ ನೀವ ಕಟ್ಟಸಾಕ ಹತ್ತಿರೋ ? ಏನ ದೇವರ ತನಗ ಕಟ್ಟಸಿಕೊಳ್ಳಾಕ ಹತ್ಯಾನೋ್ರ?''

ನಾನು ಉತ್ತರ ಹೇಳದೇ ನನ್ನ ಖುರ್ಚಿಯಲ್ಲಿ ಕುಸಿಯುತ್ತಿದ್ದೆ. ಮತ್ತೆ ಕಲ್ಲಪ್ಪ ಮಾತಾಡಿದ, ''ಸಾಹೇಬ್ರ ನಿಮ್ಮದು ಸರಿ. ಆದರ ಅವಂಗ ಹಣ ಎಲ್ಲಿಂದ ತರೂದು ಅಂತ ಚಿಂತಿ ಹತ್ತೇತಿ ನಿಮಗ. ನನ್ನ ಮಾತ ಕೇಳ್ರಿ. ನಿಮಗ ಆದ ವಯಸ್ಸಿನ ಎರಡ ಪಟ್ಟ ವಯುಸ್ಸು ನನಗ ಆಗ್ಯಾವ್ರಿ. ನೀವು ಹನ್ನೊಂದು ಫೂಟಿನ ಕಲ್ಲ ಕೂಡ್ರಿಸಲಿಕ್ಕೆ ಒಪ್ಪಿಗೆ ಕೊಡ್ರಿ. ಹಣದ ವ್ಯವಸ್ಥ ದೇವ್ರ ತಾನ ಮಾಡತಾನು.''

ನಾನು ಸೋತವನಂತೆ, ''ಹೋಗು ಕೂಡ್ರಿಸು ಅಂತ ರಾಜಸ್ಥಾನಿಗೆ ಹೇಳು'' ಅಂದೆ. ಅವನು ಜೋರಾಗಿ ನಗುತ್ತ ಹೇಳಿದ, ''ಸಾಹೇಬ್ರ ನಾನ ಗೆದ್ದಿನ್ರಿ.'' ನಾನು ಹೇಳಿದೆ ''ಕಲ್ಲಪ್ಪಾ ನನಗೂ ಎಂಭತ್ತ ವಯಸ್ಸಾದಾಗ ನಾನು ನಿನ್ನಷ್ಟ ಶಾಣ್ಯಾ ಆಗತನ ಹೋಗೋ.'' ಇಬ್ಬರೂ ನಕ್ಕೆವು.

ಗುಡಿಗೆ ದೊಡ್ಡ ಕಲ್ಲು ಜೋಡಿಸಲು ಪ್ರಾರಂಭಿಸಿದರು. ನನಗೋ ಒಳಗೊಳಗೆ ಅಂಜಿಕೆ. ಆದರೆ ಕಲ್ಲು ಕೂಡ್ರಿಸುವದು ಪೂರ್ತಿ ಆಗುವದರೊಳಗೆ ಒಬ್ಬ ವಿದ್ಯಾರ್ಥಿಯ ತಂದೆ ಬಂದು ೨೦ ಸಾವಿರ ರೂಪಾಯಿ ದೇಣಿಗೆ ಕೊಟ್ಟು ಹೋದರು.

ಕಲ್ಲಪ್ಪನನ್ನು ಕರೆ ಕಳುಹಿಸಿ ಆದ ಘಟನೆ ವಿವರಿಸಿದೆ. ಅವನ ಕಣ್ಣಲ್ಲಿ ನೀರು ತುಂಬಿತು. ನಿಂತಲ್ಲೇ ದೇವರಿಗೆ ಕೈ ಮುಗಿದೆವು.



ಅಸತ್ಯದ ಬಗೆಗಿನ ಸತ್ಯಕಥೆ

ಗೋಪಾಲ ಆಶ್ರಿತ
'ರಮಾನಿಲಯ'
ಜವಾಹರ ನಗರ
ರಾಯಚೂರು-೫೮೪ ೧೦೧

ನಮ್ಮಲ್ಲಿ ಬಹಳಷ್ಟು ಜನರು ಸಣ್ಣಪುಟ್ಟ ಸುಳ್ಳುಗಳನ್ನು ಹೇಳುವುದುಂಟು. ಅವು ಅಪಾಯಕಾರಿಯಾಗಿರುವದಿಲ್ಲ. ಆದರೂ ಇದು ಸರಿಯೆ?

ಅಮೆರಿಕೆಯ ಚಾರ್ಲೊಟ್ಸ್ ವಿಲ್ಲೆದಲ್ಲಿಯ ವರ್ಜಿನಿಯಾ ವಿಶ್ವವಿದ್ಯಾಲಯದಲ್ಲಿ ಮಾನಸ ಶಾಸ್ತ್ರದ ಪ್ರೊಫೆಸರ ಬೆಲಾ ಡಿ ಪಾಲೊ ೭೭ ವಿದ್ಯಾರ್ಥಿಗಳನ್ನು ಮತ್ತು ನಗರದ ೭೦ ನಿವಾಸಿಗಳನ್ನು ಒಂದು ಅಸಾಧಾರಣ ಯೋಜನಾ ಕಾರ್ಯಕ್ರಮದಲ್ಲಿ ಸ್ವಇಚ್ಛೆಯಿಂದ ಪಾಲ್ಗೊಳ್ಳಲು ಆಹ್ವಾನಿಸಿದಳು. ಅವರೆಲ್ಲರಿಗೂ ಒಂದೊಂದು ದಿನಚರಿ ನೀಡಲಾಯಿತು. ಒಂದು ವಾರದ ಅವಧಿಯಲ್ಲಿ ತಾವು ಹೇಳಿದ ಸುಳ್ಳುಗಳ ಪಟ್ಟಿ ಮಾಡುವಂತೆ ಅವರಿಗೆ ಪ್ರೊಫೆಸರ್ ಆದೇಶವಿತ್ತಳು.

ಒಬ್ಬ ವಿದ್ಯಾರ್ಥಿ ಹಾಗೂ ಚಾರ್ಲೊಟ್ಸ್ ವಿಲ್ಲೆಯ ೬ ನಿವಾಸಿಗಳು ತಾವು ಒಂದು ಸುಳ್ಳನ್ನೂ ಹೇಳಿಲ್ಲವೆಂದು ಸಮರ್ಥಿಸಿದರು. ಉಳಿದ ೧೪೦ ಭಾಗಿಗಳು ತಾವು ೧೫೩೫ ಸುಳ್ಳುಗಳನ್ನಾಡಿದ್ದಾಗಿ ತಿಳಿಸಿದರು.

ಈ ಸುಳ್ಳುಗಳು, ನಾವೆಷ್ಟೋ ಸಲ ಹೇಳುವಂತೆ, ಭೂಮಿಯನ್ನೇ ನಡುಗಿಸುವಂಥವಾಗಿರಲಿಲ್ಲ. ಯಾರೋ ಒಬ್ಬ ತಾನು ಶುದ್ಧ ಮನಸ್ಕನೆಂದು ತೋರಿಸಿಕೊಳ್ಳಲು ಅಥವಾ ತನ್ನ ಹೆಂಡತಿ ಅಥವಾ ಗೆಳೆಯನನ್ನು ಬೆಂಬಲಿಸಿ, ನಿಜಾಂಶ ಮುಚ್ಚಿಡುವುದು ಅಥವಾ ಸಂಬಂಧಿಯೊಬ್ಬನ ಅಭಿಪ್ರಾಯವನ್ನು ಒಪ್ಪುವಂತೆ ಸೋಗು ಹಾಕುವಂಥ ಸುಳ್ಳುಗಳು. ಡಿಪಾಲೊಳ ಪ್ರಕಾರ ಮಹಿಳೆಯರು ಪರಸ್ಪರ ಮಾತಾಡುವಾಗ ಬೇರೆಯವರ ಮನನೋಯಿಸಬಾರದೆಂದು ಸುಳ್ಳು ಹೇಳುವುದುಂಟು.

ವಿಚಿತ್ರವೆಂದರೆ ಸಾವಿರ ಸುಳ್ಳು ಹೇಳುವ ಜನರು ಈ ರೀತಿಯ ವಂಚನೆಯಿಂದ ''ಸ್ವಲ್ಪ ಪೂರ್ವಾಕ್ರಮಣ ಅಥವಾ ವಿಷಾದ ''ವಾಗಿಲ್ಲವೆಂದು ವರದಿ ಮಾಡಿದರು. ಇದು ಕೂಡಾ ಒಂದು ಸುಳ್ಳಿರಬಹುದೆ? ಇರಲೂ ಬಹುದು. ಆದರೆ ಇಷ್ಟು ಸಲೀಸಾಗಿ ನುಣುಚಿಕೊಳ್ಳುವ ನಿಲುವು ಸಾಮಾನ್ಯವೆಂಬುದಕ್ಕೆ ಸಾಕ್ಷ್ಯಾಧಾರವಿದೆ.

ಜೊಸೆಫಸನ್ ನೀತಿಶಾಸ್ತ್ರ ಸಂಸ್ಥೆ ಎಂಬುದು ಕ್ಯಾಲಿಫೋರ್ನಿಯಾದಲ್ಲಿದೆ. ಇದು ಲಾಭಗಳಿಸುವ ಸಂಸ್ಥೆಯಾಗಿರದೆ ಸಚ್ಚಾರಿತ್ರ್ಯ ನಿರ್ಮಾಣಕ್ಕೆ ಮೀಸಲಾಗಿದೆ. ಉದಾಹರಣೆಗೆ, ಹೋದ ವರ್ಷ, ಇಲ್ಲಿ ೨೦,೦೦೦ ಮಾಧ್ಯಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳ ಮೇಲೆ ಅಧ್ಯಯನ ನಡೆಸಲಾಯಿತು. ಶೇ. ೯೨ ವಿದ್ಯಾರ್ಥಿಗಳು ತಾವು ಕಳೆದವರ್ಷ ತಮ್ಮ ತಂದೆ ತಾಯಿಗಳಿಗೆ ಸುಳ್ಳು ಹೇಳಿದ್ದನ್ನು ಒಪ್ಪಿಕೊಂಡರು, ಶೇ.೭೩ ವಿದ್ಯಾರ್ಥಿಗಳು ತಾವು ''ಸರಣಿ ಸುಳ್ಳುಗಾರ''ರ ವರ್ಗಕ್ಕೆ ಸೇರಿದವರೆಂದು ತಿಳಿಸಿದರು. ಅಂದರೆ ಅವರು ಪ್ರತಿ ವಾರ ಸುಳ್ಳು ಹೇಳುವವರು. ಇಷ್ಟೆಲ್ಲ ಒಪ್ಪಿಕೊಂಡಿದ್ದರೂ ಇವರಲ್ಲಿ ಶೇ.೯೧ ವಿದ್ಯಾರ್ಥಿಗಳು ''ತಮ್ಮದೇ ಆದ ನೈತಿಕತೆ ಮತ್ತು ಚಾರಿತ್ರ್ಯದಿಂದ ತೃಪ್ತರು'' ಎಂದು ಹೇಳಿದರು.

''ನಾನು ನಿನ್ನೊಡನೆ ಸಂಪರ್ಕಿಸುವೆ'' ಅಥವಾ ''ಚೆಕ್ ಅಂಚೆ ಮೂಲಕ ಹೊರಟಿದೆ'' ಅಥವಾ ''ಕ್ಷಮಿಸಬೇಕು... ಅವನು ಆಗಲೇ ಹೋಗಿ ಬಿಟ್ಟಾ'' ಎಂಬ ಮಾತುಗಳನ್ನು ನಾವು

ಜನವರಿ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ರ್‍ಯಾಂಡಿ ಫಿಟ್ಜ್‌ರಾಲ್ಡ್‌ರ 'ದಿ ರಿಯಲ್ ಟ್ರೂತ್ಸ್ ಅಬೌಟ್ ಲೈಸ್' ಎಂಬ ಲೇಖನದ ಅನುವಾದ

ಆಗಾಗ ಕೇಳುತ್ತೇವೆ. ನ್ಯಾಯವಾದಿಗಳು, ಪಂಡಿತರು, ಜನಸಂಪರ್ಕವಿಟ್ಟುಕೊಂಡಂಥ ವೃತ್ತಿಗಳಲ್ಲಿಯ ಸದಸ್ಯರು ಗಿರಾಕಿಗಳ ಬೇಡಿಕೆಗೆ ತಕ್ಕಂತೆ ಸತ್ಯವನ್ನು ಸೃಷ್ಟಿಸುವಲ್ಲಿ ಅಥವಾ ಹೊಸೆಯುವಲ್ಲಿ ತಜ್ಞರಾಗಿರುತ್ತಾರೆ.

ಕೆಲವೊಂದು ಹಸಿ ಸುಳ್ಳುಗಳು ಸರ್ವವ್ಯಾಪ್ತಿ ಮತ್ತು ಇಂಥ ಸುಳ್ಳುಗಳಿಗೆ ನಾವು ನೀಡುವ ಕಾರಣಗಳು ಕೂಡಾ ಸುಪರಿಚಿತ. ಟಾಮ್ ಎಂಬ ಹೆಸರಿನ ಒಬ್ಬ ವ್ಯಕ್ತಿಯ ಉದಾಹರಣೆ ತೆಗೆದುಕೊಳ್ಳೋಣ. ಈತ ಒಂದು ಸಂಸ್ಥೆಯ ಕಾರ್ಯನಿರ್ವಾಹಕ. ತನ್ನ ಹೆಂಡತಿ ಮತ್ತು ಮಗನ ಜೊತೆಗೆ ಹಬ್ಬಕ್ಕೆ ಪ್ರತಿ ವರ್ಷ ಅತ್ತೆ ಮನೆಗೆ ಹೋಗುತ್ತಾನೆ. ಅತ್ತೆ ಮಾಡುವ ''ವಿಶೇಷ'' ಕುಂಬಳಕಾಯಿಯ ಕಡುಬು ಟಾಮನಿಗೆ ಹಿಡಿಸದು. ಆದರೆ ಅತ್ತೆಯ ಮನ ನೋಯಿಸಬಾರದೆಂದು ಅದು ಬಹಳ ರುಚಿಯಾಗಿದೆ ಎಂದು ಹೇಳುತ್ತಾನೆ.

''ಇದರಲ್ಲಿ ತಪ್ಪೇನಿದೆ?'' ಎಂದು ಜೋಸೆಫಸನ್ ಸಂಸ್ಥೆಯ ಅಧ್ಯಕ್ಷ ಮೈಕೆಲ್ ಜೋಸೆಫಸನ್ನನಿಗೆ ಕೇಳಿದ. ಇದು ಸಾಮಾನ್ಯವಾಗಿ ನಾವೆಲ್ಲರೂ ಕೇಳುವಂಥ ಪ್ರಶ್ನೆಯೇ. ಈ ಸುಳ್ಳನ್ನು ತನ್ನ ಅತ್ತೆಯ ದೃಷ್ಟಿಕೋನದಿಂದ ವಿವೇಚಿಸುವಂತೆ ಜೋಸೆಫಸನ್ ಟಾಮನಿಗೆ ಹೇಳಿದ. ಒಂದು ದಿನ ಟಾಮನ ಮಗ ಸತ್ಯವನ್ನು ಹೇಳಿದಾಗ ಆ ಮಹಿಳೆಗೆ ವಂಚನೆಯ ಅರಿವಾಯಿತೆಂದು ಊಹಿಸೋಣ. ಆಗ ಆ ಅತ್ತೆ ''ನನ್ನ ಬಗ್ಗೆ ಕಾಳಜಿ ವಹಿಸಿದ್ದಕ್ಕಾಗಿ ಧನ್ಯವಾದಗಳು'' ಎನ್ನಬಹುದೆ? ಅಥವಾ ನೊಂದುಕೊಂಡು ''ಇಷ್ಟು ವರ್ಷಗಳವರೆಗೆ ಹೀಗೇಕೆ ತಪ್ಪು ಅಭಿಪ್ರಾಯ ಕೊಟ್ಟಿರಿ? ನನ್ನ ಬಗ್ಗೆ ಇನ್ನೂ ಯಾವ ಯಾವ ಸುಳ್ಳು ಹೇಳಿದೀರಿ'' ಎಂದು ಕೇಳಲೂ ಸಾಧ್ಯ.

ಟಾಮನ ಅತ್ತೆ ತನ್ನ ಸ್ವಂತ ಮಗಳ ಮಾತುಗಳನ್ನೂ ಸಂಶಯ ದೃಷ್ಟಿಯಿಂದ ನೋಡಬಹುದಲ್ಲವೆ? ಅಲ್ಲದೆ, ಟಾಮನ ಮಗ ಕೂಡಾ ತನ್ನ ತಂದೆ ತಾಯಿಗಳಿಗೆ ಸುಳ್ಳು ಹೇಳಿಯೂ, ತನ್ನ ಚಾರಿತ್ರ್ಯದ ಬಗ್ಗೆ ತೃಪ್ತಿಯಿಂದಿರಬಹುದಲ್ಲವೆ?

ನಾವು ಎಷ್ಟೋ ಸಲ ಜನರನ್ನು ಅವರೆಷ್ಟು ಸುಂದರರಾಗಿ ಕಾಣುವರೆಂದು ಹೊಗಳಿ ಅಥವಾ ಅವರು ನೀಡಿದ ಕಾಣಿಕೆಗಳನ್ನು, ನಮಗೆ ಹಿಡಿಸಿರದಿದ್ದರೂ, ಪ್ರಶಂಸಿಸುವದಿಲ್ಲವೆ? ಈ ''ಒಳ್ಳೆಯ ಸುಳ್ಳುಗಳು'' ನಿರಾತಂಕ ಹಾಗೂ ಸದುದ್ದೇಶವುಳ್ಳವಂಥವು; ಸಾಮಾಜಿಕವಾಗಿ ಅಗತ್ಯವೆನಿಸುವ ಮೃದು ಚಾಲಕಗಳು. ಆದರೆ ಟಾಮನಂತೆ, ಇಂಗ್ಲೀಷ್ ಕಾದಂಬರಿಕಾರ ಸರ್ ವಾಲ್ಟರ್ ಸ್ಕಾಟ್ ''ವಂಚಿಸಲು ನಾವು ಒಮ್ಮೆ ಪ್ರಾರಂಭಿಸಿದರೆ ಆ ಜಾಲದ ನೇಯ್ಗೆ ತೊಡಕಾಗುತ್ತಲೇ ಹೋಗುತ್ತದೆ'' ಎಂದು ಬರೆದಿದ್ದುಂಟು.

ಅಪಾಯಕಾರಿಯಲ್ಲವೆಂಬಂಥ ಸುಳ್ಳುಗಳು ಕೂಡಾ ಅನಿರೀಕ್ಷಿತ ಪರಿಣಾಮ ತರಬಲ್ಲವು. ಇವು ನಮ್ಮನ್ನು ಒಂದು ಜಾರು ಬಂಡೆಯ ಮೇಲೆ ನಿಲ್ಲಿಸ ಬಲ್ಲವೆಂದು ತತ್ವಜ್ಞಾನಿ ಸಿಸ್ಸೆಲಾ ಬಾಕ್ ಎಚ್ಚರಿಸಿದ್ದಾಳೆ. 'Lying : Moral choice in Public and Private Life'ಎಂಬ ತನ್ನ ಪುಸ್ತಕದಲ್ಲಿ ''ಮೊದಲಿನ ಕೆಲವು ಸುಳ್ಳುಗಳ ನಂತರ ಉಳಿದವು ಬಹಳ ಸರಾಗವಾಗಿ ಬಂದುಬಿಡುತ್ತವೆ... ಮಾನಸಿಕ ಆತಂಕಗಳು ಸವೆದು ಹೋಗುತ್ತವೆ; ತಾನು ಸಿಕ್ಕಿ ಬೀಳಬಹುದೆಂಬ ಸುಳ್ಳುಗಾರನ ಗ್ರಹಿಕೆ ಡೊಂಕಾಗಿರುತ್ತದೆ'' ಎಂದು ಬರೆದಿದ್ದಾಳೆ.

ಈ ಕುಂಬಳಕಾಯಿ ಕಡುಬಿನ ಪ್ರಕರಣವನ್ನೇ ತೆಗೆದುಕೊಳ್ಳಿ. ಮೊದಲನೆಯದಾಗಿ, ತನ್ನ ಅತ್ತೆಗೆ ಸಂತೋಷವಾಗಲೆಂಬುದೇ ಅವನ ಆಶೆಯಾಗಿರಲಿಲ್ಲವೆ? ತಿಳಿದೊ ಅಥವಾ ತಿಳಿಯ

ದೆಯೊ, ತನ್ನ ಅತ್ತೆ ತನ್ನ ಬಗ್ಗೆ ಒಳ್ಳೆಯ ಅಭಿಪ್ರಾಯ ತಾಳಲೆಂಬುದು ಅವನ ಆಶೆಯಾಗಿತ್ತು. ಈ ಮೊದಲಿನ ವಂಚನೆಯ ಬಳಿಕ ಅದನ್ನು ಬಚ್ಚಿಡಲು ಇನ್ನಷ್ಟು ಸುಳ್ಳುಗಳನ್ನು ಹೊಸೆಯುವಂತಾಯಿತು.

ತಾವು ದೂರವಾಣಿಯ ಮೂಲಕ ಸಂಪರ್ಕಿಸಬೇಕಾದ ವ್ಯಕ್ತಿ ಯಾವುದೋ ಸಭೆಯಲ್ಲಿರುವನೆಂದು ಹೇಳಿದಾಗ ಅಂಥ ವ್ಯಕ್ತಿಯನ್ನು ಯಾರು ನಂಬುತ್ತಾರೆ? ಈ ತೆರನಾದ ಸುಳ್ಳು ಅಷ್ಟೇನೂ ಮಹತ್ವದ್ದಲ್ಲ. ಆದರೂ ನುಣುಚಿಕೊಳ್ಳಲು ಹೊಸೆಯುವ ಈ ಸುಳ್ಳಿನ ಸರಮಾಲೆಗೆ ಕೊನೆಯಿರದು.

ಒಮ್ಮೆ ಇವು ಸಾಮಾನ್ಯವಾಗಿ ಬಿಟ್ಟರೆ, ಮನ ನೋಯಿಸಬಾರದೆಂದು ಹೇಳುವ ಸಣ್ಣಪುಟ್ಟ ಸುಳ್ಳುಗಳು ಕೂಡಾ ಒಂದು ರೀತಿಯ ತಿರಸ್ಕಾರ ಭಾವ ಮತ್ತು ಅಪನಂಬಿಕೆಗೆಡೆ ಮಾಡಿಕೊಡುತ್ತವೆ. ''ಈ ವಿಶ್ವಾಸಕ್ಕೆ ಧಕ್ಕೆ ತಗುಲಿತೆಂದರೆ, ಇಡೀ ಸಮುದಾಯ ಕಷ್ಟಕ್ಕೀಡಾಗುತ್ತದೆ ಮತ್ತು ಅದು ನಾಶವಾದರೆ ಸಮಾಜಗಳು ಎಡವಿ ಕುಸಿಯುತ್ತವೆ'' ಎಂದು ಬಾಕ್ ಎಚ್ಚರಿಸಿದ್ದಾಳೆ.

ಹಾಗಾದರೆ ಎಲ್ಲ ಸುಳ್ಳುಗಳಿಂದ ಹೇಗಾದರೂ ಮಾಡಿ ತಪ್ಪಿಸಿಕೊಳ್ಳಲು ಸಾಧ್ಯವೆ? ಹಾಗೆ ಸಾಧ್ಯವೆಂದು ಹೇಳಲಾಗುವುದಿಲ್ಲ. ನೀತಿಶಾಸ್ತ್ರಜ್ಞರು ಹೇಳುವ ಕಾಳಜಿ ತತ್ವಕ್ಕಾಗಿ ವಿಶ್ವಾಸದ ತತ್ವಗಳ ಸುಳ್ಳುಗಳೇ ಅರ್ಥಮಾಡಿಕೊಳ್ಳುವಂತಹ ಹಾಗೂ ಕ್ಷಮಾರ್ಹ ಸುಳ್ಳುಗಳು: ಜೊಸೆಫಸನ್ನನ ಪ್ರಕಾರ ''ಮಕ್ಕಳಿಗೆ ದಂತದ ಅಪ್ಸರೆಯ ಬಗ್ಗೆ ಹೇಳುವುದು ಅಥವಾ ಒಂದು ಸೋಜಿಗದ ಕೂಟಕ್ಕೆ ಒಬ್ಬರನ್ನು ಸಿದ್ಧಗೊಳಿಸಲು ಸುಳ್ಳು ಹೇಳುವುದು'' ತಪ್ಪೆನಿಸುವದಿಲ್ಲ. ಆದರೂ ನಮ್ಮ ಗೆಳೆಯರು ಹಾಗೂ ಸಹಚರರು ಯಾವಾಗಲಾದರೂ ನಮ್ಮ ಒಳ್ಳೆಯದಕ್ಕಾಗಿ ಎಂದು ಅನಿಸಿದಾಗಲೆಲ್ಲ ನಮಗೆ ಸುಳ್ಳು ಹೇಳುವ ಅಧಿಕಾರ ಕೊಡಲು ನಾವು ಸಿದ್ಧರಿದ್ದೇವೇನೆಂಬುದನ್ನು ನಾವು ನಮ್ಮನ್ನೇ ಕೇಳಿಕೊಳ್ಳಬೇಕು'' ಎಂದು ಅಭಿಪ್ರಾಯಪಟ್ಟಿರುವನು.

ಜೋಸೆಫಸನ್ ಒಂದು ಸರಳ ಪರೀಕ್ಷೆಯನ್ನು ಸೂಚಿಸಿದ್ದಾನೆ. ನೀವು ಸುಳ್ಳು ಹೇಳುತ್ತಿದ್ದ ವ್ಯಕ್ತಿಗೆ ಸತ್ಯಾಂಶ ಗೊತ್ತಾದರೆ, ಅವನು ನಿಮ್ಮ ಕಾಳಜಿಗಾಗಿ ಧನ್ಯವಾದ ಹೇಳುವನೆ ? ಅಥವಾ ಬಹಳ ಕಾಲದಿಂದ ನಿಮ್ಮ ಬಗ್ಗೆ ಇಟ್ಟಿದ್ದ ವಿಶ್ವಾಸ ಕುಗ್ಗಿ ಹೋಯಿತೆಂದು ಭಾವಿಸುವನೆ?

ಆಗ ಕೂಡಾ ನಿಮಗೆ ಖಚಿತವಾಗದಿದ್ದರೆ, ಮಾರ್ಕ್‌ಟ್ವೈನ್ ನೀಡಿರುವ ಹೆಬ್ಬೆಟ್ಟಿನ ಒಳ್ಳೆಯ ನೇಮ ಒಂದಿದೆ. ''ಅನುಮಾನ ಬಂದಲ್ಲಿ ನೀವು ಸತ್ಯವನ್ನೇ ಹೇಳಿಬಿಡಿ. ಇದರಿಂದ ನಿಮ್ಮ ವೈರಿಗಳು ಗಾಬರಿಗೊಳ್ಳುತ್ತಾರೆ ಮತ್ತು ಮಿತ್ರರು ದಿಗ್ಭ್ರಮೆಗೊಳ್ಳುತ್ತಾರೆ''.

ಅಪ್ರಿಯವಾದ ಸತ್ಯವನ್ನು ಹೇಳಬೇಡ ಎಂಬುದು ಅನುಭವವಾಗಿ

''ಸುಳ್ಳು ಸಾಲಕೆ ನಂಟು ಮುಳ್ಳು ಜಾಲಿಗೆ ಗಂಟು ಹಳ್ಳ ಸಾಲದು ಸುಳ್ಳ ಹುಗಿದಿಡಲು'' ಎಂಬುದೂ ಅನುಭವ ನುಡಿ.

ಮಾತೃ ಬಂಧನದಿಂದ ಕುಮಾರನ ವಿಮೋಚನೆ

ಜಯಂತಿ ಅಮೃತೇಶ್
೪೦ ಕೃತ್ತಿಕಾ, ಆರನೆಯಮುಖ್ಯ ರಸ್ತೆ
ಸರಸ್ವತೀಪುರ, ಮೈಸೂರು-೫೭೦ ೦೦೯

ಅದೋ ಅಲ್ಲಿ ನಿಂತಿದ್ದಾನೆ ನನ್ನ ಮಗ; ತಲೆಯಲ್ಲಿ ಪೊದರಿನಂತೆ ಬೆಳೆದಿರುವ ಕೂದಲಿನ ಜೊಂಪೆ ಕತ್ತಿನಲ್ಲಿ ಜೋತಾಡುತ್ತಿರುವ 'ಟೈ' ನೊಂದಿಗೆ..''ಸರಿ.., ನಾನು ಬಂದಿದ್ದೇನೆ''... ಎನ್ನುತ್ತಾನೆ.

ಅವನು ಎಷ್ಟು ಸಮಯದವರೆಗೆ ಇಲ್ಲಿರಲು ಬಂದಿದ್ದಾನೆ ಎನ್ನುವ ವಿಷಯವನ್ನು ಕೇಳಬಾರದೆಂದು ನನಗೆ ಗೊತ್ತಿದೆ. ಆದುದರಿಂದ ನಾನವನಿಗೆ ಹೇಳುತ್ತೇನೆ, '' ನೀನು ಯಾವ ಉಡುಪನ್ನು ಧರಿಸಿ ಹೊರಡುತ್ತೀಯೆಂದು ನಾನು ನೋಡಬೇಕು. ಏಕೆಂದರೆ ನಿನ್ನೆ ನೀನು ಧರಿಸಿದ್ದ ಅಂಗಿಯು ಅತ್ಯಂತ ಕೊಳಕಾಗಿತ್ತು''. ಆಗ ಅವನು ತನ್ನ ಕಾತುರದ ನೋಟವನ್ನು ಅಲ್ಲೇ ಇರುವ ತನ್ನ ಸ್ನೇಹಿತರ ಗುಂಪಿನತ್ತ ಹರಿಸುತ್ತಾನೆ. ಅವರೆಲ್ಲರೂ ತಲೆಯನ್ನು ಕೆಳಗಡೆಗೆ ಜೋತು ಹಾಕಿಕೊಂಡು ಈ ಮಾತುಗಳನ್ನೂ-ವ್ಯಾಥ್ಯೂಗೆ ಅತ್ಯಂತ ನೋವುಂಟು ಮಾಡುತ್ತಿರುವ ಈ ಸಂಸ್ಕಾರವನ್ನೂ ತಾವು ನೋಡಿಯೇ ಇಲ್ಲವೇನೋ ಎಂಬಂತೆ ಅಡುಗೆ ಕೋಣೆಯಲ್ಲಿ ಅಲ್ಲಿಂದಿಲ್ಲಿಗೆ ಓಡಿಯಾಡುತ್ತಿದ್ದಾರೆ.

ಅವನು ರಾತ್ರಿಯೂಟಕ್ಕೆ ಮನೆಗೆ ಬರುವುದಿಲ್ಲವೆಂದು ಹೇಳುತ್ತಾನೆ . ಆಗ ನಾನು, ''ನೀನು ರಾತ್ರಿಯನ್ನು ಎಲ್ಲಿ ಕಳೆಯು ತ್ತೀಯ ಎನ್ನುವುದನ್ನು ದೂರವಾಣಿಯ ಮೂಲಕ ತಿಳಿಸಲು ಮರೆಯಬೇಡ. ಈ ಸಲ ನೀನಿದನ್ನು ಮರೆತರೆಏನಾಗಬಹುದೆಂದು ಗೊತ್ತುಂಟೋ. ಈ ಮಾತು ಈಗ ನಿರ್ಧಾರವಾದಂತೆ'' ಎನ್ನುತ್ತೇನೆ. ಅವನು ನನ್ನ ಕಡೆಗೆ ಕರುಣಾಜನಕ ದೃಷ್ಟಿಯಿಂದ ದಿಟ್ಟಿಸಿದ. ಒಬ್ಬ ವೈದ್ಯನು ರೋಗಿಗೆ ನಿಜ ಸಂಗತಿಯನ್ನು ತಿಳಿಸಿ ದಾಗ ಅದೇಕ್ಷಣ ಅವನು ಸಾಯಬಹುದೇನೋ ಎನ್ನುವ ಹಾಗೆ ದಿಟ್ಟಿಸಿದ. ಆದರೆ ನನಗೆ ನಿಶ್ಚಯವಾಗಿ ತಿಳಿದದ್ದು ಇದು. ನನ್ನ ಮಗನ ಮೇಲಿನ ಹಿಡಿತವನ್ನು ನಾನು ಕಳೆದುಕೊಂಡಿದ್ದೇನೆ ಎಂಬುದು !

ಕೆಲವರು ಇದನ್ನು ಹೋದರೆ ಹೋಗಲಿ ಬಿಡಿ ಎನ್ನುತ್ತಾರೆ. ಆದರೆ ಇದು ತಮಗೇ ಅನ್ವಯಿಸಿದಾಗ ಮಾತ್ರ ಅದರ ಅನ್ವಯಗಳು ಅರ್ಥವಾಗಬಲ್ಲವು. ೧೪ ಅಥವಾ ೧೫ ವರ್ಷಗಳವರೆವಿಗೂ ಅವನನ್ನು ಬಿಟ್ಟು ಎಲ್ಲಿಗೂ ಹೋಗಿಲ್ಲ. ಒಂದು ನಿಮಿಷವೂ ಬಿಡದೇ ಅವನನ್ನು ಗಮನಿಸುತ್ತಾ ಬಂದಿದ್ದೇವೆ. ಸ್ನಾನದ ಕೋಣೆಯಲ್ಲಿ ಜಾರಿ ಬೀಳುವನೇನೋ ಎನ್ನುವ ಶಂಕೆ, ಶಾಲಾ ಮೈದಾನದಲ್ಲಿ, ಅಂಗಡಿ ಬೀದಿಗಳಲ್ಲಿ ಅವನನ್ನು ಯಾರಾದರೂ ಅಪಹರಣ ಮಾಡಬಹುದೇನೋ ಎನ್ನುವ ಹೆದರಿಕೆ, ದೂರದರ್ಶನ ಹೆಚ್ಚು ಹೆಚ್ಚು ವೀಕ್ಷಿಸಿದರೆ ಅವನ ಮನಸ್ಸು ಎಲ್ಲಿ ಹಾಳಾಗಿ ಹೋಗುವುದೋ ಎನ್ನುವ ಆತಂಕ-ಹೀಗೆಲ್ಲ ಇದ್ದುವು ನನ್ನ ಯೋಚನೆಗಳು.

ರಸ್ತೆಯ ಒಂದು ಬದಿಯಲ್ಲಿ ನಾವು ವಾಸವಾಗಿದ್ದೇವೆ, ಅವನ ಸಹಪಾಠಿಗಳೆಲ್ಲ ಮತ್ತೊಂದು ಬದಿಯಲ್ಲಿದ್ದಾರೆ. ಅವನ ಸಾಮಾಜಿಕ ಪ್ರಜ್ಞೆಗಳಿಗೆಲ್ಲ ನಾವೇ ಹೊಣೆಗಾರರು. ಕೇವಲ ಎರಡು ವರ್ಷಗಳ ಹಿಂದೆ ಮಾತ್ರ ಅವನನ್ನು ಒಂಟಿಯಾಗಿ ರಸ್ತೆ ದಾಟಲು ಅನುಮತಿ ಕೊಟ್ಟಿತ್ತು. ಅವನ ಜೀವಕ್ಕೆ ಅವನೇ ಹೊಣೆಗಾರನೆಂಬುವುದನ್ನು ನಾವು ಒಪ್ಪಿಕೊಳ್ಳ

೨೦೦೦ನೇ ಜೂನ್ ತಿಂಗಳ 'ರೀಡರ್ಸ್ ಡೈಜೆಸ್ಟ್'ನಲ್ಲಿ ಪ್ರಕಟವಾದ ಮಾರೀನ್ ಫ್ರೀಲೇ ಯವರ ''ಇಂಡಿ ಪೆ... ಡೇ-ಫಾರ್ ಮೈ ಸನ್'' -ಎನ್ನುವ ಲೇಖನದ ಭಾವಾನುವಾದ.

ಬೇಕೇನೋ ಹೌದು. ಆದರೆ ಅವನು ತನ್ನ ಸಮ ವಯಸ್ಕರಂತೆ ರಸ್ತೆ ದಾಟುವಾಗ ಎರಡೂ ಪಾರ್ಶ್ವಗಳನ್ನು ನೋಡುವುದೇ ಇಲ್ಲ. ತಾನು ಅಮರನೆಂದು ಅಂದುಕೊಂಡಿದ್ದಾನೆ.

ಅವನು ಹೇಳುವ ವಾಸ್ತವಿಕ ಪ್ರಪಂಚದ ತತ್ವವನ್ನು ನಾನು ಒಪ್ಪಿಕೊಳ್ಳುವುದಿಲ್ಲ ಎಂದು ಅವನಿಗೆ ಗೊತ್ತಿದೆ. ''ಅಮ್ಮ, ನೀನು ಯೋಚಿಸ ಬೇಡ. ನಿನಗೆ ಸಂತೋಷವಾಗುವುದಾದರೆ ನಾನು ಫೋನಿನ ಮೂಲಕ ತಿಳಿಸುವೆನು'' ಎನ್ನುತ್ತಾನೆ.

ಅವನು ಹೇಳಿದ್ದು ಸರಿ. ನನಗೆ ಕಿರುಚಿ ಕೊಳ್ಳಬೇಕು ಎನ್ನಿಸುತ್ತದೆ. ನನ್ನ ತಂದೆ ತಾಯಿಯರು ನನ್ನ ಭದ್ರತೆಯ ಬಗ್ಗೆ ಕಾಳಜಿ ವಹಿಸಿದಾಗ ನಾನು ಅವರ ಕಡೆಗೆ ತಿರಸ್ಕಾರದ, ಅವಹೇಳನದ ನಗೆ ನಕ್ಕಿದ್ದೆ. ಇವನು ಏಕೆ ಹಾಗೆ ಮಾಡಲಿಲ್ಲ ? ನಾನು ಹೇಳಿದ ಹಾಗೆ ಸುಳ್ಳು ಹೇಳುವುದಾದರೆ ಹೇಳು, ಆದರೆ ನಿಜವನ್ನೇ ಹೇಳಿ ನನ್ನನ್ನು ಧೃತಿಗೆಡಿಸಬೇಡ ?

ಈಗಾಗಲೇ ನಾನು ಭಾನುವಾರದ ರಾತ್ರಿಯ ಹಸ್ತಪ್ರತಿ ಬರೆಯಬಲ್ಲೆ. ''ಎಂತಹ ನೀರಸನಾದ ರಜೆಯದಿನ'' ಎನ್ನುವನು. ''ಹೊಸತೇನೂ ಇಲ್ಲವೇ ಇಲ್ಲ'' ಎಂದು ಹೇಳುವನು. ಇದಾದ ಮೇಲೆ ಒಬ್ಬ ಸ್ನೇಹಿತನು ಅತಿಯಾದ ಮಾದಕ ಪಾನೀಯಗಳ ಸೇವನೆ ಯಿಂದಾಗಿ ದವಾಖಾನೆಗೆ ಸೇರಿಸಲ್ಪಟ್ಟಿದ್ದು, ಒಬ್ಬ ಸ್ನೇಹಿತನು ಇವನ ತಲೆಯಮೇಲೆ ಮೂರನೇ ಮಹಡಿಯಿಂದ ಶಿರಸ್ತ್ರಾಣವನ್ನು ಹಾಕಿ ಕೊಳ್ಳಲು ಪ್ರಯತ್ನಿಸಿದ್ದು, ಮತ್ತೊಬ್ಬನು ರಸ್ತೆಯ ಕಂಬಗಳಿಗೆ ತನ್ನ ತಂದೆಯ ಕಾರನ್ನು ಗುದ್ದಿಸಿದ್ದು... ಇತ್ಯಾದಿ.

ನಾನು ಹೆದರಿಕೆಯಿಂದ ಚೀರಿದಾಗ ಮ್ಯಾಥ್ಯೂ ಹೇಳುವುದೇನೆಂದರೆ, ''ನೀನು ಏತಕ್ಕಾಗಿ ಗೊಣಗುತ್ತಿದ್ದೀಯೆಂದು ತಿಳಿಯದು. ನೀನೇ ಅಲ್ಲವೇ ನನಗೆ ಎಲ್ಲ ಸುದ್ದಿ ಸಮಾಚಾರ ಗಳನ್ನು ಮುಚ್ಚು ಮರೆಯಿಲ್ಲದೇ ನೇರವಾಗಿ ತಿಳಿಸಬೇಕು ಎಂದು ಹೇಳಿದ್ದು'' ಎನ್ನುತ್ತಾನೆ.

ಹೌದು ಹೇಳಿದ್ದೆ. ಯಾವಾಗ ಎಲ್ಲ ಸುದ್ದಿ ಸಮಾಚಾರಗಳೂ ಒಪ್ಪಿಕೊಳ್ಳಲೇಬೇಕಾದಂತಹ ಮೆಚ್ಚಿಗೆ, ಶ್ಲಾಘನೆಗಳಿಂದ ಕೂಡಿದಾಗ ಮಾತ್ರ ಎಂದು ಹೇಳಿದ್ದೆ. ಇದರಿಂದಲೇ ನಾನೀಗ ವಂಚಿತಳಾಗುತ್ತಿರುವುದು. ಏನೂ ಅರಿಯದ ಒಂದು ಮುಗ್ಧ ಮಗುವಿಗೆ ಪ್ರಪಂಚವನ್ನು ವಿವರಿಸಿ ತಿಳಿಸುವಾಗ ಆಗುವ ಸಂತೋಷವನ್ನು ಅನೇಕ ಸಲ ನಾವೇ ತಪ್ಪಿತಸ್ಥರಾಗುತ್ತೇವೆ. ಹೇಗೆಂದರೆ ಮರದ ರೆಂಬೆಗಳಲ್ಲಿದ್ದ ಮೊಗ್ಗುಗಳನ್ನು ತೋರಿಸಿ. ಅವು ಕೆಲವು ತಿಂಗಳುಗಳಾದ ಮೇಲೆ ಏನಾಗಿ ಬದಲಾವಣೆ ಹೊಂದಬಹುದು ಎನ್ನುವ ಅಂಶವನ್ನು ಮಕ್ಕಳ ಮಾತಿನಲ್ಲಿ ವರ್ಣಿಸುತ್ತಿದ್ದಾಗ ಮ್ಯಾಥ್ಯೂ ನಾನು ದೇವರೇನೋ ಎಂಬಂತೆ ನನ್ನತ್ತ ನೋಡುತ್ತಿದ್ದ.

ಆಗಿನ ಕಾಲದಲ್ಲಿ ಮ್ಯಾಥ್ಯೂ ಒಂದು ಮಾತನ್ನು ಮಾತ್ರ ನಂಬುತ್ತಿರಲಿಲ್ಲ. ಅದೇನೆಂದರೆ, ತನ್ನ ತಾಯಿಯ ಹಿಂದೆಯೇ ಸುತ್ತುತ್ತಾ ಆಕೆಯ ಮಾತನ್ನೇ ನಂಬಿ ಕೊಂಡಿರಲೇ ಬೇಕಾಗಿಲ್ಲ ಎನ್ನುವ ಕಾಲವೂ ಬರುತ್ತದೆ ಎನ್ನುವುದನ್ನು. ತಾನು ಒಬ್ಬ ದೊಡ್ಡ ಮನುಷ್ಯನಾದಾಗ ಮೊದಲ ಕೆಲಸವೇನೆಂದರೆ ಅಮ್ಮನಿಗೆ ಸ್ನಾನದ ಕೋಣೆ ಶುಚಿಗೊಳಿಸಲು ಸಹಾಯ ಮಾಡುವೆನು ಎಂದು ಹೇಳುತ್ತಿದ್ದ.

ಆದರೆ ಅವನು ಅದನ್ನು ಯಾವತ್ತೂ ಮಾಡಲಿಲ್ಲ. ಆದರೆ ನಾನು ಆಳುವ ತನಕವೂ ನನ್ನ ರಾಜ್ಯವು ಸ್ಥಿರವಾಗಿದ್ದಿದ್ದಕ್ಕೆ ನಾನು ಕೃತಜ್ಞಳಾಗಿರಬೇಕು. ಬಿರುಸಿನ ರಸ್ತೆ ಸಂಚಾರ ಮತ್ತು ಮಕ್ಕಳ ಅಪಹರಣಕಾರರು ಇಲ್ಲದಿದ್ದಿದ್ದರೆ ಮ್ಯಾಥ್ಯೂನಿಗೆ ತನ್ನ ಪಕ್ಕದಲ್ಲಿ ಬೇರೊಂದು ಪ್ರಪಂಚ ಇದೆ ಎನ್ನುವುದೂ, ಅಲ್ಲಿ ಹಿರಿಯರ ಒಪ್ಪಿಗೆ ಇಲ್ಲದೆಯೇ ಜೀವಿಸಿರ ಬಹುದು ಎನ್ನುವ ವಿಷಯವೆಲ್ಲ ತಿಳಿದು ಬಿಡುತ್ತಿತ್ತು.

ಆ ದಿನ ಹಿಮಕರಗಿದ ಆ ಕ್ಷಣ ನನಗೆ ಚೆನ್ನಾಗಿ ನೆನಪಿದೆ. ಇದು ನಡೆದದ್ದು ಆ ಚಿಕ್ಕ ಬೆಟ್ಟದ ಕಣಿವೆಯಲ್ಲಿ. ಅದನ್ನು ಹತ್ತುವುದು ನನ್ನ ಉದ್ದೇಶವೇನೂ ಆಗಿರಲಿಲ್ಲ. ನನಗೆ ಶಿಖರಗಳೆಂದರೆ ಹೆದರಿಕೆ; ಮ್ಯಾಥ್ಯೂನಿಗೂ ಅಷ್ಟೆ. ಆದರೆ ಅದು ಮೇಲಿನಿಂದ ಕೆಳಗಿನ ದೃಶ್ಯವನ್ನು ನೋಡುವವರೆಗೆ ಮಾತ್ರ. '''ಅಮ್ಮಾ, ಇದು ಎಷ್ಟು ಸುಂದರವಾಗಿದೆ? ನೀನೇಕೆ ನನಗೆ ಹೇಳಲೇ ಇಲ್ಲ?'' ಎಂದು ಉದ್ಗರಿಸಿದ.

ಆ ದಿನದಿಂದಲೂ ಅವನು ಪರ್ವತಾರೋಹಣವನ್ನು ಮಾಡುತ್ತಲೇ ಇದ್ದಾನೆ. ನನಗೆ ತಿಳಿಯದ ಸಂಗೀತ, ನನಗೆ ಪರಿಚಯವಿಲ್ಲದ ಅವನ ಸ್ನೇಹಿತರು, ನನಗೆ ಅರ್ಥವಾಗದ ಭೌತಶಾಸ್ತ್ರ ಇವೆಲ್ಲದರ ಬಗ್ಗೆ ಮಾತನಾಡುತ್ತಾನೆ. ಈಗ ಪರಿಸ್ಥಿತಿ ತಿರುಗುಮುರುಗಾಗಿದೆ. ಅವನು ಹೊರಗಡೆ ಸುತ್ತುತ್ತಾನೆ, ನಾನು ಒಳಗಿರುತ್ತೇನೆ.

ಹೊರಗಡೆ ಹೋಗುವಾಗ ಅವನು ನನ್ನೆದುರು ತಿರುಗುತ್ತಾ, ತಾನು ಅದೇ ನನ್ನ ಯ ಅಸಹ್ಯಕರವಾದ ಅಂಗಿಯನ್ನು ಹಾಕಿಕೊಂಡಿದ್ದೇನೆಂದು ತೋರಿಸಿಯೇ ಹೋಗುತ್ತಾನೆ. ನಾನು ಅವನಿಗೆ ಅಚ್ಚುಕಟ್ಟುತನದ ಬಗ್ಗೆ ತಿಳಿಸಿ ಹೇಳಿ ಭಾಷಣ ಕೊಡುತ್ತಿದ್ದರೆ ಅವನ ಕಣ್ಣುಗಳು ಹೊಳೆಯುತ್ತಿರುತ್ತದೆ. ''ನೀನು ಬೇಸಗೆಯ ಉದ್ಯೋಗವನ್ನು ಮರೆತುಬಿಡು. ತಿಳಿಯಿತೇನು? ನೀನು ಈ ತರಹ ಕಳ್ಳನಂತೆ ಕಾಣಿಸಿಕೊಂಡರೆ ಯಾರೂ ನಿನಗೆ ಕೆಲಸವನ್ನು ಕೊಡಲಾರರು'' ಎಂದು ನಾನು ಹೇಳಿದಾಗ ಅವನು ''ಸರಿ ಅಮ್ಮಾ , ಹಾಗಾದರೆ ನಾನೀಗ ಹೋಗಲೇನು ಎನ್ನುತ್ತಾನಲ್ಲ''.

''ಹೋಗು, ಖಂಡಿತಹೋಗು'', ಎಂದು ನಾನು ಹೇಳುತ್ತೇನೆ. ಅವನು ತನ್ನ ಸ್ನೇಹಿತರೊಡಗೂಡಿ ಹೋಗುತ್ತಿರುವಾಗ- ನಾನು ಸುಮ್ಮನಿರುತ್ತೇನೆ. ಅಷ್ಟಲ್ಲದೇ ಅವನ ಹಿಂದೆ ಓಡುತ್ತಾ, ಅಳುತ್ತಾ ''ನೀನೇಕೆ ಸ್ನಾನದ ಕೋಣೆಯ ಬಗ್ಗೆ ನನಗೆ ಸುಳ್ಳು ಹೇಳಿದೆ?'' ಎಂದು ಚೀರಲು ಸಾಧ್ಯವೇನು ???

ನಮ್ಮ ಮನಸು ಶುದ್ಧವಾಗಿದ್ದರೆ ಜಗತ್ತು ಸಿಹಿಯಾಗಿದೆ ಎನಿಸುತ್ತದೆ. ನಮ್ಮ ಮನಸ್ಸು ಅಶುದ್ಧವಾಗಿದ್ದರೆ ಜಗತ್ತು ಹುಳಿಯಾಗಿದೆ ಎನಿಸುತ್ತದೆ.

-ಜವಹರಲಾಲ್ ನೆಹರು

ಗ್ರಹಗತಿಯ ತಿದ್ದುವನೆ ಜೋಯಿಸನು ಜಾತಕದಿ ?
ವಿಹಿತವಾಗಿಹುದದರ ಗತಿ ಸೃಷ್ಟಿವಿದಿಯಿಂ
ಸಹಿಸದಲ್ಲದೆ ಮುಗಿಯದಾವ ದಶೆ ಬಂದೊಡಂ
ಸಹನೆ ವಜ್ರದ ಕವಚ ಮಂಕುತಿಮ್ಮ.

ಒಂದು ತುಂಡು ಹುರಿ

ಎಚ್. ಆರ್. ಚಂದ್ರವದನ ರಾವ್
೨೮೭೭/೧೦, ಚಾಮುಂಡಿಪುರಂ
ಮೈಸೂರು-೫೭೦ ೦೦೪

ಅಂದು ನರಸೀಪುರದ ಸಂತೆ. ರೈತಾಪಿ ಜನ ಕೊಳ್ಳಲು, ಮಾರಲು ಸಂತೆಗೆ ಹೊರಟಿದ್ದರು. ಉಳುವ ಕಷ್ಟದ ಕೆಲಸದಲ್ಲಿ ನಿರಂತರವಾಗಿ ನಿರತವಾಗಿರುವ ರೈತರ ಕಾಲುಗಳು ಸೊಟ್ಟವಾಗಿದ್ದವು. ನೇಗಿಲು ಹಿಡಿದು ಒಂದು ಭುಜ ಕೆಳಕ್ಕೆ ಒಂದು ಭುಜ ಮೇಲಕ್ಕೆ ಹೋಗಿತ್ತು, ಪಾದಗಳು ಹರಡಿಕೊಂಡಿದ್ದವು. ದೇಹವನ್ನು ಮುಂದೆ ಮಾಡಿ, ಬಾಗಿಸಿ ನಿಧಾನವಾಗಿ ಅವರು ಹೋಗುತ್ತಿದ್ದರು. ಹಾಕಿಕೊಂಡ ಬಟ್ಟೆ ಬಣ್ಣ ಹೋಗಿ ಹರಕಲಾಗಿತ್ತು. ಕೆಲವರು ಹಸುವನ್ನೋ, ಕುರಿಯನ್ನೋ, ಮೇಕೆಯನ್ನೋ ಹಗ್ಗಹಾಕಿ ಎಳೆದುಕೊಂಡು ಹೋಗುತ್ತಿದ್ದರೆ, ಅವರ ಹೆಂಡತಿಯರು ಅವು ಬೇಗನೆ ಹೋಗುವಂತೆ ಅವುಗಳ ಹಿಂದೆ ಸಣ್ಣಕೊಂಬೆಯಿಂದ ಅವನ್ನ ಹೊಡೆಯುತ್ತಿದ್ದರು. ಸೊಂಟದ ಮೇಲೆ ಅಥವಾ ತಲೆಯ ಮೇಲೆ ಇಟ್ಟುಕೊಂಡ ಕೆಲವರ ಕುಕ್ಕೆಗಳಲ್ಲಿ ಕೋಳಿಗಳು ಅಥವಾ ತರಕಾರಿ ಕಾಣಿಸುತ್ತಿತ್ತು. ಹೆಂಗಸರು ಬೆನ್ನನ್ನು ಬಗ್ಗಿಸದೆ ನೇರವಾಗಿ ಉತ್ಸಾಹದಿಂದ ಹೆಜ್ಜೆ ಹಾಕುತ್ತಿದ್ದರು. ಅನುಕೂಲಸ್ಥರು ತಮ್ಮ ಗಾಡಿಗಳಲ್ಲಿ ಸಾಮಾನುಗಳನ್ನು ಹೇರಿಕೊಂಡು ಹೊರಟಿದ್ದರು.

ಸಂತೆ ಮೈದಾನದಲ್ಲಿ ಜನರ ಅರುಚಾಟ, ಕಿರುಚಾಟ, ಹೆಂಗಸರ ಕೀರಲು ಧ್ವನಿ, ಪ್ರಾಣಿಗಳ ಚೀತ್ಕಾರ ನಿರಂತರವಾಗಿ ಕೇಳಿಸುತ್ತಿತ್ತು. ಕೊಟ್ಟಿಗೆಯ, ಸತ್ತ ಮೀನಿನ, ಜನರ ಬೆವರಿನ ದುರ್ಗಂಧ ಅಲ್ಲಿ ತುಂಬಿತ್ತು.

ಬೀರನಹಳ್ಳಿ ಹುಚ್ಚಯ್ಯ ಮೈದಾನದ ಬಳಿ ಬರುತ್ತಿರುವಾಗ ಅವನಿಗೆ ಒಂದು ತುಂಡು ಹುರಿ ಕಾಣಿಸಿತು. ಮಿತವ್ಯಯಿಯಾಗಿದ್ದ ಅವನಿಗೆ ಹುರಿ ಪ್ರಯೋಜನಕ್ಕೆ ಬರುತ್ತದೆ ಎಂದೆನಿಸಿ, ಸಂಧಿವಾತ ರೋಗದಿಂದ ಮಂಡಿ ಮಡಿಸಲಾಗದೆ ಹೋದರೂ, ಕಷ್ಟಪಟ್ಟು ಬಗ್ಗಿ ಅದನ್ನು ಎತ್ತಿಕೊಂಡ. ಹುರಿಯನ್ನು ಬೆರಳಿಗೆ ಸುತ್ತು ಕೊಳ್ಳುತ್ತಿರುವಾಗ ಅವನ ಮನೆಯ ಬಳಿಯೇ ಇದ್ದ ಕಮ್ಮಾರ ಕರಿಯ ಅದನ್ನು ನೋಡಿದ. ಹಿಂದೆ ಇಬ್ಬರೂ ಒಟ್ಟಿಗೆ ವ್ಯಾಪಾರ ಮಾಡು ತ್ತಿದ್ದರು, ಈಗ ಅವರಲ್ಲಿ ಸ್ನೇಹವಿಲ್ಲ, ಬದಲು ದ್ವೇಷ

ತಾನು ಬೀದಿಯಲ್ಲಿ ಬಿದ್ದಿದ್ದ ಹುರಿಯನ್ನು ತೆಗೆದುಕೊಂಡದ್ದನ್ನು ವೈರಿ ನೋಡಿದನಲ್ಲ ಎಂಬ ನಾಚಿಕೆ ಹುಚ್ಚಯ್ಯನಿಗೆ. ಅವನು ಕೂಡಲೇ ಅದನ್ನು ಷರ್ಟನ ಅನಂತರ ಚಡ್ಡಿಯ ಜೋಬಿಗೆ ಹಾಕಿಕೊಂಡು ಇನ್ನು ಏನನ್ನೋ ಹುಡುಕುತ್ತಿರುವಂತೆ ನೆಲವನ್ನೇ ನೋಡುತ್ತಿದ್ದು, ನಂತರ ಸಂತೆಯ ಕಡೆಗೆ ನಡೆದ. ಸ್ವಲ್ಪ ಹೊತ್ತಿನಲ್ಲೇ ಜನರ ಸಮೂಹ ಸೇರಿದ.

ರೈತಾಪಿ ಜನಕ್ಕೆ ತಮ್ಮನ್ನು ಮೋಸಮಾಡುತ್ತಾರೆಂಬ ಭಯ. ಹೆಂಗಸರು ತಮ್ಮ ಕಾಲುಗಳ ಬಳಿ ಕುಕ್ಕೆಯನ್ನಿಟ್ಟು ಕಾಲುಗಳನ್ನು ಕಟ್ಟಿದ್ದ ಕೋಳಿಗಳನ್ನು ಹೊರಗೆ ತೆಗೆದಿಟ್ಟರು. ತರಕಾರಿಗಳನ್ನು ತಂದಿದ್ದವರೂ ಹಾಗೆಯೇ ಮಾಡಿದರು. ಗಿರಾಕಿಗಳಿಗೆ ಅವುಗಳ ಬೆಲೆ ಹೇಳುವಾಗ ಅವರ ಮುಖದಲ್ಲಿ ಯಾವ ಭಾವನೆಯೂ ಕಾಣಿಸುತ್ತಿರಲಿಲ್ಲ. ಗಿರಾಕಿಗಳು ಹೇಳಿದ ಬೆಲೆಗೆ ಕೊಳ್ಳದಿದ್ದಾಗ 'ನಿಮಗೆ ಅಂತ ಕೊಡಿದ್ದೀನಿ' ಎಂದು ಹೇಳುತ್ತಾ ಅವರು ಕೇಳಿದ ಬೆಲೆಗೆ ತಂದದನ್ನು ಮಾರಿ, ಬೇಕಾದುದನ್ನು ಕೊಳ್ಳುತ್ತಿದ್ದರು.

ಮೂಲ: ಮೊಪಾಸಾನ 'A piece of string'

ಸಂಜೆಯ ಸೂರ್ಯ ಪಶ್ಚಿಮದಲ್ಲಿ ಇಳಿಯುತ್ತಿದ್ದ. ಸಂತೆಗೆ ಸೇರಿದ್ದ ಜನಸ್ತೋಮ ಕರಗುತ್ತಾ ಬಂತು.

ಜಾಧವ್‌ನ ಮಿಲಿಟರಿ ಹೋಟೆಲ್‌ನಲ್ಲಿ ಜನ ತುಂಬಿದ್ದರು. ಒಳಗೆ ಜ್ವಾಲೆಯ ಮೇಲೆ ತಿರುಗುವ ಕಂಬಿಯ ಮೇಲೆ ಕುರಿಕಾಲು, ಕೋಳಿ ಮರಿಗಳನ್ನು ಸುಡುತ್ತಿದ್ದರು. ಹುರಿದ ಮಾಂಸದ ಘಮ ಘಮ ಅಲ್ಲಿದ್ದವರ ಹೊಟ್ಟೆ ಹಸಿವನ್ನು ಜಾಸ್ತಿ ಮಾಡಿತ್ತು. ಎಲ್ಲರ ಬಾಯಿಯಲ್ಲೂ ನೀರು.

ಹೋಟೆಲ್‌ನ ಮಾಲಿಕ ಶ್ರೀನಿವಾಸ ಜಾಧವ್ ಒಬ್ಬ ಶ್ರೀಮಂತ. ಅವನಿಗೆ ಹತ್ತಿರದ ಹಳ್ಳಿಯಲ್ಲಿ ಹದಿನೈದು ಎಕರೆ ಗದ್ದೆ, ಎರಡು ಎಕರೆ ಬಾಳೆ ತೋಟ ಇದೆ. ಜೊತೆಗೆ ಅವನು ಲೇವಾದೇವಿಯನ್ನು ಮಾಡುತ್ತಾನೆ. ಹೋಟೆಲ್‌ನ ಪಕ್ಕದಲ್ಲಿ ಪಡಖಾನೆ. ಕೆಲವರು ಇಲ್ಲಿ ತಿಂದು ಕುಡಿಯಲು ಪಡಖಾನೆಗೆ ಹೋದರೆ, ಕೆಲವರು ಕುಡಿದು, ತಿನ್ನಲು ಹೋಟೆಲ್‌ಗೆ ಬರುತ್ತಾರೆ. ಎಲ್ಲರೂ ತಾವು ಕೊಂಡ, ಮಾರಿದ ವಿಷಯಗಳನ್ನೇ ಹೇಳುತ್ತಿರುತ್ತಾರೆ, ಆದ ಲಾಭ ನಷ್ಟದ ಬಗ್ಗೆ ಸ್ನೇಹಿತರಿಗೆ ತಿಳಿಸುತ್ತಿರುತ್ತಾರೆ ; ಬೆಳೆ ಬಗ್ಗೆ, ಮಳೆ ಬಗ್ಗೆ ಮಾತನಾಡುತ್ತಿರುತ್ತಾರೆ.

ಹೋಟೆಲ್‌ನ ಮುಂದೆ ಡಂಗುರ ಹಾಕುವುದು ಕೇಳಿಸಿತು. ಕೆಲವು ಸೋಮಾರಿಗಳನ್ನು ಬಿಟ್ಟು ಎಲ್ಲರೂ ಎದ್ದು ಬಾಗಿಲಿನ ಬಳಿ ಬಂದರು. ಎಲ್ಲರ ಬಾಯಿಯಲ್ಲೂ ಏನೋ ತಿಂಡಿ.

ತಮಟೆ ಹೊಡೆಯುತ್ತಿದ್ದವನು ಹೊಡೆಯುವುದನ್ನು ನಿಲ್ಲಿಸಿ ಕೂಗಿ ಹೇಳುತ್ತಿದ್ದ ''ಇಲ್ಲಿನ ನಿವಾಸಿಗಳಿಗೂ ಮತ್ತು ಇತರ ಸಾರ್ವಜನಿಕರಿಗೂ ತಿಳಿಸುವುದು ಏನೆಂದರೆ ಇಂದು ಬೆಳಗ್ಗೆ ಸುಮಾರು ೧೧ ಗಂಟೆ ಸಮಯದಲ್ಲಿ ಸಂತೆ ಮೈದಾನದ ಬಳಿ ರಾಜಪ್ಪನವರ ಕಪ್ಪು ಬಣ್ಣದ ಪಾಕೆಟ್ ಬುಕ್ ಕಳೆದು ಹೋಗಿದೆ. ಅದರಲ್ಲಿ ನೂರು ರೂಪಾಯಿನ ಎರಡು ನೋಟುಗಳು, ವ್ಯಾಪಾರಕ್ಕೆ ಸಂಬಂಧಪಟ್ಟ ಕೆಲವು ಚೀಟಿಗಳೂ ಇದ್ದವು ಸಿಕ್ಕಿದವರು ಕೂಡಲೇ ಪಂಚಾಯ್ತಿ ಆಫೀಸಿಗೆ ಅಥವಾ ಪೋಲೀಸ್ ಸ್ಟೇಷನ್ನಿಗೆ ತಲುಪಿಸ ತಕ್ಕದ್ದು. ಹಾಗೆ ತಂದು ಕೊಟ್ಟವರಿಗೆ ಇಪ್ಪತ್ತು ರೂಪಾಯಿ ಬಹುಮಾನವಿದೆ''.

ತಮಟೆ ಹೊಡೆಯುವವನು ಮುಂದೆ ಸಾಗಿದ. ಸ್ವಲ್ಪ ದೂರದಲ್ಲಿ ಅವನು ಹೇಳುತ್ತಿದ್ದುದು ಕೇಳಿಸುತ್ತಿತ್ತು. ಹೋಟೆಲ್ಲಿದ್ದ ಜನ ಈಗ, ರಾಜಪ್ಪನವರ ಕಪ್ಪು ಪಾಕೆಟ್ ಬುಕ್ ಸಿಗಬಹುದೇ ಎಂದು ಚರ್ಚಿಸುತ್ತಿದ್ದರು, ತಿಂಡಿ ತಿಂದವರು ಅಥವಾ ಊಟಮಾಡಿ ಮುಗಿಸಿದವರು ಹಣಕೊಟ್ಟು ಹೊರಗೆ ಹೋಗುತ್ತಿದ್ದರು. ಅಷ್ಟರಲ್ಲಿ ಪೋಲೀಸ್ ಪ್ಯಾದೆ ಒಬ್ಬ ಹೊಸ್ತಿಲ ಬಳಿ ಬಂದು ನಿಂತು ಕೇಳಿದ ಇಲ್ಲಿ ಬೀರನಹಳ್ಳಿ ಹುಚ್ಚಯ್ಯ ಅನ್ನುವವರು ಇದ್ದಾರೆಯೇ?''

ಮೇಜಿನ ಆ ಕಡೆ ತುದಿಯಲ್ಲಿ ಕುಳಿತು ಟೀ ಕುಡಿಯುತ್ತಿದ್ದ ಹುಚ್ಚಯ್ಯ ''ಇಲ್ಲಿದ್ದೇನೆ'' ಎಂದ.

''ನಮ್ಮ ಹೆಚ್.ಸಿ., ಕೆಂಪಣ್ಣನವರು ನಿನ್ನನ್ನು ಕರೆದುಕೊಂಡು ಬಾ ಎಂದು ಹೇಳಿದ್ದಾರೆ. ನಿನ್ನೊಡನೆ ಮಾತನಾಡಬೇಕಾಗಿದೆಯಂತೆ, ಬಾ'' ಎಂದ ಪ್ಯಾದೆ.

ಗಲಿಬಿಲಿಗೊಂಡ ಹುಚ್ಚಯ್ಯ ಕುಡಿದ ಟೀಗೆ ಹಣ ಕೊಟ್ಟು ಬೆನ್ನು ಬಾಗಿಸಿ ಪೋಲೀಸ್‌ನವನ ಜೊತೆ ಹೊರಟ.

ಕಛೇರಿಯಲ್ಲಿ ಆರಾಮವಾಗಿ ಕುಳಿತು ಬೀಡಿ ಸೇದುತ್ತಿದ್ದ ಹೆಡ್ ಕಾನ್‌ಸ್ಟೇಬಲ್ ಕೆಂಪಣ್ಣ ಭಾರಿ ಆಳು, ಗಂಭೀರ ಮುದ್ರೆ, ಬಿಗಿಯಾದ ಭಾಷೆ.

''ಹುಚ್ಚಯ್ಯ, ನಿನಗೆ ರಾಜಪ್ಪನವರ ಪಾಕೆಟ್ ಬುಕ್ ಸಿಕ್ಕಿದೆಯಂತೆ. ನೀನು ಅದನ್ನು

ತೆಗೆದುಕೊಂಡಿದ್ದನ್ನು ನೋಡಿದ್ದಾರೆ''.

ಆಗಲೇ ಹೆದರಿ ಹಣ್ಣಾಗಿದ್ದ ಹುಚ್ಚಯ್ಯ ಅನುಮಾನ ತನ್ನ ಮೇಲೆ ಬಂದಿರುವುದನ್ನು ಅರಿತು, ದಿಗ್ಭ್ರಮೆಗೊಂಡು ಉಸಿರಿದ-

''ನಾನು.... ನಾನು... ನಾನು... ಪಾಕೆಟ್ ಬುಕ್ಕ ತೆಗೆದುಕೊಂಡ್ನೇ?''

''ಹೌದು, ನೀನು''.

''ಪ್ರಮಾಣಮಾಡಿ ಹೇಳ್ತಿನಿ.. ನಾನು ತೊಗೊಂಡಿಲ್ಲ. ನನ್ಗೆ ಗೊತ್ತಿಲ್ಲ''.

''ನಾಟ್ಕ ಆಡಬೇಡ್ವೊ ಮುದುಕ. ನೀನು ಎತ್ತಿಕೊಂಡದನ್ನು ನೋಡಿದವರು ಇದ್ದಾರೆ''.

''ಯಾರು ?''

''ಕಮ್ಮಾರ ಕರಿಯ''.

ಮುದುಕ ಜ್ಞಾಪಿಸಿಕೊಂಡ, ಅವನಿಗೆ ಅರ್ಥವಾಯಿತು. ಕರಿಯನ ಮೇಲೆ ಕೋಪ ಉಕ್ಕಿ ಮುಖ ಕೆಂಪಾಯಿತು.

''ನಾನು ಎತ್ತಿಕೊಂಡದ್ದು ಒಂದು ತುಂಡು ಹುರಿ, ಪಾಕೆಟ್ ಬುಕ್ ಅಲ್ಲ''. ಎನ್ನುತ್ತಾ ಜೋಬನ್ನು ತಡಕಾಡಿ ಒಳಗಿದ್ದ ತುಂಡು ಹುರಿಯನ್ನು ತೆಗೆದು ತೋರಿಸಿದ.

ಕೆಂಪಣ್ಣ, ಹುಚ್ಚಯ್ಯನ ಮಾತನ್ನು ನಂಬಲಿಲ್ಲ, ಅವನು ಕೇಳಿದ.

''ಕರಿಯನಿಗೆ ಪಾಕೆಟ್ ಬುಕ್ಕಿಗೂ, ಹುರಿಗೂ ವ್ಯತ್ಯಾಸ ಗೊತ್ತಾಗುವುದಿಲ್ಲವೇ?''

''ದೇವರಾಣೆ, ಸತ್ಯವಾಗಿ ಹೇಳ್ತೀನಿ. ನಾನು ತೊಗಂಡಿದ್ದು ಹುರಿ, ಕರಿಯ ಹೇಳಿದ್ದು ಸುಳ್ಳು, ನನ್ನನ್ನು ನಂಬಿ, ಮಹಾಸ್ವಾಮಿ''.

''ನೀನು ಅದನ್ನು ತೆಗೆದು ಕೊಂಡಮೇಲೆ, ಅದರಿಂದ ಏನಾದರೂ ಹಣ ಬಿದ್ದು ಹೋಯಿತೇ ಎಂದು ನೋಡುತ್ತಾ ಅಲ್ಲೇ ಇದ್ದೆಯಂತೆ''

''ನಾನು ನಿಂತಿದ್ದೆ ನಿಜ. ಆದರೆ ಪಾಕೆಟ್ ಬುಕ್ ನಾನು ಕಾಣಲಿಲ್ಲ, ನಾನು ತೆಗೆದು ಕೊಂಡದ್ದು ಹುರಿ.''

''ಸುಳ್ಳು''.

ಪ್ರತಿಭಟಿಸಿ ಪ್ರಯೋಜನವಿಲ್ಲವೆಂದು ಹುಚ್ಚಯ್ಯನಿಗೆ ಅನಿಸಿತು.

ಕರಿಯ ಬಂದ. ತಾನು ಹೇಳಿದ್ದು ಸತ್ಯವೆಂದು ಸಾರಿ ಸಾರಿ ಹೇಳಿದ. ಕರಿಯ, ಹುಚ್ಚಯ್ಯ ಒಬ್ಬರನ್ನೊಬ್ಬರು ಒಂದು ಗಂಟೆ ಬೈಯ್ದರು.

'ಬೇಕಾದರೆ ನನ್ನನ್ನು ತಲಾಷ್ ಮಾಡಿ' ಎಂದು ಕೆಂಪಯ್ಯನವರಿಗೆ ಹೇಳಿದ ಹುಚ್ಚಯ್ಯ.

ಪ್ಯಾದೆ ಅವನನ್ನು ಶೋಧಿಸಿದ. ಅವನ ಬಳಿ ಚಿಲ್ಲರೆ ಒಂದೆರೆಡು ರುಪಾಯಿ ಏನಾ ಪಾಕೆಟ್ ಬುಕ್ ಆಗಲೀ, ನೂರರ ನೋಟಾಗಲೀ ಇರಲಿಲ್ಲ.

ಕೆಂಪಯ್ಯನಿಗೆ ಏನು ಮಾಡಬೇಕು ಎಂದು ಗೊತ್ತಾಗದೆ ಹುಚ್ಚಯ್ಯನನ್ನು ಬಿಡುಗಡೆ ಮಾಡಿದ.

ಸಮಾಚಾರ ಎಲ್ಲಾ ಕಡೆ ಹಬ್ಬಿತು. ಜನ ಹುಚ್ಚಯ್ಯನನ್ನು ಕುತೂಹಲದಿಂದ ಸುತ್ತುಗಟ್ಟಿ ಪ್ರಶ್ನಿಸುತ್ತಾ ಬಂದರು.

ಹುಚ್ಚಯ್ಯ ಹುರಿಯ ವಿಷಯ ಹೇಳಿದ . ಯಾರೂ ಅವನನ್ನು ನಂಬಲಿಲ್ಲ ; ಬದಲು ನಕ್ಕರು.

ಊರಿನವರು, ಸ್ನೇಹಿತರು, ಅಲ್ಪ ಸ್ವಲ್ಪ ಗೊತ್ತಿರುವ ಜನರು-ಎಲ್ಲರನ್ನು ನಿಲ್ಲಿಸಿ ''ನೋಡಿ, ಸುಮ್ಮನೆ ನನ್ನ ಮೇಲೆ ಅಪವಾದ ಹೊರಿಸಿದರು. ನನಗೆ ರಸ್ತೆಯಲ್ಲಿ ಸಿಕ್ಕಿದ್ದು ಒಂದು ತುಂಡು ಹುರಿ, ಪಾಕೆಟ್ ಬುಕ್ ಅಲ್ಲ'' ಎಂದು ಆಣೆ ಇಟ್ಟು ಹೇಳಿ ಖಾಲಿ ಜೋಬನ್ನು ತೋರಿಸುತ್ತಾ ಬಂದ ಹುಚ್ಚಯ್ಯ. ಅವರು 'ಹೋಗಯ್ಯ, ಗೋತ್ತು,' ಎಂದು ಹೇಳಿ ಹೋಗುತ್ತಾ ನಗುತ್ತಿದ್ದರು. ತಾನು ಹೇಳುವುದನ್ನು ಜನ ನಂಬುತ್ತಿಲ್ಲವೆಂದು ಹುಚ್ಚಯ್ಯನಿಗೆ ಷಂಡ ಕೋಪ. ಕೋಪದಿಂದ ಕಿಡಿಕಾರಿದ, ಗೊಣಗುಟ್ಟಿದ.

ಕತ್ತಲಾಯಿತು. ಮೂವರು ಅಕ್ಕಪಕ್ಕದ ಮನೆಯವರೊಡನೆ ಹುಚ್ಚಯ್ಯ ಮನೆಗೆ ಹೊರಟ. ದಾರಿಯಲ್ಲಿ ಅವರಿಗೆ ಹುರಿ ಸಿಕ್ಕಿದ ಜಾಗ ತೋರಿಸಿ, ಹುರಿಯಿಂದ ಉಂಟಾದ ಕೋಲಾಹಲದ ಬಗ್ಗೆ ತಿಳಿಸಿದ. ಆದರೆ ಅವರು ಅವನು ಹೇಳಿದ್ದನ್ನು ನಂಬಲಿಲ್ಲ.

ಮೂರನೇ ದಿನ ಸುಮಾರು ಒಂದು ಗಂಟೆಗೆ ಶಿವಣ್ಣ ಎಂಬ ವಿದ್ಯಾರ್ಥಿ ತನಗೆ ಸಿಕ್ಕಿತೆಂದು ಪಾಕೆಟ್ ಬುಕ್ಕನ್ನು ಅದರಲ್ಲಿದ್ದ ಹಣವನ್ನು, ಚೀಟಿಗಳನ್ನು ಪೊಲೀಸ್ ಸ್ಟೇಷನ್ನಿಗೆ ತಂದು ಕೊಟ್ಟ. ಈ ವಿಷಯ ಎಲ್ಲಾ ಕಡೆ ತಟಕ್ಕನೆ ಹರಿಡಿತು. ಯಾರೋ ಹುಚ್ಚಯ್ಯನಿಗೆ ಸಂತಸದ ಸುದ್ದಿ ತಿಳಿಸಿದರು. ಸುಖಾಂತಕ್ಕೆ ಬಂದ ಘಟನೆಯನ್ನು ಹುಚ್ಚಯ್ಯ ಎಲ್ಲರಿಗೂ ಹೇಳುತ್ತಾ ಬಂದ. ಈಗ ಅವನು ಸಂತಸದ ಬುಗ್ಗೆ. ಹೆದ್ದಾರಿಯಲ್ಲಿ ಓಡಾಡುವ ಜನಕ್ಕೆ, ಮದ್ಯದಂಗಡಿಯಲ್ಲಿ ಕುಡಿಯುತ್ತಿರುವವರಿಗೆ, ಭಾನುವಾರ ದೇಗುಲಕ್ಕೆ ಹೋಗಿ ಬರುವವರಿಗೆ ಅವನು ಈ ವಿಷಯ ಹೇಳುತ್ತಿದ್ದ.

ಅವನು, ಸತ್ಯಸಂಧನ ಯಶಸ್ಸನ್ನು ಸುಳ್ಳು ಹೇಳಿ ಕಸಿದುಕೊಳ್ಳಲು ಹೇಗೆ ಸಾಧ್ಯ? ಎನ್ನುತ್ತಿದ್ದರೂ ಅವನ ಮನದಲ್ಲಿ ಏನೋ ಗಲಿಬಿಲಿ. ಏಕೆ ಅನ್ನುವುದು ಗೊತ್ತಿಲ್ಲ. ಅವನು ಹೇಳುವುದನ್ನು ಕೇಳುವಾಗ ಜನರು ತಮಾಷೆ ಮಾಡುತ್ತಿದ್ದಾರೆ ಎಂದು ಅವನಿಗೆ ಅನಿಸುತ್ತಿತ್ತು. ಅವರು ಮನಃಪೂರ್ವಕವಾಗಿ ಅವನು ಹೇಳುವುದನ್ನು ನಂಬುತ್ತಿರಲಿಲ್ಲ. ತನ್ನ ಹಿಂದೆ ಜನ ತನ್ನ ಬಗ್ಗೆ ಕೀಳಾಗಿ ಮಾತನಾಡುತ್ತಾರೆ ಅನ್ನುವ ಚಿಂತೆ ಅವನನ್ನು ಕಾಡಿಸಿತು.

ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾತನಾಡಲು ಮುಂದಿನ ಮಂಗಳವಾರ ಅವನು ನರಸೀಪುರಕ್ಕೆ ಹೊರಟ. ತನ್ನ ಮನೆ ಮುಂದೆ ನಿಂತಿದ್ದ ಕರಿಯ ತನ್ನನ್ನು ನೋಡಿ ನಕ್ಕ. ಏಕೆ? ಎದುರಿಗೆ ಸಿಕ್ಕ ಹನುಮನ ಬಳಿ ವಿಷಯವನ್ನು ಪ್ರಸ್ತಾಪಿಸುತ್ತಿರುವಾಗ ಮಧ್ಯದಲ್ಲೇ ಅವನು ಹೊಟ್ಟೆ ಕುಟ್ಟಿ ನಗುತ್ತಾ 'ನೀನು ಭಾರಿ ದಗಾಕೋರ' ಎಂದು ಹೇಳುತ್ತಾ ಹೊರಟು ಹೋದ. 'ದಗಾಕೋರ' ಎಂದು ಅವನು ಹೇಳಿದ್ದೇಕೆ?

ಜಾಧವ್ ಹೋಟೆಲ್‌ನಲ್ಲಿ 'ನಾನು ಪಾಕೆಟ್ ಬುಕ್ಕನ್ನು ಎತ್ತಿಕೊಳ್ಳಲಿಲ್ಲ ಅನ್ನುವುದು ಸಾಬೀತಾಯ್ತು, ಸದ್ಯ' ಎಂದಾಗ 'ಬಾಯಿ ಮುಚ್ಚಪ್ಪ. ಒಬ್ಬನಿಗೆ ಸಿಗುತ್ತದೆ, ಇನ್ನೊಬ್ಬ ತಂದು ಕೊಡ್ತಾನೆ. ಹಳೆ ತಂತ್ರ' ಎಂದು ಒಬ್ಬ ಹೇಳಿದ್ದು ಹುಚ್ಚಯ್ಯನಿಗೆ ಕಾಸಿದ ಸೀಸ ಕಿವಿಗೆ ಹಾಕಿದ ಹಾಗಾಯಿತು. ಅವನು ಪ್ರತಿಭಟಿಸಲು ಯತ್ನಿಸಿದ, ಆದರೆ ಅಲ್ಲಿದ್ದವರೆಲ್ಲಾ ನಕ್ಕರು.

ಕೋಪ, ನಾಚಿಕೆ, ಉದ್ವೇಗ, ಗಲಿಬಿಲಿ ಹುಚ್ಚಯ್ಯನಿಗೆ. ಇಷ್ಟು ಬೇಜಾರು, ನಿರುತ್ಸಾಹ, ನಿರಾಸೆ ಹಿಂದೆ ಯಾವಾಗಲೂ ಅವನಿಗೆ ಆಗಿರಲಿಲ್ಲ. ತನ್ನ ಬಗ್ಗೆ ಜನಕ್ಕೆ ಅನುಮಾನ ಎಂಬ ವಿಷಯ ಅವನ ಹೃದಯವನ್ನು ಈಟಿಯಿಂದ ತಿವಿದಂತಾಯಿತು. ಅವನು ಮನೆಗೆ ಹಿಂದಿರುಗಿದ.

ಯುದ್ಧದಲ್ಲಿ ಭಾಗವಹಿಸಿ ಬಂದಿದ್ದ ಯೋಧನನ್ನು ಸಮರದ ಬಗ್ಗೆ ಕೇಳುವಂತೆ, ಜನ ಅವನನ್ನು 'ಹುರಿಯ' ಬಗ್ಗೆ ಕೇಳಿ ನಗುತ್ತಿದ್ದರು. ಇದರಿಂದ ನೊಂದ ಹುಚ್ಚಯ್ಯ ಮನೋವ್ಯಾಧಿಯಿಂದ ಹಾಸಿಗೆ ಹಿಡಿದು, ಒಂದು ತಿಂಗಳು ಕೊರಗಿ, ಜನವರಿ ಒಂದರಂದು ಕೊನೆ ಉಸಿರನ್ನೆಳೆದ. ಸಾಯುವಾಗ, ಚಿತ್ತಭ್ರಮೆಯಿಂದ ಅವನು 'ನಾನು ತೆಗೆದುಕೊಂಡದ್ದು ಹುರಿ, ಪಾಕೆಟ್ ಅಲ್ಲ. ನಿಜವಾಗಿ ಹೇಳುತ್ತೇನೆ,'' ನನ್ನ ಮಾತನ್ನು ನಂಬಿ', ಎಂದು ಹೇಳುತ್ತಿದ್ದ.

ನಾರಿಯರ ನಡುವಯಸ್ಸಿನ ನಡುಕಗಳಿಗೆ ಹೇಳಿ ವಿದಾಯ....

ಡಾ : ಕರವೀರಪ್ರಭು ಕ್ಯಾಲಕೊಂಡ
ವೈದ್ಯಾಧಿಕಾರಿಗಳು
ಸಮುದಾಯ ಆರೋಗ್ಯ ಕೇಂದ್ರ
ಬಾದಾಮಿ-೫೮೭ ೨೦೧

ನಲವತ್ತನೇ ಹುಟ್ಟು ಹಬ್ಬದ ಬಳಿಕ ಮಹಿಳೆಯರಲ್ಲಿ ಸಂಸಾರದಲ್ಲಿ ಸಂತೃಪ್ತಿ ಹೆಪ್ಪುಗಟ್ಟಿದ್ದರೂ, ವೈಯಕ್ತಿಕ ಬದುಕಿನಲ್ಲಿ ಅತೃಪ್ತಿ ಅಂಕುರಗೊಳ್ಳುವುದು. ಮಾನಸಿಕ ತುಮಲದ ತಳಮಳದ ತಿರುಗುಣಿ ಮಡುವಿನಲ್ಲಿ ಗಿರಕಿ ಹೊಡೆಯುತ್ತಾಳೆ. ಗೊಂದಲದಲ್ಲಿ ಗಲಿಬಿಲಿಗೊಳ್ಳುತ್ತಾಳೆ. ಊಟ ಉಡುಗೆಗಳಲ್ಲಿ ಆಸಕ್ತಿ ಅಡಗುವುದು. ಹೀಗಾಗಿ ಆಶಕ್ತಿಯ ಅಡಿಗಲ್ಲು ಗಟ್ಟಿಗೊಳ್ಳುವುದು. ನಿರಾಸಕ್ತಿ, ನಿರ್ಲಿಪ್ತತೆ ನರ್ತನ ಗೈಯ್ಯುವುದು. ಮಾನಸಿಕ ಹೊಯ್ದಾಟ, ಅಸ್ಥಿರತೆಗಳಿಂದ ಮನೆಯಲ್ಲಿ ಎಲ್ಲರ ತಿರಸ್ಕಾರಕ್ಕೆ ತುತ್ತಾಗುವಳು. ಜೊತೆಗೆ ಮುದಿತನ ಸದ್ದಿಲ್ಲದಂತೆ ಅಪ್ಪಿಕೊಳ್ಳಲಾರಂಭಿಸುವುದು.

ದೇಹದಲ್ಲಿ ಮೊದಲಿದ್ದ ಬಾಗು, ಬಳಕುಗಳು ಈಗಿಲ್ಲ, ವನಪು, ವಯ್ಯಾರಗಳು ದೂರಾಗಿ ನಡೆಯಲ್ಲಿ ಗಾಂಭೀರ್ಯ ಕಾಲಿಟ್ಟಿರುತ್ತದೆ. ಶರೀರದ ತೂಕ ಸ್ವಲ್ಪ ಸ್ವಲ್ಪಾಗಿ ಏರುಮುಖವಾಗುವುದರಿಂದ ಕೂಡಲು, ಏಳಲು ಮೊದಲಿನಂತೆ ಸಲೀಸಾಗಿ ಆಗುವುದಿಲ್ಲ. ಸೊಂಟನೋವು, ಸುಸ್ತುಗಳ ನಂಟು ಜಾಸ್ತಿಯಾಗುತ್ತದೆ. ಬಿಳಿಕೂದಲು ಅಲ್ಲಲ್ಲಿ ಹಣಕಿ ಹಾಕುವಾಗ, ಅವಳಿಗೆ ಕನ್ನಡಿಯ ಮೇಲೆ ಕೋಪ ಬರುವುದು!

ಮಧ್ಯ ವಯಸ್ಸಿನ ಮಹಿಳೆಯರಲ್ಲಿ ರಕ್ತನಾಳಗಳು ಪೆಡಸಾಗುವುವು. ಹೃದಯಕ್ಕೆ ರಕ್ತ ಪೂರೈಕೆಯಲ್ಲಿ ಅಡಚಣೆಯಾಗಿ ಎದೆನೋವು, ಹೃದ್ರೋಗ ಕಾಣಿಸಿಕೊಳ್ಳುವವು. ಎಲುಬಿನ ಹಂದರದ ಮೇಲೆ ಉಂಟಾಗುವ ಪರಿಣಾಮದಿಂದಾಗಿ ಎಲುಬುಗಳು ಗಟ್ಟಿತನವನ್ನು ಕಳೆದುಕೊಂಡು ಮೆದು ಆಗುವವು. ಸ್ವಲ್ಪ ಪೆಟ್ಟು ಬಿದ್ದರೂ ಮೂಳೆ ಮುರಿತವಾಗಬಹುದು. ಮೂತ್ರಕೋಶ ಹಾಗೂ ಮೂತ್ರನಾಳಗಳ ಮೇಲಾಗುವ ಪರಿಣಾಮದಿಂದ ಮೇಲಿಂದ ಮೇಲೆ ಉರಿ ಮೂತ್ರಕ್ಕೆ ತುತ್ತಾಗುವಳು. ಮೂತ್ರವನ್ನು ತಡೆಯುವ ಶಕ್ತಿ ಕುಂಠಿತವಾಗುತ್ತದೆ. ಹೀಗಾಗಿ ಮೇಲಿಂದ ಮೇಲೆ ಮೂತ್ರವಿಸರ್ಜನೆ ಮಾಡಬೇಕಾಗುತ್ತದೆ. ಸ್ತನಗಳ ಆಕಾರದಲ್ಲೂ ಬದಲಾವಣೆ ಕಂಡು ಬರುವುದು. ಸ್ತನಗಳು ಗಾತ್ರದಲ್ಲಿ ಚಿಕ್ಕದಾಗುತ್ತ ಹೋಗಿ ಜೋತು ಬಿದ್ದಂತೆ ಕಾಣುತ್ತದೆ. ಮಾನಸಿಕ ತೊಂದರೆಗಳು ಖಿನ್ನತೆ ಮುತ್ತಿಗೆ ಹಾಕಿ ಮೆತ್ತಗೆ ಮಾಡುವವು. ಮಹಿಳೆಗೆ ಆಗುವ ಎಲ್ಲಾ ತೊಂದರೆಗಳಲ್ಲಿ ಮಾನಸಿಕ ವೇದನೆ ಅತಿ ಮುಖ್ಯವಾದ ತೊಂದರೆ.

ಮಧ್ಯ ವಯಸ್ಸಿನ ಮಹಿಳೆ ಅನುಭವಿಸುವ ಇನ್ನೊಂದು ಪ್ರಮುಖ ತೊಂದರೆ ಎಂದರೆ ಮೈ ಬಿಸಿ ಬಿಸಿ ಆದಹಾಗೆ ಅನಿಸುವುದು, ಇದು ಮುಖ್ಯವಾಗಿ ಮುಖ ಮತ್ತು ಕುತ್ತಿಗೆ ಭಾಗಗಳಲ್ಲಿ ಸಂಭವಿಸುತ್ತದೆ. ಇದಕ್ಕೆ 'ಹಾಟ್ ಫ್ಲಶ್' ಎನ್ನುತ್ತಾರೆ. ಇದರಿಂದ ಎಷ್ಟೋ ಜನ ಹೆಣ್ಣುಮಕ್ಕಳು ತಮಗೆ ಜ್ವರ ಬಂದಿದೆ ಎಂದೇ ತಪ್ಪಾಗಿ ಭಾವಿಸುತ್ತಾರೆ. ವೈದ್ಯರ ತಲೆ ತಿನ್ನುತ್ತಾರೆ. ಇಲ್ಲದ ಜ್ವರಕ್ಕೆ ಔಷಧಿ ಕೇಳುತ್ತಾರೆ. ಈ ತೊಡಕು ಎಲ್ಲರಲ್ಲೂ ಕಾಣಿಸುವುದಿಲ್ಲ. ಕೆಲವರಲ್ಲಿ ಎಂದೋ ಒಮ್ಮೆ, ಇನ್ನು ಕೆಲವರಲ್ಲಿ ಪದೇ ಪದೇ ಕಾಣಿಸಿಕೊಂಡು ಕಿರುಕುಳ ಕೊಡುತ್ತದೆ.

ಚರ್ಮವು ಕಾಂತಿಹೀನವಾಗುವುದು. ಸುಕ್ಕುಗಟ್ಟುವುದು. ಒಣಗಿದಂತಾಗುವುದು.

ಚರ್ಮದ ಕೆರೆತ ಉಂಟಾಗುತ್ತದೆ. ಯೋನಿಯಲ್ಲಿಯ ಲೋಳ್ಪರೆಯಲ್ಲಿ ಇದೇ ಕಾರಣದಿಂದ ತುರಿಕೆ ಉಂಟಾಗುತ್ತದೆ. ಸ್ತ್ರೀ ಹಾರ್ಮೋನಿನ ಕೊರತೆಯಿಂದ ಯೋನಿಯಲ್ಲಿ ರೋಗಾಣುಗಳು ಒಳಸೇರಿ ಸೋಂಕಿನ ಸುಳಿಯಲ್ಲಿ ಸಿಗುವಂತೆ ಮಾಡುತ್ತವೆ. ಇದರಿಂದ ಬಿಳಿಸೆರಗು, ಕಿಬ್ಬೊಟ್ಟೆ, ನೋವು, ತೊಡೆಗಳ ನಡುವೆ ಅಸಾಧ್ಯ ತುರಿಕೆ, ಉರಿಮೂತ್ರ ಇತ್ಯಾದಿ ತೊಂದರೆಗಳಿಂದ ಹೆಣ್ಣಿಗೆ ಜೀವನವೇ ಅಸಹನೀಯವಾಗುತ್ತದೆ.

ಮಧ್ಯವಯಸ್ಸಿನ ಮಹಿಳೆಯರಲ್ಲಿ ಮರೆವು ಜಾಸ್ತಿ. ಕೋಪ, ಸಿಡಿಮಿಡಿ, ವಿನಾಕಾರಣ ಸಿಟ್ಟು ಆಗಾಗ ಎದ್ದು ಕಾಣುತ್ತದೆ. ''ಯಾರೂ ನನ್ನನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ'' ಎನ್ನುವ ತಳಮಳ ಮನಸ್ಸನ್ನು ಆವರಿಸಿ, ಉದ್ವಿಗ್ನತೆ, ಖಿನ್ನತೆಯಿಂದ ಕಣ್ಣೀರ ಕೋಡಿ ಹರಿಯುತ್ತದೆ. ತಲೆ ಚಿಟ್ಟು ಹಿಡಿಯುತ್ತದೆ. ಮುಟ್ಟಿನಲ್ಲೂ ಏರುಪೇರುಗಳು ತಲೆದೋರುತ್ತವೆ. ಮುಟ್ಟು ಒಮ್ಮೊಮ್ಮೆ ಬೇಗ ಆದರೆ, ಮತ್ತೊಮ್ಮೆ ಮುಂದೆ ಹೋಗಿ-ಗರ್ಭನಿಂತ ಸಂಶಯದ ಸುತ್ತ ಗಸ್ತು ಹೊಡೆಯುತ್ತಾಳೆ. ಮೊಮ್ಮಕ್ಕಳು ಕಾಣುವ ವಯಸ್ಸಿನಲ್ಲಿ ಮತ್ತೆ ತಾಯಿಯಾಗುವುದೆಂದರೇನು? ಎಂಬ ಅಪರಾಧಿ ಪ್ರಶ್ನೆ ಅವಳನ್ನು ಹಗಲಿರುಳು ಕಾಡುವುದು. ತಜ್ಞರ ಆಸ್ಪತ್ರೆಯ ಮೆಟ್ಟಲು ಹತ್ತುವಂತೆ ಮಾಡುವುದು. ಮುಟ್ಟು ಒಮ್ಮೆ ಸ್ವಲ್ಪೇ ಕಂಡು ಚಿಂತೆಗೀಡು ಮಾಡಿದರೆ, ಮತ್ತೊಮ್ಮೆ ಹೆಚ್ಚಾಗಿ ಕಳವಳದ ಕಪಿ ಮುಷ್ಟಿಯಲ್ಲಿ ತತ್ತರಿಸುವಳು. ಇವೆಲ್ಲಾ ಮಧ್ಯ ವಯಸ್ಸಿನ ಮಹಿಳೆಯರ ಅನುಭವಗಳು.

ತಿಂಗಳು ತಿಂಗಳು ನಿಯಮಿತವಾಗಿ ಮುಟ್ಟಾಗಬೇಕಾದರೆ, ಅಂಡಾಶಯದಿಂದ ಅಂಡಾಣು ಕಾಲಕ್ಕೆ ಸರಿಯಾಗಿ ಬಿಡುಗಡೆಯಾಗಬೇಕಾದರೆ, ಫಲಿತ ಅಂಡಾಣು ಗರ್ಭಕೋಶದಲ್ಲಿ ನೆಲೆಯೂರಿ ನಿಲ್ಲಬೇಕಾದರೆ, ಅಲ್ಲಿಯೇ ನವಮಾಸ ನಿಂತು ರೂಪಗೊಂಡು ಮುದ್ದು ಮಗುವಾಗಿ ಹೊರ ಬರಬೇಕಾದರೆ, ಹುಟ್ಟಿದ ಕೂಸಿಗೆ ಹೊಟ್ಟೆ ತುಂಬುವಷ್ಟು ಹಾಲು ತಾಯಿ ಮೊಲೆಯಿಂದ ಹರಿದು ಬರಬೇಕಾದರೆ, ಹೆಣ್ಣಿನ ದೇಹದಲ್ಲಿ ಕೆಲವು ಹಾರ್ಮೋನುಗಳು ಪ್ರಮಾಣ ಬದ್ಧವಾಗಿ ಉತ್ಪತ್ತಿಯಾಗಲೇಬೇಕು. ಹೆಣ್ಣಿಗೆ ಅವಳ ಆಕರ್ಷಕ ರೂಪ, ಲಾವಣ್ಯ, ಆಕಾರ, ಮಧುರ ಧ್ವನಿ, ಹೆಣ್ತನವನ್ನು ಸಾರಿ ಹೇಳುವ ನಡೆನುಡಿಗಳು ಇವೆಲ್ಲವನ್ನು ಹೆಣ್ಣಿಗೆ ಬಳುವಳಿಯಾಗಿ ನೀಡುವುದು ಹಾರ್ಮೋನುಗಳೇ! ದುರ್ದೈವದ ಸಂಗತಿಯೆಂದರೆ-ಇವುಗಳನ್ನು ಜೀವನದುದ್ದಕ್ಕೂ ಸ್ರವಿಸುವುದು ಸಾಧ್ಯವಿಲ್ಲ!! ಮಹಿಳೆ ನಲವತ್ತರ ಆಸುಪಾಸಿನಲ್ಲಿರುವಾಗಲೇ ಈ ಹಾರ್ಮೋನುಗಳ ಪ್ರಮಾಣ ಕಡಿಮೆ ಯಾಗುತ್ತದೆ. ಬೇಡಾದ ಬದಲಾವಣೆಗಳ ಉಡುಗೊರೆಗಳನ್ನು ಮಹಿಳೆಯರ ಮಡಿಲಿಗಿಡುತ್ತವೆ.

ಮುಟ್ಟು ನಿಲ್ಲುವುದು ಪ್ರಕೃತಿ ಸಹಜ ಕ್ರಮ. ಇದನ್ನು ಎಲ್ಲ ಮಹಿಳೆಯರು ಅರಿಯಬೇಕು. ಬದುಕಿನ ಒಂದು ಘಟ್ಟದಲ್ಲಿ ಇದು ಅನಿವಾರ್ಯ. ಇದು ನಿಂತರೆ ಸ್ತ್ರೀಯು ತನ್ನ ಸ್ತ್ರೀತ್ವವನ್ನೇನೂ ಕಳೆದುಕೊಳ್ಳುವುದಿಲ್ಲ. ಮಧ್ಯ ವಯಸ್ಸಿನ ಮಹಿಳೆಯರಲ್ಲಿ ತಲೆದೋರುವ ಹಾರ್ಮೋನುಗಳ ಕೊರತೆಯಿಂದ ಮೇಲೆ ವಿವರಿಸಿದ ಬದಲಾವಣೆಗಳಿಗೆ ಬಣ್ಣಗಟ್ಟುವುದು. ಇದು ಅಂತಿಮವಾಗಿ ಮಹಿಳೆಯ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುವುದರಿಂದ, ಅವಳಿಗೆ ಆತ್ಮೀಯರಾದವರಲ್ಲೂ ಮುಖ್ಯವಾಗಿ ಪತಿ ಮತ್ತು ಮಕ್ಕಳ ಸಹಕಾರ, ಸಹಾನುಭೂತಿ ಈ ಹಂತ

ದಲ್ಲಿ ತುಂಬಾ ಅವಶ್ಯ. ಮಧ್ಯ ವಯಸ್ಸಿನ ಮಹಿಳೆಯೂ ಕೂಡ ಇದೊಂದು ನಿಸರ್ಗದತ್ತ ಸಹಜಸ್ಥಿತಿ, ಪ್ರಕೃತಿಯ ಕೊಡುಗೆ ಎಂದು ಭಾವಿಸಿ, ತನ್ನ ಗಮನವನ್ನು ಬೇರೆ ಕಡೆ ಹರಿಸಬೇಕು. ಮನಸ್ಸಿನ ಸಮತೋಲನ ಕಾಯ್ದುಕೊಳ್ಳಲು ಯೋಗ ಧ್ಯಾನ, ಸಮತೋಲ ಆಹಾರ ಸೇವನೆ, ವಾಯು ವಿಹಾರದ, ಕ್ರಮಬದ್ಧ ನಿದ್ದೆ ಇತ್ಯಾದಿಗಳಲ್ಲಿ ನಿರತರಾಗಬೇಕು. ತೂಕ ಹೆಚ್ಚಾಗದಂತೆ, ಬೊಜ್ಜು ಶೇಖರಗೊಳ್ಳದಂತೆ ನೋಡಿಕೊಳ್ಳಬೇಕು.

ಮೂಳೆಗಳು ಗಟ್ಟಿಮುಟ್ಟಾಗಿ ಸುಸ್ಥಿತಿಯಲ್ಲಿರಲು ಕ್ಯಾಲ್ಸಿಯಮ್ ಅಂಶವಿರುವ ಹಸಿರು ತೊಪ್ಪಲು ಪಲ್ಲೆ, ತರಕಾರಿ, ಹಣ್ಣು ಹಂಪಲು ಸೇವಿಸಬೇಕು. ಅವಶ್ಯವಿದ್ದಲ್ಲಿ ತಜ್ಞ ವೈದ್ಯರ ಸಲಹೆ ಮೇರೆಗೆ ಕ್ಯಾಲ್ಸಿಯಮ್ ಅಂಶವಿರುವ ಔಷಧಿಗಳನ್ನು ತೆಗೆದುಕೊಳ್ಳಬೇಕು.

ಮಾನಸಿಕ ವೇದನೆ ಕಡಿಮೆ ಮಾಡಲು ವೈದ್ಯರು ಕೆಲವೊಮ್ಮೆ ಕಡಿಮೆ ಪ್ರಮಾಣದ ಶಾಮಕಗಳು (Sedatives) ಮತ್ತು ಟ್ರಾಂಕ್ವಿಲೈಜರ್ ಔಷಧಿಗಳನ್ನು ಕೊಡಬಹುದು. ಆದರೆ, ಅವುಗಳ ಮೇಲೆ ಅವಲಂಬಿಸಬಾರದು ಅಷ್ಟೆ; ಮೂತ್ರಕೋಶದ ತೊಡಕು ತೊಂದರೆಗಳಿಗೆ 'ಪೆರಿನಿಯಲ್ ವ್ಯಾಯಾಮಗಳನ್ನು ತಜ್ಞರ ಸಲಹೆ ಮೇರೆಗೆ ಮಾಡಬೇಕಾಗಬಹುದು.

ಸ್ತ್ರೀಯರ ಸಂಜೀವಿನಿ: ವೈದ್ಯರು ನೀಡುವ ಸಲಹೆ ಸೂಚನೆಗಳಿಂದ , ಔಷಧೋಪಚಾರಗಳಿಂದ ಮಧ್ಯ ವಯಸ್ಸಿನ ಮಹಿಳೆಯರ ಸಮಸ್ಯೆಗಳು ಸಂಪೂರ್ಣ ಪರಿಹಾರವಾಗುವುದಿಲ್ಲ. ಹೀಗಾಗಿ ಶತಮಾನಗಳಿಂದ ಈ ಸಮಸ್ಯೆಗಳ ಸುಳಿಯಿಂದ ಹೊರಬರುವುದಾಗಿಲ್ಲ. ಆದರೆ, ವೈದ್ಯಕೀಯ ವಿಜ್ಞಾನ ಕೈಕಟ್ಟಿ ಕೂತಿಲ್ಲ. ಹೆಣ್ಣು ಮಕ್ಕಳ ಈ ತೊಂದರೆಗಳಿಗೆ ಪರಿಹಾರ ಕಂಡುಹಿಡಿಯಲು ಹಗಲಿರುಳೂ ಹೆಣಗುತ್ತಲಿದೆ. ವಿಜ್ಞಾನಿಗಳು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಸಂಶೋಧನೆಯಲ್ಲಿ ತೊಡಗಿದ್ದಾರೆ. ಈ ಅವಿರತ ಸಂಶೋಧನೆಗಳ ಪರಿಣಾಮವಾಗಿ ರೂಪಿತವಾಗಿರುವ ಹೊಸ ಚಿಕಿತ್ಸಾ ವಿಧಾನವೇ ಎಚ್.ಆರ್.ಟಿ. (H.R.T. Hormone Replacement Therapy) ಇದು ಸ್ತ್ರೀಯರಿಗೊಂದು ಸಂಜೀವಿನಿಯಾಗಿ ಪರಿಣಮಿಸಿದೆ ಎಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಮಹಿಳೆಯರ ಸಾಮಾಜಿಕ ಬದುಕಿನಲ್ಲಿ ಕಳೆದೆರಡು ದಶಕಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಮಹಿಳೆಯರು ಸ್ವಾತಂತ್ರ್ಯ ಪ್ರಿಯರಾಗಿ ಅತ್ಯಂತ ಕ್ರಿಯಾಶೀಲರಾಗಿದ್ದಾರೆ. ಸಾಮಾಜಿಕ ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾಳೆ. ತಮ್ಮ ವಯೋಮಾನದ ಉತ್ತರಾರ್ಧದಲ್ಲೂ ಮಾನಸಿಕವಾಗಿ ಮತ್ತು ದೈಹಿಕವಾಗಿ ಸದೃಢರಾಗಿರಬೇಕೆಂಬ ಮನೋಭಾವ ಇಂದಿನ ಮಹಿಳೆಯರಲ್ಲಿ ಹೆಚ್ಚುತ್ತಿದೆ. ಈ ಇಚ್ಛೆಯಿಂದಾಗಿ ಹಿಂದಿನವರಂತೆ 'ವಯಸ್ಸಾಗುವಿಕೆ' ಯನ್ನು ಅನಿವಾರ್ಯವಾಗಿ ಒಪ್ಪುತ್ತಿಲ್ಲ. ನಡುವಯಸ್ಸಿನ ನಡುಕಗಳಿಂದ ನರಳುವುದನ್ನು ಬಿಟ್ಟು ಹೊಸ ಆಯಾಮಗಳನ್ನು ಕಂಡುಕೊಳ್ಳುತ್ತಿದ್ದಾರೆ. ಇದೊಂದು ಒಳ್ಳೆಯ ಬೆಳವಣಿಗೆ. ಎಲ್ಲರೂ ಒಪ್ಪಿಕೊಳ್ಳಬೇಕಾದ ಆರೋಗ್ಯಕರ ಬೆಳವಣಿಗೆ. ಮುಟ್ಟು ನಿಲ್ಲುವಿಕೆ ಬಾಳ ಬೆಳದಿಂಗಳಲ್ಲಿ ಮುಳ್ಳಾಗುವುದನ್ನು ಬದುಕಿನಲ್ಲಿ ಅಸಹಾಯಕತೆ, ಅವಲಂಬನೀಯತೆ, ನೋವು ನಿರಾಶೆ, ದೈಹಿಕ ಅಸಾಮರ್ಥ್ಯವನ್ನು ಹುಟ್ಟುಹಾಕುವುದನ್ನು ಸಾಧನೆಗಳ ಹಾದಿಯಲ್ಲಿ ಅಡಚಣೆ ಉಂಟು ಮಾಡುವುದನ್ನು ಚಟುವಟಿಕೆಗಳನ್ನು ಚಿವುಟಿ ಹಾಕುವುದನ್ನು ಇಂದಿನ ಮಹಿಳೆ ಇಷ್ಟಪಡುವುದಿಲ್ಲ. ಕಷ್ಟಪಟ್ಟು ಈ ತೊಡಕು

ತೊಂದರೆಗಳನ್ನು ಮೆಟ್ಟಿ ಹಾಕುವ ಮನೋಭಿಲಾಷೆಯನ್ನು ಮಹಿಳೆಯರು ಈಗಮೈಗೂಡಿಸಿಕೊಂಡಿದ್ದಾರೆ.

ಅಕ್ಟೋಬರ್ ೧೮, ೨೦೦೦ನೇ ದಿನವನ್ನು 'ವಿಶ್ವ ಋತುಬಂಧ ದಿನ' ವಾಗಿ ವಿಶ್ವ ಆರೋಗ್ಯ ಸಂಸ್ಥೆ ಆಚರಿಸಿದೆ. ಮುಟ್ಟು ನಿಂತ ಅನಂತರವೂ ಮಹಿಳೆಯರು ಸಶಕ್ತ ಸಕ್ರಿಯ, ಗೌರವನೀಯ ದಿನಗಳನ್ನು ಕಳೆಯಲು ನೆರವಾಗುವ ಉದ್ದೇಶ ವಿಶ್ವ ಆರೋಗ್ಯ ಸಂಸ್ಥೆಯದು. ಮಹಿಳೆಯರ ಹತ್ತಾರು ಸಮಸ್ಯೆಗಳಿಗೆ ಸಮರ್ಪಕ ಪರಿಹಾರ ಕಂಡುಹಿಡಿಯುವುದು, ವೈದ್ಯಕೀಯ ಸಂಶೋಧನೆಯ ಸೌಲಭ್ಯಗಳನ್ನು ಒದಗಿಸುವುದು, ಸ್ತ್ರೀಯರ ಬದುಕು ಸಹ್ಯವಾಗುವಂತೆ ಪ್ರಯತ್ನ ಗಳನ್ನು ಮಾಡಲಿದೆ. ಮಹಿಳೆಯರಲ್ಲಿ ಮನೋಧೈರ್ಯವನ್ನು ತುಂಬಲಿದೆ.

ಮಹಿಳೆಯರ ಬದುಕಿನ ಉತ್ತರಾರ್ಧದಲ್ಲಿ ಹಾರ್ಮೋನುಗಳ ಉತ್ಪತ್ತಿ ಕುಂಠಿತಗೊಳ್ಳುವುದು. ಕಾಲಕ್ರಮೇಣ ಅವು ಸಂಪೂರ್ಣ ಇಲ್ಲವಾಗುವವು. ಹೀಗಾಗಿ ಈ ಕೊರತೆಯನ್ನೇ ನಿರ್ದಿಷ್ಟ ಪ್ರಮಾಣದಲ್ಲಿ ಸ್ತ್ರೀತ್ವಕ್ಕೆ ಸಂಬಂಧಿಸಿದ ಹಾರ್ಮೋನಾದ ಈಸ್ಟ್ರೋಜನ್‌ನನ್ನು ಔಷಧಿ ರೂಪದಲ್ಲಿ ಪೂರೈಸುವುದಕ್ಕೆ ಎಚ್.ಆರ್.ಟಿ. ಎನ್ನುವರು.

ಮಹಿಳೆಯರಲ್ಲಿ ಮುಟ್ಟು ನಿಲ್ಲುವ ಹೊತ್ತಿಗೆ, ಹಾರ್ಮೋನುಗಳು ಏರುಪೇರುಗೊಂಡು ಈಸ್ಟ್ರೋಜನ್' ಸ್ರವಿಕೆ ಸಂಪೂರ್ಣ ಸ್ಥಗಿತಗೊಳ್ಳುವುದು, ಇದು ಮಹಿಳೆಯರ ಮನೋದೈಹಿಕ ಸಮಸ್ಯೆಗಳಿಗೆ ಸ್ವಾಗತ ನೀಡುವುದು. ದೇಹದಲ್ಲಿ ಕ್ಯಾಲ್ಸಿಯಂ ಕೊರತೆಯ ಕರಾಳ ಛಾಯೆ ಕವಿಯುವುದು. ಔಷಧಿ ರೂಪದಲ್ಲಿ ಕ್ಯಾಲ್ಸಿಯಂನ್ನು ನೀಡಿದರೂ, ಈಸ್ಟ್ರೋಜನ್ ಅಭಾವದಿಂದಾಗಿ ದೇಹಕ್ಕೆ ಅದರ ಪ್ರಯೋಜನವಾಗುವುದಿಲ್ಲ. ಪರಿಣಾಮವಾಗಿ ''ಅಸ್ಟಿಯೋಪೊರೋಸಿಸ್'' ಹಣಕಿ ಹಾಕುವುದು. ಎಲುಬಿನ ನೋವಿನ ನರಳಿಕೆ ಯೊಂದಿಗೆ, ಮೂಳೆ ಮುರಿಯುವ ಭಯ ಮಹಿಳೆಯರ ಸುತ್ತ ಗಸ್ತು ಹೊಡೆಯುವುದು. ಈ ಹಂತದಲ್ಲಿ ಎಚ್.ಆರ್.ಟಿ. ತುಂಬಾ ಉಪಯುಕ್ತ. ಈ ಚಿಕಿತ್ಸೆ ವಯೋಮಾನಕ್ಕನುಗುಣವಾಗಿ ಸಹಜ ವಾಗಿ 'ಮೆನೋಪಾಜ' (ಋತುಬಂಧ) ಮುಟ್ಟಿದವರಿಗಷ್ಟೇ ಅಲ್ಲ, ಅನಿವಾರ್ಯ ಕಾರಣಗಳಿಂದಾಗಿ ಗರ್ಭಕೋಶ ತೆಗೆದು ಹಾಕಲಾದ ಯಾವುದೇ ವಯಸ್ಸಿನ ಸ್ತ್ರೀಯರಿಗೂ ಋತುಬಂಧದ ವಿಪರೀತ ಲಕ್ಷಣಗಳು ಕಾಣಿಸಿ ಕೊಂಡಾಗಲೂ ಈ ಚಿಕಿತ್ಸೆ ಪರಿಣಾಮಕಾರಿ.


ಎಚ್.ಆರ್.ಟಿ.ಯನ್ನು ಪ್ರಾರಂಭಿಸುವ ಮೊದಲು ಸ್ತ್ರೀರೋಗತಜ್ಞರು ಮತ್ತು ರಸದೂತ ತಜ್ಞರು ಮಹಿಳೆಯ ಆರೋಗ್ಯ ತಪಾಸಣೆಯನ್ನು ಮಾಡುವರು. ಅವರ ರಕ್ತದೊತ್ತಡ, ರಕ್ತದ ಸಕ್ಕರೆ ಪ್ರಮಾಣ, ರಕ್ತಕಣಗಳ ಸಂಪೂರ್ಣ ಮಾಹಿತಿ, ಇ.ಎಸ್.ಆರ್ ಮೆಮೊಗ್ರಾಫಿ, ರಕ್ತದಲ್ಲಿ ಈಸ್ಟ್ರೋಜನ್ ರಸದೂತ ಮಟ್ಟ ಅಳೆಯುವುದರ ಜೊತೆಗೆ ಯೋನಿಸ್ರವಿಕೆಯ ಪ್ಯಾಪ್‌ಸ್ಮಿಯರ್ ಪರೀಕ್ಷೆಯನ್ನು ಮಾಡುವರು. ಎಲ್ಲ ವರದಿಗಳನ್ನು ವರೆಗಚ್ಚಿ ನೋಡುವರು. ಅನಂತರ ಚರ್ಚಿಸಿ, ಋತುಬಂಧದ ವಿಪರೀತ ಲಕ್ಷಣಗಳನ್ನು ನಿಯಂತ್ರಿಸಲು ಅವಶ್ಯವಿರುವ ಈಸ್ಟ್ರೋಜನ್ ಹಾರ್ಮೋನಿನ ಕನಿಷ್ಠ ಪ್ರಮಾಣವನ್ನು ನಿಗದಿಗೊಳಿಸುವರು. ಈ ಪ್ರಮಾಣದ ಗುಳಿಗೆಯನ್ನು ದಿನಂಪ್ರತಿ ಸೇವಿಸಲು ತಜ್ಞರು ತಿಳಿಸುವರು. ಈ ಸರಳ ಚಿಕಿತ್ಸೆಯಿಂದ ತಲೆದೋರಿದ ಎಲ್ಲ ತೊಡಕು ತೊಂದರೆಗಳು ನಿವಾರಣೆಯಾಗುವವು. ಹೀಗಾಗಿ ಈ ಚಿಕಿತ್ಸೆ ಮಧ್ಯ ವಯಸ್ಸಿನ ಮಹಿಳೆಯರಿಗೊಂದು ಉತ್ಕೃಷ್ಟ ವರವಾಗಿದೆ. ಈ ಚಿಕಿತ್ಸೆಯ ಜೊತೆಗೆ ಪೂರಕ ಕ್ಯಾಲ್ಸಿಯಮ್ ಜೀವಸತ್ವಗಳನ್ನು

ನೀಡುವುದರಿಂದ ಮೊದಲಿನ ಲವಲವಿಕೆ ಲಾಸ್ಯವಾಡುವುದು.

೧೯೪೦ರಷ್ಟು ಹಿಂದೆಯೇ ಎಚ್.ಆರ್.ಟಿ. ಪ್ರಾರಂಭವಾಯಿತು. ವೈದ್ಯರಿಗೆ ಮರುಭೂಮಿಯಲ್ಲಿ ಕಂಡ ಓಯಾಸಿಸ್‌ದಷ್ಟು ಖುಷಿಯಾಯಿತು. ಅಬ್ಬರದ ಪ್ರಚಾರ ಪಡೆಯಿತು. ಚಿಕಿತ್ಸೆ ಪ್ರಾರಂಭಿಸುವ ಮೊದಲು ಮಾಡಬೇಕಾಗಿದ್ದ ಪೂರ್ವಭಾವಿ ಪರೀಕ್ಷೆಗಳನ್ನು ನಿರ್ಲಕ್ಷಿಸಿದರು. ವೈದ್ಯರ ಬತ್ತಳಿಕೆ ಸೇರಿದ ಈ ಅಸ್ತ್ರದ ಅಪಬಳಕೆಯಾಯಿತು. ಈ ಚಿಕಿತ್ಸೆಗೊಳಗಾದ ಮಹಿಳೆಯರಲ್ಲಿ ಕ್ಯಾನ್ಸರಿನ ಹಾವಳಿ ಹೆಚ್ಚಾಗುವುದೆಂಬ ಭಾವನೆ ಕಾಕತಾಳೀಯವಾಗಿ ತಳಕು ಹಾಕಿಕೊಂಡಿತು. ವೈದ್ಯರು ಚಿಕಿತ್ಸೆ ನೀಡಲು ಹಿಂದೇಟು ಹಾಕಿದರು. ಎಚ್.ಆರ್.ಟಿಗೆ ಗ್ರಹಣ ಹಿಡಿಯಿತು.

ಆದರೆ, ವೈದ್ಯ ವಿಜ್ಞಾನ ಕೈಕಟ್ಟಿ ಕೂಡಲಿಲ್ಲ. ಸಂಶೋಧನೆ ನಡೆಸಿತು. ನೂತನ ತಂತ್ರಜ್ಞಾನ ಬಳಸಿ, ನವೀನ ಹಾಗೂ ನೈಸರ್ಗಿಕ ವಿಧಾನಗಳಿಂದ ಮಾತ್ರೆಗಳನ್ನು ತಯಾರಿಸಿದರು. ಜನರಲ್ಲಿ ಬೇರು ಬಿಟ್ಟ ಭಾವನೆ ಸುಳ್ಳೆಂದು ಸಾಬೀತಾದಾಗ ಫಿನಿಕ್ಸ್ ಹಕ್ಕಿಯಂತೆ ಎಚ್.ಆರ್.ಟಿ ಮರುಹುಟ್ಟು ಪಡೆಯಿತು.

ಇಂದು ಮಾರುಕಟ್ಟೆಯಲ್ಲಿ ಹದಿನಾಲ್ಕಕ್ಕೂ ಹೆಚ್ಚು ಬಗೆಯ ಹಾರ್ಮೋನು ಸಂಯೋಜನೆಯ ಮಾತ್ರೆಗಳು ಲಭ್ಯ ಇವೆ. ಇವುಗಳನ್ನು ಇನ್ನೂ ನೈಸರ್ಗಿಕ ರೀತಿಯಲ್ಲಿ ತಯಾರಿಸುವ ಪ್ರಯತ್ನಗಳು ನಿರಂತರವಾಗಿ ಸಾಗಿವೆ. ಸಾಮಾನ್ಯರ ಜೋಕ್ಕಸಕ್ಕೆ ಭಾರವಾಗದಂತಹ ಕಡಿಮೆ ಬೆಲೆಗೆ ತಯಾರಿಸುವ ನಿಟ್ಟಿನಲ್ಲೂ ಪ್ರಯೋಗಗಳು ನಡೆದಿವೆ. ಇವೆಲ್ಲಾ ಫಲಪ್ರದವಾದಲ್ಲಿ ಮಧ್ಯವಯಸ್ಸು, ವೃದ್ಧಾಪ್ಯಗಳ ಸಂಧಿಕಾಲದ ಮಹಿಳೆಯರು ಇನ್ನು ತಮ್ಮ ಸಮಸ್ಯೆಗಳನ್ನು ನಿರಂತರವಾಗಿ ಎದುರಿಸಬೇಕಾಗಿಲ್ಲ. ಆದರೆ ಯಾವುದಕ್ಕೂ ತಜ್ಞ ವೈದ್ಯರ ಸಲಹೆ ಅಗತ್ಯ ಎಂಬುದನ್ನು ಮರೆಯುವಂತಿಲ್ಲ. ಎಚ್.ಆರ್.ಟಿ. ಯಿಂದ ಮಹಿಳೆಯರು ತಮ್ಮ ಆರೋಗ್ಯವನ್ನು ಮೊದಲಿನಂತೆ ಕಾಯ್ದುಕೊಳ್ಳುವುದರಲ್ಲಿ ಸಂದೇಹವೇ ಇಲ್ಲ! ಮಹಿಳೆಯರು ಚಿರಕಾಲ ಚೈತನ್ಯದ ಚಿಲುಮೆಗಳಾಗಿ ಮಿಂಚುವುದರಲ್ಲಿ ಸಂಶಯವಿಲ್ಲ!!



ಭವಿಷ್ಯತ್ತಿನ ಭೃತ್ಯರು

ಮುಳಿಯ ರಾಘವಯ್ಯ
ನಂ.೪, ಸ್ವರ್ಣ ವಿಲಾಸ,
೯೨೬,೧ನೇ ಮುಖ್ಯ ರಸ್ತೆ ಲಕ್ಷ್ಮೀಪುರಂ,
ಮೈಸೂರು-೫೭೦ ೦೦೪

ಬೆಳಗಿನ ೭ ಘಂಟೆಯ ಸಮಯ. ತನ್ನ ಮೆಚ್ಚಿನ ಸಂಗೀತದ ದನಿಗೆ ''ಕೇಟಿ'' ಮೆಲ್ಲನೆ ನಿದ್ರೆಯಿಂದ ಎದ್ದೇಳುತ್ತಾಳೆ. ದಿನಕರನ ಕಿರಣಗಳನ್ನು ಸ್ವಾಗತಿಸಲು, ಕಾಣದ ಕೈಗಳು ಶಯ್ಯಾಗೃಹದ ಕಿಟಕಿಯ ಪರದೆಗಳನ್ನು ಆಗಲೇ ಹಿಂದಕ್ಕೆಳೆದಾಗಿದೆ. ಕೇಟಿ, ಮೈಮುರಿಯುತ್ತಾ ಆಗಲೇ ಬೆಳಕಾಗಿಸಿದ ಸ್ನಾನಗೃಹಕ್ಕೆ ನಡೆಯುತ್ತಾಳೆ. ಅವಳಿಗೆ ಬೇಕಾದಷ್ಟೇ ಬಿಸಿಯಾದ ನೀರು ತುಂಬಿದ ಸ್ನಾನದ ತೊಟ್ಟಿ ಅಲ್ಲಿ ತಯಾರಾಗಿ ಅವಳಿಗಾಗಿಯೇ ಕಾಯುತ್ತಿದೆ. ಅಡುಗೆಮನೆಯಿಂದ ಆಗಷ್ಟೇ ತಯಾರಾದ ಕಾಫಿ ಹಾಗೂ ಬ್ರೆಡ್ ಟೋಸ್ಟಿನ ಪರಿಮಳ ತೇಲಿ ಬರುತ್ತಿದೆ. ಸ್ನಾನ ಮುಗಿಸಿ ಬೆಳಗಿನ ತಿಂಡಿ ತಿನ್ನುತ್ತಿದ್ದಂತೆಯೇ ದೊಡ್ಡ ಗಾತ್ರದ ವೀಡಿಯೋ ಪರದೆಯ ಮೇಲೆ ಬಿಸಿಬಿಸಿ ಸಮಾಚಾರ ಮೂಡಿ ಬರುತ್ತಿರುತ್ತದೆ.

ತುಸುವೇ ಸಮಯದ ಅನಂತರ ಕೇಟಿಯ ಕಂಪ್ಯೂಟರು, ಅವಳ ಆ ದಿನದ ಕಾರ್ಯಕ್ರಮಗಳ ಬಗ್ಗೆ ವಿವರಣೆ ನೀಡುತ್ತದೆ. ಅಂದಿನ ಪಟ್ಟಿಯಲ್ಲಿ ಹೊಸ ಜೀನ್ಸ್ ಖರೀದಿಸುವ ಕಾರ್ಯಕ್ರಮವೂ ಇದೆ. ಇದಕ್ಕೆ ಕೆಲವೇ ಸೆಕೆಂಡುಗಳ ಸಮಯ ಸಾಕು. ಯಾಕೆಂದರೆ ಅವಳ ಮೈಯಳತೆ ಕಂಪ್ಯೂಟರಿನ ನೆನಪಿನಲ್ಲಿದ್ದು ಅವನ್ನು ಜೀನ್ಸ್ ತಯಾರಕರಿಗೆ ಕ್ಷಣಾರ್ಧದಲ್ಲೇ ರವಾನಿಸುತ್ತದೆ. ೪೮ ಘಂಟೆಗಳ ಒಳಗೆ ಹೊಸ ಜೀನ್ಸನ್ನು ಅವಳು ತೊಡಬಹುದಾಗಿದೆ.

ಇಂದು ಕೇಟಿಯ ಅಮ್ಮನ ಜನ್ಮದಿನ. ಅವಳಿಗೆ ತಾಯಿಯ ಮನೆಗೆ ಹೋಗುವ ಕಾರ್ಯಕ್ರಮವೂ ಇದೆ. ಕೇಟಿಯ ಗೈರುಹಾಜರಿಯಲ್ಲಿ ಅವಳ ಈ ''ಚುರುಕು'' ಮನೆ ತನ್ನನ್ನು ತಾನೇ ನಿರ್ವಹಿಸಿಕೊಳ್ಳುತ್ತಿರುತ್ತದೆ. ಮನೆಯ ಗಾಳಿ ಬೆಳಕಿನ ಹಾಗೂ ಎಲ್ಲಾ ಕೋಣೆಗಳ ಉಷ್ಣಾಂಶಗಳನ್ನು ಅಗತ್ಯ ಬಿದ್ದಂತೆ ನಿಯಂತ್ರಿಸಿಕೊಳ್ಳುತ್ತದೆ. ಅಡುಗೆ ಮನೆಯಲ್ಲಿ ಮುಸುರೆ ಪಾತ್ರೆಗಳು ತಂತಾನೇ ತೊಳೆದು ಒಣಗಿಸಿ ಓರಣವಾಗಿರಿಸಲ್ಪಡುತ್ತವೆ. ರೆಫ್ರಿಜರೇಟರಿನಲ್ಲಿರುವ ಪದಾರ್ಥಗಳನ್ನು ಪರೀಕ್ಷಿಸಿ- ಹಾಲು, ಬೆಣ್ಣೆ, ಮೊಟ್ಟೆಗಳ ಕೊರತೆಯಿದ್ದಲ್ಲಿ ಅಂಗಡಿಗೆ ಸ್ವಯಂಚಾಲಿತವಾಗಿ ''ಇ-ಟಪ್ಪಾಲಿ''(e-mail)ನ ಮೂಲಕ ಸುದ್ದಿ ತಲಪುತ್ತದೆ. ಕೇಟಿಗೆ ಕೇಕ್ ತಯಾರಿಸಬೇಕಿದ್ದಲ್ಲಿ ಸಮಸ್ಯೆಯೇ ಇಲ್ಲ. ಎಲೆಕ್ಟ್ರಾನಿಕ್ ಅಡುಗೆ ಪುಸ್ತಕದ ಸಹಾಯದಿಂದ ಅವಳ ಖಾಸಗಿ ಕಂಪ್ಯೂಟರು ಒಲೆಯನ್ನು ಅವಳು ಬರುವಷ್ಟರಲ್ಲಿ ಸರಿಯಾದ ಉಷ್ಣತೆಗೆ ಅನುವು ಮಾಡಿಟ್ಟಿರುತ್ತದೆ.

ಕೇಟಿಯು ಮನೆಯಲ್ಲಿಲ್ಲದಿದ್ದರೂ ಅವಳ ಬೆಕ್ಕು ಪುರ್ಜಿಲ್‌ಗೆ ಸಮಯಕ್ಕೆ ಸರಿಯಾಗಿ ತಿಂಡಿತೀರ್ಥಗಳ ಪೂರೈಕೆಯಾಗಿರುತ್ತದೆ. ಅಷ್ಟೇ ಅಲ್ಲ ಅವಳ ಮನೆ, ತೋಟ ಎಲ್ಲವೂ ಸುರಕ್ಷಿತವಾಗಿರುತ್ತವೆ.

ಕೇಟಿಯ ಮನೆ ಎಷ್ಟು ''ಚುರುಕು'' ಎಂದರೆ, ಅವಳು ಮರೆಗುಳಿಯಾಗಿದ್ದರೂ ಏನೂ ಚಿಂತೆಪಡಬೇಕಾದದ್ದಿಲ್ಲ. ಅದು ತನ್ನ ಎಲ್ಲಾ ಭಾಗಗಳನ್ನೂ ನಿರಂತರವಾಗಿ ಪರೀಕ್ಷಿಸಿಕೊಳ್ಳುತ್ತಿದ್ದು, ಏನಾದರೂ ಲೋಪ ಕಂಡು ಬಂದಲ್ಲಿ ತತ್‌ಕ್ಷಣವೇ ಸಂಬಂಧಪಟ್ಟ ತಜ್ಞರನ್ನು ಸಂಪರ್ಕಿಸಿ ಅಗತ್ಯಬಿದ್ದ ದುರಸ್ತಿ ಮಾಡಿಸಿ ಕೊಳ್ಳುತ್ತದೆ. ಕೇಟಿ ಎಲ್ಲಿದ್ದರೂ ಅಲ್ಲಿಂದಲೇ ಮನೆಯನ್ನು ಚರ ದೂರವಾಣಿ ಮೂಲಕ ಸಂಪರ್ಕಿಸಿ, ಬೇಕಾದ ಮಾಹಿತಿಯನ್ನು ಪಡೆದುಕೊಳ್ಳಬಹುದು; ಇಲ್ಲವೇ

ಸೆಪ್ಟೆಂಬರ್ ೧೯೯೯ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ತೆರೆಸಾ ಹೆಟ್ಜರ್ ಅವರ ''ದ ಲಿಟ್ಲ್ ಹೆಲ್ಪರ್ಸ್ ಆಫ್ ಟುಮಾರೋ'' ಎಂಬ ಲೇಖನದ ಭಾವಾನುವಾದ

ಬೇಕಾದ ಆದೇಶಗಳನ್ನು ಕೊಡಲು ಬಹುದು.

ಕೇಟಿಯ ನಿವಾಸವಿರುವುದು ಗ್ರಾಮಾಂತರ ಪ್ರದೇಶದಲ್ಲಿ. ಮನೆಯಿಂದ ಅವಳ ತಾಯಿಯಲ್ಲಿಗೆ ಹೋಗಲು ಅವಳು ಸಮೀಪದ ಹೆದ್ದಾರಿಯ ಮೂಲಕ ರೈಲ್ವೇ ನಿಲ್ದಾಣಕ್ಕೆ ಹೋಗಿ, ಅಲ್ಲಿಂದ ಶರವೇಗದ ರೈಲಿನಲ್ಲಿ ಪಯಣಿಸಬೇಕು. ಚಳಿಗಾಲವಾದುದರಿಂದ ಬೆಳಗಿನ ಸಮಯ ಸಹಿಸಲಾರದಷ್ಟು ಚಳಿಯಿದೆ. ಆದುದರಿಂದ ಅವಳು ಹೊರಟು ಕಾರು ಹತ್ತುವಷ್ಟರಲ್ಲಿ ಕಾರಿನ ಒಳಗಿನ ಹವೆಯನ್ನು ಮೈಗೆ ಹಿತವೆನಿಸುವಷ್ಟು ಬಿಸಿಯಾಗಿರುವಂತೆ ನಿಯಂತ್ರಿಸಲಾಗಿರುತ್ತದೆ. ಹೆದ್ದಾರಿಯಲ್ಲಿ ಈ ಹೊತ್ತು ಸಾಕಷ್ಟು ವಾಹನ ಸಂದಣಿಯಿದ್ದರೂ ಕೇಟಿಯ ಮನಸ್ಸು ಉದ್ವಿಗ್ನ ಸ್ಥಿತಿಯಲ್ಲಿಲ್ಲ. ಏಕೆಂದರೆ ಅವಳ ಕಾರಿಗೂ ಓದಲು ಗೊತ್ತಿದೆ! ರಸ್ತೆಯಲ್ಲಿ ೬೦ ಕಿ.ಮೀ. ವೇಗಮಿತಿಯ ಸೂಚನಾಫಲಕ ಕಂಡೊಡನೆಯೇ ಕಾರಿನ ವೇಗ ತನ್ನಷ್ಟಕ್ಕೇ ಕಡಮೆಯಾಗುತ್ತದೆ. ಅವಳ ಕಾರು ಮಾತ್ರವಲ್ಲ, ಹಿಂದಿರುವ ಎಲ್ಲಾ ವಾಹನಗಳ ವೇಗವೂ ಅದೇ ರೀತಿ ನಿಯಂತ್ರಣಗೊಳ್ಳುತ್ತದೆ. ಮುಂದಿರುವ ವಾಹನದೊಡನೆ ''ಸುರಕ್ಷಿತ ಅಂತರ''ವಿರಬೇಕೆಂಬ ಚಿಂತೆ ವಾಹನಚಾಲಕರಿಗಿರಬೇಕಿಲ್ಲ. ಏಕೆಂದರೆ ಮುಂದಿನ ವಾಹನಕ್ಕೆ ಢಿಕ್ಕಿ ಹೊಡೆಯುವ ಸಂಭವವೇ ನಾಸ್ತಿ!

ಕೇಟಿಯ ಕಾರನ್ನು ''ಸ್ವಯಂಚಾಲಕ'' ನಡೆಸುತ್ತಿದೆ. ಅವಳು ಹೆದ್ದಾರಿಯನ್ನು ಬಿಡುವಲ್ಲಿಯ ತನಕ ಸ್ಟಿಯರಿಂಗ್ ಚಕ್ರವನ್ನು ಮುಟ್ಟಲೇ ಬೇಕಿಲ್ಲ. ಹೆದ್ದಾರಿಯನ್ನು ಬಿಡುವ ಸ್ಥಳ ಸಮೀಪಿಸುತ್ತಿದ್ದಂತೆಯೇ ಕಾರೇ ಅವಳನ್ನು ಎಚ್ಚರಿಸುತ್ತದೆ.

ಕೇಟಿಗೆ ತನ್ನ ಚಿಕ್ಕ ಕಾರಿನ ಮೇಲೆ ಬಹಳ ಅಭಿಮಾನ. ಎರಡು ದಶಕಗಳ ಹಿಂದೆ ಊಹಿಸಲಾರದಷ್ಟು ಅದು ಹೆಚ್ಚು ಸ್ವಚ್ಛ, ಹೆಚ್ಚು ಸುರಕ್ಷಿತ ಮತ್ತು ನಡೆಸಲು ಹೆಚ್ಚು ಅಗ್ಗ. ನೂರು ಕಿಲೋಮೀಟರು ದೂರ ಕ್ರಮಿಸಲು ಅದಕ್ಕೆ ಬೇಕಾಗುವ ಇಂಧನ ಕೇವಲ ೩ ಲೀಟರುಗಳು. ಇಷ್ಟೇ ಅಲ್ಲ. ಕತ್ತಲಾಗುತ್ತಿದ್ದಂತೆಯೇ ಕಾರಿನ ಹೆಡ್‌ಲೈಟುಗಳು ತಂತಾವೇ ಉರಿಯತೊಡಗುತ್ತವೆ.

ರೈಲ್ವೇ ನಿಲ್ದಾಣದಲ್ಲಿ ಕೇಟಿ ಟಿಕೇಟು ಖರೀದಿಸಬೇಕಿಲ್ಲ. ಮೈಮೇಲೆ ಧರಿಸಿಕೊಂಡಿರುವ ಒಂದು ಚಿಕ್ಕ ''ಚಿಪ್''ನ ಸಹಾಯದಿಂದ ಅವಳು ರೈಲುಗಾಡಿಯನ್ನು ಹತ್ತುವಾಗ, ಇಳಿಯುವಾಗ ಅವಳ ಗುರುತು ಹಚ್ಚಿ, ತೆರಬೇಕಾದ ಪ್ರಯಾಣದ ಶುಲ್ಕವನ್ನು ಅವಳ ಬ್ಯಾಂಕ್ ಖಾತೆಯಿಂದ ನೇರವಾಗಿ, ಸ್ವಯಂಚಾಲಿತವಾಗಿ ಪಡೆಯಲಾಗುತ್ತದೆ. ಇದೇ ಚಿಪ್ ಅವಳ ಇಂಟರ್‌ನೆಟ್ ಸಂಕೇತಾಕ್ಷರವನ್ನೂ ಹೊಂದಿದೆ. ಅಲ್ಲದೆ ಅವಳ ಮನೆಯ ಹಾಗೂ ಕಾರಿನ ಬಾಗಿಲನ್ನು ಇತರರು ಯಾರೂ ಅನಧಿಕೃತವಾಗಿ ತೆರೆಯದಂತೆ ಕಾಯುತ್ತದೆ.

ರೈಲಿನಲ್ಲಿ ಪಯಣಿಸುತ್ತಿರುವಾಗಲೇ ಕೇಟಿ ಕಛೇರಿಯ ಕೆಲವು ತುರ್ತು ಕೆಲಸಗಳನ್ನು ಮಾಡಿಕೊಳ್ಳಬಹುದು. ಆಸನದ ಬಳಿಯಲ್ಲಿ ಅಳವಡಿಸಿರುವ ಕಂಪ್ಯೂಟರ್ ಅಕ್ಷರಮಣೆಯ ಮೂಲಕ ತನ್ನ ಕಛೇರಿಯ ಕಂಪ್ಯೂಟರ್ ಜಾಲವನ್ನು ಸಂಪರ್ಕಿಸಿ ಕಛೇರಿಗೆ ಬಂದ ''ಇ-ಟಪ್ಪಾಲು''ಗಳಿಗೆ ಉತ್ತರಿಸಬಹುದು; ಗಿರಾಕಿಗಳೊಡನೆ ಭೇಟಿಯ ಸಮಯವನ್ನು ಗೊತ್ತುಪಡಿಸಿಕೊಳ್ಳಬಹುದು; ಅಥವಾ ಇನ್ನಿತರ ಯಾವುದೇ ಕಛೇರಿಯ ಕಾರ್ಯಕಲಾಪಗಳನ್ನು ನಿರ್ವಹಿಸಬಹುದು. ಹಾ, ಮರೆತೇ ಹೋಗಿತ್ತಲ್ಲ! ಚಿಂತಿಸಬೇಕಿಲ್ಲ. ಕೂಡಲೇ ಅದೇ ಅಕ್ಷರಮಣೆಯ ಮೂಲಕ ಇಂಟರ್‌ನೆಟ್‌ನ್ನು ಸಂಪರ್ಕಿಸಿ ತನ್ನ ತಾಯಿಯ ಜನ್ಮದಿನಕ್ಕೆ ಶುಭ ಹಾರೈಸಲು ಹೂಗುಚ್ಛವೊಂದನ್ನು ಆರ್ಡರ್ ಮಾಡುತ್ತಾಳೆ.

ಇದೇನು ವೈಜ್ಞಾನಿಕ ಕಟ್ಟುಕತೆಯೇ? ಅಲ್ಲ. ಈ ರೀತಿಯ ಮತ್ತು ಇಂತಹದೇ ಇತರ ತಂತ್ರವಿದ್ಯೆಗಳ ವಿಕಾಸಗಳಾಗುತ್ತಿದೆ; ದೈನಂದಿನ ಜೀವನದಲ್ಲಿ ಹೆಚ್ಚು ಹೆಚ್ಚು ಅಳವಡಿಸಲಾಗುತ್ತಿವೆ. ಇವುಗಳಲ್ಲಿ ಕೆಲವು ಈಗಾಗಲೇ ಮಾರುಕಟ್ಟೆಯಲ್ಲಿ ಸಿದ್ಧವಿವೆ. ಇಂದಿನ ಹಾಗೂ ಇನ್ನೆರಡು

ದಶಕಗಳೊಳಗೆ ಲಭ್ಯವಾಗಲಿರುವ ದೂರ ಸಂಚಾರದ ಉಪಕರಣಗಳ ನಡುವೆ ಇರುವ ವ್ಯತ್ಯಾಸ ಇಂದಿನ ರೈಲುಗಾಡಿ ಮತ್ತು ಬಾಹ್ಯಾಕಾಶ ನೌಕೆಗಳ ನಡುವಿನ ಅಂತರ ದಷ್ಟೇ ಅಪಾರ. ಇವೆಲ್ಲಾ ಸಾಧ್ಯವಾಗಲು ಕಾರಣ. ಹೆಚ್ಚು ಹೆಚ್ಚು ಶಕ್ತಿಯುತವಾದ ಪ್ರಕರ್ತೃಗಳ ಹಾಗೂ ವಿವಿಧ ರೀತಿಯ ಉತ್ತಮ ಗುಣಮಟ್ಟದ ಸಂವೇದನಾಗ್ರಾಹಿಗಳ ವಿಕಾಸ. ಇವುಗಳಲ್ಲಿ ಕೆಲವು ಆಕಾರದಲ್ಲಿ ಒಂದು ಗುಂಡುಸೂಜಿಯ ತಲೆಗಿಂತಲೂ ಚಿಕ್ಕದಿರಬಹುದು. ಆದರೂ ಈ ಸಂವೇದನಾ ಗ್ರಾಹಿಗಳು ಶ್ರವಣ ಶಕ್ತಿಯನ್ನು, ದೃಷ್ಟಿಯನ್ನು, ಇಷ್ಟೇ ಏಕೆ, ಘ್ರಾಣಶಕ್ತಿ , ರುಚಿ ಮತ್ತು ಸ್ಪರ್ಶ ಜ್ಞಾನ ಕ್ಷಮತೆಯನ್ನೂ ಹೊಂದಿರುತ್ತವೆ.

ಇರಲಿ, ಈ ಮಧ್ಯೆ ತನ್ನ ತಾಯಿಯ ಮನೆಯನ್ನು ತಲಪಿದ ಕೇಟಿ, ಅಮ್ಮನೊಡನೆ ಕುಳಿತು ಗತಕಾಲದ ನೆನಪುಗಳನ್ನು ಮೆಲುಕು ಹಾಕುತ್ತಿದ್ದಾಳೆ. ಅವಳ ತಾಯಿ ತನ್ನ ಹಿಂದಿನ ಒಂದು ಅನುಭವವನ್ನು ವರ್ಣಿಸುತ್ತಿದ್ದಾಳೆ. ಒಮ್ಮೆ ಉಲ್ಲಾಸ ಪಯಣಕ್ಕೆ ಹೊರಟು ಅರ್ಧ ದಾರಿ ಕ್ರಮಿಸಿದ ಮೇಲೆ, ಇಸ್ತ್ರಿ ಪೆಟ್ಟಿಗೆಯ ಸ್ವಿಚ್ಚನ್ನು ಬಂದು ಮಾಡಿರಲಿಲ್ಲವೇನೋ ಎಂಬ ಸಂಶಯದಿಂದ ಮನೆಗೆ ಹಿಂದಿರುಗಿದ್ದಳಂತೆ. ನೋಡಿದರೆ ನಿಜವಾಗಿ ಸ್ವಚ್ಚು ಬಂದಾಗಿತ್ತು. ಆದರೆ ಸ್ನಾನದ ಮನೆಯ ತೊಟ್ಟಿಯಲ್ಲಿ ನೀರುತುಂಬಿ ಹರಿಯುತ್ತಿತ್ತಂತೆ!

''ಈಗಂತೂ ಹಾಗಾಗುವುದು ಸಾಧ್ಯವೇ ಇಲ್ಲ'' ನಗುತ್ತಾ ನುಡಿಯುತ್ತಾಳೆ ಕೇಟಿ. ಏಕೆ ಗೊತ್ತೇ? ಚಿಕ್ಕ ಚಿಕ್ಕ ಕಂಪ್ಯೂಟರುಗಳು ನಿಃಶಬ್ದವಾಗಿ ಅವರ ಎಲ್ಲಾ ಆವಶ್ಯಕತೆಗಳ ಪೂರೈಕೆಗಾಗಿ ಸದಾಕಾಲ ಕಾರ್ಯತತ್ಪರತೆಯಿಂದ ದುಡಿಯುತ್ತಿರುತ್ತವೆ. ಈ ಪುಟ್ಟ ಕಂಪ್ಯೂಟರುಗಳೇ ನಮ್ಮ ಭವಿಷ್ಯತ್ತಿನ ಭೃತ್ಯರು.

ಅಧಿಕತರ ವೇಗ, ಚುರುಕುತನ, ಸೂಕ್ಷ್ಮ

» ೪ ''ಮೆಗಾಬೈಟ್''(೪ ಮಿಲಿಯನ್ ಬೈಟ್) ಕ್ಷಮತೆಯ ಚಿಪ್ ಒಂದರಲ್ಲಿ ಚಿಕ್ಕ ಚಿಕ್ಕ ಅಕ್ಷರಗಳಲ್ಲಿ ನಿಬಿಡವಾಗಿ ಬೆರಳಚ್ಚು ಮಾಡಿದ ಇನ್ನೂರ ಐವತ್ತಕ್ಕೂ ಅಧಿಕ ಪುಟಗಳಷ್ಟು ಬರವಣಿಗೆಯನ್ನು ತುಂಬಿಡಬಹುದು. ಇಂತಹ ಚಿಪ್ ಕೂಡ ಶೀಘ್ರದಲ್ಲಿಯೇ ಹಳತಾಗಿ ಹೋಗಲಿದೆ.

» ಈಗ ವಿಕಾಸವಾಗುತ್ತಿರುವ ೪ ''ಗಿಗಾ ಬೈಟ್'' (೪ ಸಾವಿರ ಮಿಲಿಯನ್ ಬೈಟ್) ಕ್ಷಮತೆಯ ಚಿಪ್ ಒಂದರಲ್ಲಿ ಶೇಕ್ಸ್‌ಪಿಯರ್ ಮಹಾಕವಿಯ ಸಮಗ್ರ ಕೃತಿಗಳ ೬೪ ಪಟ್ಟು ಸಾಹಿತ್ಯವನ್ನು ತುಂಬಿಡಬಹುದು.

» ಇನ್ನು ಒಂದು ದಶಕದೊಳಗೆ ಈಗಿನ ಫ್ಲಾಪಿ ಡಿಸ್ಕೆಟ್ ನಂತಹ ಒಂದು ಮಾಧ್ಯಮದಲ್ಲಿ ಸುಮಾರು ಮೂರು ಮಿಲಿಯ ಪುಸ್ತಕಗಳ ಸಾಹಿತ್ಯವನ್ನು ಶೇಖರಿಸಿಡಬಹುದು.

» ಸುಮಾರು ೨೦೦೦ ಇಸವಿಯ ಹೊತ್ತಿಗೆ ಇಂದಿನ ಅತಿದೊಡ್ಡ ಕಂಪ್ಯೂಟರಿನಷ್ಟು ಕಾರ್ಯಕ್ಷಮತೆಯ ಸೂಕ್ಷ್ಮಪ್ರಕರ್ತೃವಿನ ವಿಕಾಸವಾಗುವ ಸಂಭವ ಊಹಾತೀತವಲ್ಲ.

» ಭವಿಷ್ಯತ್ತಿನ ಕಂಪ್ಯೂಟರುಗಳೊಡನೆ ಸಂಪರ್ಕ ಸ್ಥಾಪಿಸಲು ಅಕ್ಷರಮಣೆ ಅಥವಾ ಸ್ಪರ್ಶಫಲಕಗಳು ಮಾತ್ರವಲ್ಲ ಶಬ್ದಗ್ರಾಹಿಗಳ ಪ್ರಾಯಶಃ ದೃಷ್ಟಿಗ್ರಾಹಿಗಳ ಬಳಕೆಯೂ ಆಗುವುದು ಸಾಧ್ಯವಿದೆ. (ಅನುವಾದಕನ ಟಿಪ್ಪಣಿ: ಶಬ್ದಗ್ರಾಹಿಗಳು ಈಗಾಗಲೇ ಬಳಕೆಗೆ ಬಂದಿವೆ).

* ಬೈಟ್ ಎಂದರೆ ಮಾಹಿತಿಯ ಒಂದು ತುಂಡು, ಅಥವಾ ಒಂದು ಅಕ್ಷರ.

ಮತ್ತೆ ಕರೆಯುತ್ತಿದೆ ಕಾಂಗೋ

ಸರೋಜ ಆರ್. ಆಚಾರ್ಯ
''ಭಾಗ್ಯಶ್ರೀ''
೧-೨-೫೦ ಬಿ, ಕುಂಜಿ ಬೆಟ್ಟು
ಉಡುಪಿ-೫೭೬೧೦೨

ಸಡೆಮುಂದೆ ನಡೆಮುಂದೆ ಜಗ್ಗದೆಯೆ ಕುಗ್ಗದೆಯೆ ಹಿಗ್ಗಿ ನಡೆಮುಂದೆ

ಇದು ನಿಜಕ್ಕೂ ಸೋಜಿಗವೇ! ಈ 'ಕಾಂಗೋ ಬೇಸಿನ್'ಗೆ ನಾನು ಹೊರಟು ನಿಂತಾಗ ಹಲವಾರು ವಿಷಯಗಳ ಕುರಿತು ನನಗೆ ಮುನ್ನೆಚ್ಚರಿಕೆ ನೀಡಲಾಗಿತ್ತಾದರೂ, ಆಫ್ರಿಕದ ಜೇನುನೊಣಗಳ ವಿಚಾರವಾಗಿ ಯಾರೂ ಏನೂ ಹೇಳಿರಲಿಲ್ಲ! ಮೆಷಿನ್‌ಗನ್‌ಗಳೊಂದಿಗೆ ತಿರುಗುವ ಕ್ರೂರ ಬೇಟೆಗಾರರ ಬಗ್ಗೆ ತಿಳಿ ಹೇಳಿದ್ದರು. ನದಿ ಪ್ರಯಾಣದಲ್ಲಿ ಉಂಟಾಗುವ ಕುರುಡುತನದ ಕುರಿತು ಎಚ್ಚರಿಸಿದ್ದರು. ನಾನು ಸಾಗಲಿರುವ ದಾರಿಯಲ್ಲಿಯೇ ಭೀಕರವಾದ 'ಎಬೋಲಾ' ವೈರಸ್‌ನ ಉಗಮಸ್ಥಾನವಿರುವ ಕಾರಣ ಅತ್ಯಂತ ಜಾಗ್ರತೆ ವಹಿಸಲು ಹೇಳಿದ್ದರು. ಅಂತೆಯೇ ಅಲ್ಲಿಯ ಚಿರತೆಗಳನ್ನು, ಹಿಪ್ಪೊಗಳನ್ನು ಮತ್ತು ಮೊಸಳೆಗಳನ್ನು ವರ್ಣಿಸಿದ್ದರು. 'ಬ್ಲ್ಯಾಕ್ ಮಾಂಬಾ' ಎಂಬ ಕರಿನಾಗರ ಹಾವು ಕಚ್ಚಿದರೆ ಕೂಡಲೇ ಸಾವು ನಿಶ್ಚಿತ ಎಂದು ಹೆದರಿಸಿದ್ದರು.

ಆದರೆ ಈ ಹೆಜ್ಜೇನುಗಳು! ನಾವು ನಮ್ಮ ಸಾಮಾನು ಸರಂಜಾಮುಗಳೊಂದಿಗೆ ಆ ಪ್ರಾಂತದಲ್ಲಿ ಇಳಿಯುತ್ತಿದ್ದಂತೆಯೇ ಕಿವಿ ಹರಿಯುವಂತೆ ದೊಡ್ಡ ಝೇಂಕಾರವೆಬ್ಬಿಸುತ್ತ ಜೇನ್ನೊಣಗಳ ಹಿಂಡು ನಮ್ಮನ್ನು ಸುತ್ತುವರಿದಿತ್ತು. ಇವುಗಳನ್ನೆದುರಿಸಲು ಸದ್ಯಕ್ಕಂತೂ ಯಾವುವೇ ಆಯುಧಗಳು ನಮ್ಮಲ್ಲಿ ಇರಲಿಲ್ಲ.

* * *

ನಮ್ಮ ಈ ಅಭಿಯಾನದ ಮುಖಂಡ 'ಬ್ರೂಸ್ ಹೇಸ್' ವೃತ್ತಿಯಲ್ಲಿ ವೈದ್ಯರು. ೫೧ ವರ್ಷ ಪ್ರಾಯದ ಬ್ರೂಸ್‌ರು ಮಧ್ಯ-ಆಫ್ರಿಕಾದ, ಕಾಂಗೋ ಮುಖಜ ಭೂಮಿಯ, ಈಗ ಅಳಿವಿನಂಚಿನಲ್ಲಿರುವ ಅರಣ್ಯಗಳಲ್ಲಿ ಎದುರಾಗಲಿರುವ ಅಪಾಯಗಳನ್ನು ಅರಿಯದವರೇನಲ್ಲ. ಪರಿಸರದ ಮತ್ತು ವನ್ಯಜೀವಿಗಳ ರಕ್ಷಣೆಯನ್ನು ತನ್ನ ಧ್ಯೇಯವಾಗಿಟ್ಟುಕೊಂಡು ಸದಾ ಕಾರ್ಯನಿರತರಾಗಿರುವ ಬ್ರೂಸ್ ಹೇಸ್ 'ಆಫ್ರಿಕದ ಕಾಡುಗಳ ಮತ್ತು ನದಿಗಳ ಸಂರಕ್ಷಣಾ ಕೇಂದ್ರದ ಅಧ್ಯಕ್ಷರು.

ತಮ್ಮ ಈ ಸಲದ ಯಾತ್ರೆಯ ಅನುಭವಗಳನ್ನು ಆಗುಹೋಗುಗಳನ್ನು ಕ್ರಮಬದ್ಧವಾಗಿ ದಾಖಲಿಸುವ ಕೆಲಸಕ್ಕಾಗಿ ಅವರು ನನ್ನನ್ನು ಕರೆದಾಗ ನಾನೇನೋ ಕೂಡಲೇ ಒಪ್ಪಿಗೆ ನೀಡಿದ್ದೆನಾದರೂ ಅವರ ಅಭಿಯಾನದ ಮುಖ್ಯ ಉದ್ದೇಶವೇನೆಂದು ಆಗ ನನಗೇನೂ ಗೊತ್ತಿರಲಿಲ್ಲ.

ಅಕ್ಟೋಬರ್ ೧೯೯೯ರಲ್ಲಿ ನಾನು ಆಫ್ರಿಕಾ ಖಂಡಕ್ಕೆ ಪ್ರಯಾಣ ಮಾಡುತ್ತಿರುವಾಗ ಬ್ರೂಸ್‌ರ ಗೆಳೆಯರೊಬ್ಬರು ನನಗೆ ಸಿಕ್ಕಿದರು. ''ಬ್ರೂಸ್‌ನ ಹುಟ್ಟೂರಿನ ಜನರಲ್ಲಿ ಹೆಚ್ಚು ಕಡಿಮೆ ಎಲ್ಲರೂ ಒಂದು ಸಲವಾದರೂ ಬ್ರೂಸ್‌ನೊಂದಿಗೆ ಅರಣ್ಯ ಯಾತ್ರೆ ಮಾಡಿದವರೇ ಆಗಿದ್ದಾರೆ. ಆದರೆ ಒಮ್ಮೆ ಹೋದವರು ಮತ್ತೊಮ್ಮೆ ಅವರೊಂದಿಗೆ ಜತೆಗೂಡುವ ಸಾಹಸವನ್ನು ಮಾಡಲಿಲ್ಲ'' ಎಂದು ಸೂಚ್ಯವಾಗಿ ಹೇಳಿದ್ದರು.

ಬೇಕೆಂದೇ ಆಪತ್ತುಗಳನ್ನು ಅರಸಿಕೊಂಡು ಹೋಗಿ ಧುಮುಕುವ ಹುಚ್ಚು ಸಾಹಸವೆಂದು ಮೇಲ್ನೋಟಕ್ಕೆ ಕಾಣಬಹುದಾದರೂ ಬ್ರೂಸ್‌ರ ಈ ಪಯಣಗಳ ಹಿಂದೆ ಒಂದು ನಿರ್ದಿಷ್ಟವಾದ ಗುರಿ ಮತ್ತು ಅಚಲವಾದ ನಂಬಿಕೆಯಿರು

ಮೂಲ: ಮೈಕೇಲ್ ಫಿಂಕೆಲ್ ಅವರ 'ಕ್ರೇಜಿ ಇನ್ ದ ಕಾಂಗೋ' ಎಂಬ ಲೇಖನದ ಅನುವಾದ

ವುದು ಸ್ಪಷ್ಟ ! ಹತ್ತೊಂಭತ್ತು ದಿನಗಳ ಈ ಪ್ರವಾಸ ಬಹುಶಃ ಬ್ರೂಸ್‌ರ ಅತ್ಯಂತ ಮಹತ್ವಾಕಾಂಕ್ಷೆಯ ದಂಡಯಾತ್ರೆಯಾಗಿತ್ತು. ಇದಕ್ಕೆ ಮಧ್ಯ ಆಫ್ರಿಕಾ ಗಣರಾಜ್ಯದ 'ಹಾಟ್ ಚಿಂಕೋ' ಎಂಬ ಪ್ರದೇಶವನ್ನು ಆರಿಸಿಕೊಳ್ಳಲಾಗಿತ್ತು.

ಸೂಡಾನ್‌ನಲ್ಲಿ ಹುಟ್ಟಿ, ಸುಮಾರು ೩೨೦ ಕಿಲೋ ಮೀಟರ್‌ಗಳಷ್ಟು ದೂರ ದಕ್ಷಿಣಕ್ಕೆ ಹರಿಯುವ ಚಿಂಕೋ ನದಿ 'ಹಾಟ್ ಚಿಂಕೋ'ವನ್ನು ಇಬ್ಭಾಗ ಮಾಡುತ್ತದೆ. ಒಂದು ಕಾಲದಲ್ಲಿ 'ಹಾಟ್‌ಚಿಂಕೋ' ಎಂದರೆ ಇಡೀ ಕಾಂಗೋ ಬೇಸಿನ್‌ನ ಶಿರೋಮಣಿಯಂತ್ತಿತ್ತು. ಸವನ್ನಾ ಕಾಡುಗಳಲ್ಲೆಲ್ಲ ಗಂಭಿರವಾಗಿ ಅಲೆದಾಡುವ ಸಾವಿರಾರು ಆನೆಗಳು, ಕಾಡೆಮ್ಮೆ, ವಾಟರ್‌ಬಕ್, ಜಯಂಟ್ ಎಲ್ಯಾಂಡ್, ಡ್ಯುಕರ್ ಮುಂತಾದವುಗಳ ಹಿಂಡುಗಳು.... ೧೯೭೦ರ ದಶಕದ ಅಂತ್ಯ ಮತ್ತು ೧೯೮೦ರ ದಶಕದ ಆದಿಯಲ್ಲಿ ಸೂಡಾನಿನ ಕ್ರೂರ ಬೇಟೆಗಾರರು ಹಾಟ್ ಚಿಂಕೋ ಪ್ರಾಂತಕ್ಕೆ ನುಗ್ಗುತ್ತಲೇ ವಿನಾಶಕಾಲ ಶುರುವಾಗಿತ್ತು. ಹಳ್ಳಿಗಳ ಮೇಲೆಲ್ಲಾ ದಾಳಿ ನಡೆಸಿದ ಈ ಹಂತಕರು ಕಂಡ ಕಂಡ ಪ್ರಾಣಿಗಳನ್ನೆಲ್ಲ ಕೊಂದು ಹಾಕಿದರು. ಈಗ ಅಲ್ಲಿ ಇಂಥ ಪ್ರಾಣಿ ಹಂತಕರದೇ ಆಳ್ವಿಕೆಯಾಗಿದ್ದು, ಸರಕಾರವೂ ಏನೂ ಮಾಡಲಾಗದೆ ಕೈಕಟ್ಟಿ ಕೂಡುವ ಪರಿಸ್ಥಿತಿ!

• • •

ಚಿಂಕೋ ನದಿಯ ಉದ್ದಕ್ಕೂ ಜಲ ಮಾರ್ಗವಾಗಿ ಪ್ರಯಾಣ ಮಾಡುತ್ತಾ, ಇನ್ನೂ ಅಳಿಯದೆ ಉಳಿದಿರುವ ಪ್ರಾಣಿ ಸಂಕುಲಗಳ ಪಟ್ಟಿ ತಯಾರಿಸುವುದು, (ದಶಮಾನಗಳಿಂದಲೂ ಯಾರಿಂದಲೂ ಮಾಡಲಾಗದ ಕೆಲಸ!) ಮತ್ತು ಬೇಟೆಗಾರರ ನಿರ್ಮೂಲನಕ್ಕಾಗಿ ಮೊದಲ ಹೆಜ್ಜೆ ಇಡುವುದು-ಇವೇ ಬ್ರೂಸ್‌ರ ಪಯಣದ ಉದ್ದೇಶವಾಗಿತ್ತು. ಹಾಗಾಗಿ ಕೆಲವರು ಇದನ್ನು 'ಬಲಿಪೀಠಕ್ಕೆ ಹೊರಡುವ ನಿಯೋಗ' ಎಂದು ಕರೆದುದರಲ್ಲಿ ಅತಿಶಯವಿರಲಿಲ್ಲ.

ನಮ್ಮೊಂದಿಗೆ ಬ್ರೂಸ್‌ರ ನಾಲ್ವರು ಗೆಳೆಯರು, ಒಬ್ಬ ಛಾಯಾಗ್ರಾಹಕ, ಮೂವರು ಪರಿಸರವಾದಿಗಳು ಇದ್ದರು. ಇವರಲ್ಲದೆ ಎರಡು ಜನ ಮಧ್ಯ ಆಫ್ರಿಕದವರೂ-ಕಾಡಿನ ದಾರಿಗಳಲ್ಲಿ ಪರಿಣತಿ ಹೊಂದಿರುವ ಥಾಮಸ್ ಕೊಲಾಗಾ, ಮತ್ತು ನಮ್ಮ ಅಂಗರಕ್ಷಕನಾದ ರೇಮಂಡ್ ಯಕೋರೋ ಸೇರಿದ್ದರು. ಕಾಡಿನ ಪೋಷಾಕುಗಳನ್ನು ಧರಿಸಿ, ಹೆಗಲಲ್ಲಿ ಎ.ಕೆ.೪೭ ಕೋವಿಯನ್ನು ಹೊತ್ತುಕೊಂಡಿದ್ದ ರೇಮಂಡ್‌ನ ಬೆಲ್ಟಲ್ಲಿ ಎರಡು ಗ್ರೆನೇಡ್‌ಗಳೂ ಇದ್ದುವು, ''ಒಂದು ಚೋರ ಹಂತಕರಿಗಾಗಿ, ಇನ್ನೊಂದು ಅವರ ಟ್ರಕ್''ಗಾಗಿ ಎಂದು ಅವನು ಹೇಳಿಕೊಳ್ಳುತ್ತಿದ್ದ.

ಮಧ್ಯ ಆಫ್ರಿಕ ಗಣರಾಜ್ಯದ ರಾಜಧಾನಿ 'ಬಾಂಗುಯ್' ಯಿಂದ ಒಂದು ವಿಮಾನದಲ್ಲಿ, ಮತ್ತು ಹೆಲಿಕಾಪ್ಟರ್‌ನಲ್ಲಿ ಒಟ್ಟು ಎರಡು ಗಂಟೆಕಾಲ ಪ್ರಯಾಣ ಮಾಡಿದ ನಾವು ಚಿಂಕೋ ನದಿ ತೀರದಲ್ಲಿ ಇಳಿದೆವು. ಆಳೆತ್ತರಕ್ಕೂ ಕೋರೆ ಹುಲ್ಲು ಬೆಳೆದಿದ್ದ ವಿಶಾಲವಾದ ಬಯಲು ಪ್ರದೇಶ; ನಾಗರಿಕತೆಗಿಂತ ಬಲು ದೂರ! ಮನದೊಳಗೆ ದಿಗಿಲು ತುಂಬಿ ಕೊಂಡರೂ ಅಂಗರಕ್ಷಕ ರೇಮಂಡ್‌ನ ಉಪಸ್ಥಿತಿಯಿಂದ ತುಸು ಧೈರ್ಯವೇನೋ ಬಂದಿತ್ತು. ಆದರೆ ಅದೂ ಹೆಚ್ಚು ಸಮಯ ಉಳಿಯಲಿಲ್ಲ. ಏಕೆಂದರೆ ಅಷ್ಟರಲ್ಲಾಗಲೇ ೪೦-೫೦ ಹೆಜ್ಜೇನುಗಳು ನಮ್ಮನ್ನು ಮುತ್ತಿ ಕೊಂಡಾಗಿತ್ತು. ತಲೆ ಮತ್ತು ಮುಖವನ್ನು ರಕ್ಷಿಸುವ ಬಲೆಕವಚಗಳು ಏನೇನೂ ಸಾಲದಾಗಿ ಹೋದುವು.

ಬೆವರಿನ ವಾಸನೆಯಿಂದ ಆಕರ್ಷಿತವಾಗುವ ಜೇನ್ನೊಣ ಅತ್ಯಂತ ಸಣ್ಣ ರಂಧ್ರ

ದಲ್ಲೂ ಒಳನುಸುಳಿ ಬಿಡುತ್ತದೆ. ಒಮ್ಮೆ ಒಳಗೆ ಸಿಕ್ಕಿ ಬಿದ್ದ ಜೇನ್ನೊಣ ಹೊರಬರಲಾಗದ ಭೀತಿಯಿಂದ ಕುಟುಕುತ್ತದೆ. ಸ್ವಾಭಾವಿಕ ವಾಗಿಯೇ ಅಪ್ಪಚ್ಚಿಯಾಗುತ್ತದೆ. ಆಗ ಅದು ಒಂದು ರೀತಿಯ ವಾಸನೆಯನ್ನು ಹೊರ ಸೂಸುವುದೇ ತಡ, ಉಳಿದೆಲ್ಲ ಜೇನ್ನೊಣಗಳು ಯಾವುದೇ ಕರ್ಮಯುದ್ಧಕ್ಕೆ ಅಣಿಯಾಗು ವಂತೆ ಬಂದು ಮುತ್ತಿಕೊಳ್ಳುತ್ತವೆ. ಆಫ್ರಿಕದ ನೊಣದ ಕುಟುಕುವಿಕೆಯಿಂದ ನೋವಿಗಿಂತಲೂ ಮಿಗಿಲಾಗಿ ಅಸಾಧ್ಯ ಉರಿ, ಹಿಂದೆಯೇ ತಲೆ ತಿರುಗುವಿಕೆ, ಸಂಕಟ ಎಲ್ಲಾ ಉಂಟಾಗುತ್ತವೆ. ಕುಟುಕಿದ ಸ್ಥಳದಲ್ಲಿ ಗಾಯವಾಗುವುದರಿಂದ ಅದಕ್ಕೆ ಪಟ್ಟಿ ಕಟ್ಟುವುದು ಅನಿವಾರ್ಯ ವಾಗುತ್ತದೆ.

ನನ್ನ ಇಬ್ಬರು ಸಹಚರರು ಜೇನ್ನೊಣಗಳ ದಾಳಿಯಿಂದ ತಪ್ಪಿಸಿ ಕೊಳ್ಳಲು, ತಮ್ಮೆಲ್ಲಾ ಉಡುಪು, ವೇಷ ಭೂಷಣಗಳೊಂದಿಗೆ ಚಿಂಕೋ ನದಿಗೆ ಧುಮುಕಿ ಬಿಡಲು , ಅವರ ಸೊಂಟಪಟ್ಟಿಯಲ್ಲಿ ನೇತಾಡುತ್ತಿದ್ದ ಕ್ಯಾಮೆರಾ ಮತ್ತು ಬೈನಾಕುಲರ್‌ಗಳು ಆರಂಭದಲ್ಲೇ ಹಾಳಾಗಿ ಹೋದವು.

ಹಗಲಲ್ಲಷ್ಟೇ ಎರಗುವ ನೊಣಗಳ ಹಿಂಡು ಕತ್ತಲಾವರಿಸುತ್ತಿದ್ದಂತೆ ಹಾರಿ ಹೋದಾಗ ಸಮಾಧಾನವೆನಿಸಿತು. ಆದರೆ ಡೇರೆಯೊಳಗೆ ಪ್ರವೇಶಿಸಿದಾಗ ನಮಗೆ ನಿರಾಶೆ ಕಾದಿತ್ತು. ಜೇನುಗಳ ಅನುಪಸ್ಥಿತಿಯನ್ನು ಸರಿತೂಗಿಸಲೋ ಎಂಬಂತೆ ಸೊಳ್ಳೆಗಳು, ನುಸಿಗಳು, ತಿಗಣೆಗಳು, ಗುಂಗಾಡುಗಳು! ಡೇರೆಯ 'ಜಿಪ್' ಅನ್ನು ಸ್ವಲ್ಪವೇ ತೆರೆದರೂ ಸಾಕು , ಬಿರುಗಾಳಿಯಂತೆ ಒಳನುಗ್ಗಿ ತಮ್ಮ ಸ್ಥಾನ ಭದ್ರತೆ ಮಾಡಿಕೊಳ್ಳುತ್ತಿದ್ದುವು. ಮುಂದಿನ ದಿನಗಳಲ್ಲಿ ನಮ್ಮ ಡೇರೆಯ ಗೋಡೆಗಳು ತರತರದ ಕೀಟಗಳ ಆಕಾರದ ಕಲೆಗಳಿಂದ ಅಲಂಕೃತವಾಗಿ ಕಂಗೊಳಿಸು ತ್ತಿದ್ದವು. ಅವು ನಮ್ಮ ನಿದ್ರಾಹೀನ ರಾತ್ರಿಗಳಿಗೆ ಸಾಕ್ಷಿಯಾಗಿದ್ದುವು ಕೂಡ!

• • •

ಮರುದಿನ ಬೆಳಿಗ್ಗೆ ಮರದ ತೆಪ್ಪಗಳನ್ನೂ, 'ಕಯಕ್' ಎಂಬ ಕಿರುದೋಣಿಗಳನ್ನೂ ನೀರಿಗೆ ಇಳಿಬಿಟ್ಟ ನಾವು ಪ್ರಯಾಣ ಮುಂದುವರಿಸಿ ದೆವು. ಇಕ್ಕೆಲದ ಕಾಡುಗಳನ್ನು ವೀಕ್ಷಿಸುವುದೇ ನಮ್ಮ ಏಕಮಾತ್ರ ಕೆಲಸವಾಗಿತ್ತು. ಕೊಳೆಯಾದ ಕಿಟಕಿ ಗಾಜುಗಳಂತಹ ರೆಕ್ಕೆಗಳನ್ನು ಹೊಂದಿದ್ದ ಒಂದು ಜೋಡಿ ಚಿಟ್ಟೆಗಳು ನಮ್ಮನ್ನು ಹಿಂಬಾಲಿಸಿ ಬರುತ್ತಿದ್ದುವು. ನೋಡನೋಡು ತ್ತಿದ್ದಂತೆಯೇ ಬೂದು-ನೀಲಿ ಬಣ್ಣದ ಮೋಡ ಕವಿದಂತೆ ಅವುಗಳ ಸಂಖ್ಯೆ ಹೆಚ್ಚಾಯಿತು. ನಮ್ಮ ಕೆನ್ನೆ, ಮೂಗು , ಕಿವಿಗಳಿಗೆ ತಮ್ಮ ರೆಕ್ಕೆ ಗಳಿಂದಲೇ ಕಚಗುಳಿಯಿಡುತ್ತಿದ್ದ ಅವು ಹಗಲೆಲ್ಲಾ ನಮ್ಮೊಂದಿಗೇ ಇದ್ದುವು. ನನ್ನ ಬರಿಗಾಲಿನ ಮೇಲೆ ಬೆರಳಿಗೊಂದರಂತೆ ಹತ್ತು ಪಾತರಗಿತ್ತಿಗಳು ಏಕಕಾಲದಲ್ಲಿ ಬಂದಿಳಿದಾಗ ದಟ್ಟ ಕಾನನದಲ್ಲೂ ಪುಕ್ಕಟೆ ಮನೋರಂಜನೆಗೆ ಕೊರತೆಯಿಲ್ಲ ಎನಿಸಿತು.

ಕೊಲಬಸ್ ಜಾತಿಯ ಮಂಗಗಳು ಜೋಕಾಲಿಯಾಡುತ್ತಿದ್ದ ಒಂದು ಅಕೇಶಿಯಾ ಮರದ ಅಡಿಯಿಂದಾಗಿ ಸಾಗಿದಾಗ ನಾನು ನೀರಿನ ಮಟ್ಟದಲ್ಲಿದ್ದ ಒಂದು ಟೊಂಗೆಯನ್ನು ಹಿಡಿದುಕೊಂಡೆ. ಹಾಗೆಯೇ ನನ್ನ ದೋಣಿ ಯಲ್ಲಿ ಅಂಗಾತ ಮಲಗಿಕೊಂಡು ಅವುಗಳ ಆಟಪಾಠಗಳನ್ನು ನೋಡತೊಡಗಿದೆ. ಒಟ್ಟು ಏಳು ಮಂಗಗಳು. ಮೈ ತುಂಬ ಕರಿ ತುಪ್ಪಳ, ಬಿಳಿ ಬಣ್ಣದ ಮುಖದಲ್ಲಿ ಗಿಡ್ಡದಾದ ಗಡ್ಡ! ಆಗಾಗ ಜೋರಾಗಿ ಕಿರುಚುತ್ತ ಮರದ ಟೊಂಗೆಗಳಲ್ಲಿ ಅವು ಹಲವು ತರದ ಸರ್ಕಸ್ ಗಳನ್ನು ತೋರಿಸಿದುವು. ತುಸು ಹೊತ್ತಿನ

ಆನಂತರ ಒಂದು ಕೊಲಬಸ್‌ಗೆ ಇದೆಲ್ಲಾ ಸಾಕೆನಿಸಿರಬೇಕು ; ಅಕೇಶಿಯಾ ಬೀಜಗಳನ್ನು ದೋಣಿಯ ಕಡೆಗೆ ತೂರಿ ತೂರಿ ನನ್ನನ್ನು ಓಡಿಸುವಲ್ಲಿ ಯಶಸ್ವಿಯಾಯಿತು.

ಮತ್ತೊಮ್ಮೆ ಸುಮಾರು ೨೦ ಬಬೂನ್‌ಗಳು ಕೂತಿದ್ದ ಮರದ ಕೆಳಗೆ ದೋಣಿ ನಿಲ್ಲಿಸಿದ್ದೆ. ಅವುಗಳಲ್ಲಿ ದೊಡ್ಡದಾದ ಗಂಡು ಮಂಗವು ತನ್ನ ವ್ಯಾಪಕವಾದ ಶಬ್ದ ಭಂಡಾರದ ಹಲವು ನಮೂನೆಗಳನ್ನು ನನಗೆ ತೋರಿಸಿ ಕೊಟ್ಟಿತು. ಕಿರುಚುವಿಕೆ, ಅರಚುವಿಕೆ, ಬೊಗಳುವಿಕೆ, ಗುರುಗುಟ್ಟುವಿಕೆ.. ಒಂದೇ... ಎರಡೇ.. ಮತ್ತೆ ಮಾತ್ರ ಆ ಗಾಟಿ ಬಬೂನು ಬೇರೊಂದು ಟೊಂಗೆಗೆ ಜಿಗಿದು ಅಲ್ಲಿಂದ ನನ್ನ ಮೇಲೆ ಮೂತ್ರ ಮಾಡಲು ಉಪಕ್ರಮಿಸಿದಾಗ ಅಲ್ಲಿಂದ ಲಗುಬಗೆಯಿಂದ ದೂರ ಸರಿಯಬೇಕಾಯಿತು. ಆದರೂ ''ಗುಡ್ ಬೈ'' ಎಂದು ನಾನು ಕೈಬೀಸಿದಾಗ ಎರಡು ಸಣ್ಣ ಬಬೂನ್‌ಗಳು ತಾವೂ ಕೈ ಬೀಸಿದವು - ಅಥವಾ ಹಾಗೆಂದು ನನಗನಿಸಿತು !

• • •

'ಹಾಟ್ ಚಿಂಕೋ'ದ ವನ್ಯ ಜೀವನವನ್ನು, ಜೀವಿಗಳನ್ನು ಉಳಿಸುವುದು ಅನಿವಾರ್ಯವೆಂಬುದನ್ನು ಜನರಿಗೆ ಮನದಟ್ಟು ಮಾಡಿಕೊಡಬೇಕಾದರೆ, ಹಾಗೆ ಉಳಿಸುವ ಸಾಧ್ಯತೆಯನ್ನು ಎತ್ತಿ ಹಿಡಿಯುವಂಥ ಕೆಲವು ಸಾಕ್ಷಿಗಳನ್ನು ಒದಗಿಸಬೇಕಿತ್ತು. ಅದಕ್ಕಾಗಿ ನಾವು ಚಾರಣಗಳನ್ನು ಕೈಗೊಂಡು ವಿಷಯ ಸಂಗ್ರಹಣೆ ಮಾಡಲು ತೊಡಗಿದೆವು. ಒಮ್ಮೆ ಒಂದು ತೆರವಾದ ಮೈದಾನದಲ್ಲಿ ಫಕ್ಕನೆ ಮೊಣಕಾಲೂರಿ ಕುಳಿತ ಥಾಮಸ್, ತನ್ನನ್ನು ಅನುಕರಿಸುವಂತೆ ನಮಗೆ ಸನ್ನೆ ಮಾಡಿದ. ಮೂಗನ್ನು ಒತ್ತಿ ಹಿಡಿದು, ಉಸಿರೆಳೆದುಕೊಂಡವನು ಕೀರಲಾದ ಒಂದು ವಿಚಿತ್ರ ಸದ್ದನ್ನು ಹೊರಡಿಸಿದ. ''ಮುಯ್ ಮುಯ್, ಮುಯ್ !'' ಅಂಥ ವಿನೂತನ ಶಬ್ದಗಳು ಪ್ರಾಣಿಗಳನ್ನು ಸೆಳೆಯುವುದು ಸಹಜ. ಹಾಗಾಗಿ ನಾವು ಮೌನವಾಗಿ ಕಾದೆವು. ಊಹೂಂ, ಏನೂ ಫಲವಿಲ್ಲ. ಥಾಮಸ್ ಮತ್ತೊಮ್ಮೆ ಸದ್ದು ಮಾಡಿದಾಗ ಪಕ್ಕದ ಪೊದೆಯೊಳಗೆ ಸಣ್ಣ ಅಲುಗಾಟ ! ನಾವು ತಿರುಗಿ ನೋಡಿದಾಗ ಒಂದು ಹಳದಿ ಬಣ್ಣದ ಡ್ಯುಕರ್‌ನ ಹಿಂಭಾಗ, ಮತ್ತೊಂದು ಮರಿ ಜಿಂಕೆ ಗೋಚರಿಸಿತು, ಅಷ್ಟೆ ಥಾಮಸ್‌ಗೆ ನಿರಾಶೆಯಾಯಿತು. ಚಿಂಕೋದ ವನ್ಯ ಮೃಗಗಳ ಒಡನಾಟದಲ್ಲೇ ಬಾಲ್ಯ, ಯೌವನಗಳನ್ನು ಕಳೆದಿದ್ದ ಥಾಮಸ್‌ಗೆ ಪ್ರಾಣಿ ಹಂತಕರ ಕುರಿತು ತೀವ್ರವಾದ ಆತಂಕವಿತ್ತು, ತಿರಸ್ಕಾರವಿತ್ತು. ''ಈಗೆಲ್ಲಾ ನನಗೆ ಯಾವುದೋ ಪಾಳು ಬಿದ್ದ ತೋಟದಲ್ಲಿರುವಂತೆ ಭಾಸವಾಗುತ್ತದೆ'' ಎಂದು ಆಗಾಗ ಪ್ರಲಾಪಿಸುತ್ತಿದ್ದ.

ಆದರೂ ನಾವಿನ್ನೂ ನಂಬಿಕೆ ಕಳೆದುಕೊಂಡಿರಲಿಲ್ಲ. ಮುಂದೆ ಸಾಗುತ್ತಿದ್ದಂತೆ ಆನೆ, ಓಪ್ಪೊ ಮತ್ತು ಕಾಡು ಹಂದಿಗಳ ಹೆಜ್ಜೆ ಗುರುತುಗಳನ್ನು ಪತ್ತೆ ಹಚ್ಚಿದೆವು. ಇನ್ನೊಂದು ದಿನ ಬ್ರೂಸ್‌ರೊಂದಿಗೆ ತಿರುಗುತ್ತ ಅವರು ಮಾಡುತ್ತಿರುವುದನ್ನೆಲ್ಲಾ ಗುರುತು ಮಾಡಿಕೊಳ್ಳುತ್ತಿದ್ದೆ. ಒಂದೆಡೆ ಸಿಂಹದ ಮಲದ ಒಂದು ದೊಡ್ಡ ಮುದ್ದೆಯಿತ್ತು. ಚರಂಡಿ ಜಾಲರಿಯಲ್ಲಿ ಸಿಕ್ಕಿರುವ ಕೂದಲಿನ ಉಂಡೆಯನ್ನು ಹೋಲುವ ಅದರೊಳಗೆ ತನ್ನ ತೋರು ಬೆರಳನ್ನು ತೂರಿಸಿದ ಡಾ. ಬ್ರೂಸ್ ''ಈ ಸಿಂಹಕ್ಕೆ ಆಹಾರವಾಗಿರಬಹುದಾದ ಆ ಇನ್ನೊಂದು ಪ್ರಾಣಿಯ ಕುರಿತ ಮಾಹಿತಿಗಾಗಿ ಈ ಹುಡುಕಾಟ'' ಎಂದು ನನಗೆ ವಿವರಣೆ ನೀಡಿದರು. ಸೈನಿಕ ಇರುವೆಗಳ ದೊಡ್ಡ ಸಾಲನ್ನು ಕಂಡಾಗ ಈ ಇರುವೆಗಳ ನಡಿಗೆಯ ಸದ್ದನ್ನು ಆಲಿಸಬಹುದೇನೋ ಎಂದು ಕೊಂಡು ನೆಲಕ್ಕೆ ಕಿವಿ ಹಚ್ಚಿದರು. (ಅವರು ಆಲಿಸಿರಬಹುದು!)

• • •

ಮರುದಿನ ಅಪರಾಹ್ನದ ಹೊತ್ತಿನಲ್ಲಿ

ನಾವು ಒಂದು ಗುಡ್ಡವನ್ನು ಹತ್ತಿದಾಗ ನಾನು ಜೇನ್ನೊಣಗಳ ಆಕ್ರಮಣಕ್ಕೆ ತುತ್ತಾದೆ. ಗುಡ್ಡದ ಶಿಖರವನ್ನು ನಾವು ಮುಟ್ಟುವುದೇ ತಡ ಒಂದು ಜೇನು ನನ್ನ ಬಲಕೆನ್ನೆಗೆ ಕುಟುಕಿತು. ಮತ್ತೆ ಇನ್ನೊಂದು..ಮತ್ತೊಂದು..! ಎಲ್ಲವೂ ಮುಖಕ್ಕೇ! ನಾನು ನನ್ನ ಪ್ಯಾಕ್‌ನಿಂದ ಮುಖದ ಬಲೆ ಕವಚವನ್ನು ಹೇಗೋ ತಡಕಾಡಿ ಹುಡುಕಿ ತೆಗೆಯುವಷ್ಟರಲ್ಲಿ ಐದು ಸಲ ಕುಟುಕಲ್ಪಟ್ಟಿದ್ದೆ. ನನ್ನ ಇಡೀ ತಲೆ ನೋವಿನಿಂದ ಸಿಡಿದಂತಾಗುತ್ತಿತ್ತು. ಯಾರೋ "ಓಡು" ಎಂದು ಕೂಗಿದರು. ನಾನು ಗೊತ್ತು ಗುರಿಯಿಲ್ಲದೆ ಅತಿ ವೇಗವಾಗಿ ಓಡ ತೊಡಗಿದೆ. ಸುಮಾರು ಒಂದು ನಿಮಿಷದ ಓಟದ ನಂತರ ನಾನು ಜೇನುಗಳಿಂದ ಪಾರಾದಾಗ ಆಗಲೇ ೨೨ ಸಲ ಚುಚ್ಚಿಸಿ ಕೊಂಡಾಗಿತ್ತು.(ಈ ಮೂರು ವಾರಗಳ ಅಭಿಯಾನದಲ್ಲಿ ಒಟ್ಟು ೬೭ ಸಲ ಕುಟುಕಿಸಿ ಕೊಂಡ ಹೆಗ್ಗಳಿಕೆ ನನ್ನದು!) ನನ್ನ ಜೀವನದಲ್ಲಿ ಅತಿ ಭಯಂಕರ ವಾದ ಕ್ಷಣಗಳವು. ಆ ಸಂದರ್ಭದಲ್ಲಿ ನನ್ನ ಬದಲಿಗೆ ಯಾರಾದರೂ ತುಸುವೇ 'ಅಲರ್ಜಿಕ್' ಆಗಿದ್ದರೂ ಸತ್ತೇ ಹೋಗುತ್ತಿದ್ದರು.ನನಗೆ 'ಅಲರ್ಜಿ'ಯ ತೊಂದರೆ ಯಿಲ್ಲದ ಕಾರಣ ಒಂದೆರಡು ದಿನಗಳಲ್ಲಿ ಚೇತರಿಸಿಕೊಂಡೆ. ಅಷ್ಟು ಹೊತ್ತಿಗೆ ಈ ಘಟನೆಯನ್ನೂ ಮೀರಿಸುವಂತಹ ಇನ್ನೊಂದು ಮುಖಾಮುಖಿ ನನಗಾಗಿ ಕಾದಿತ್ತು.

ಒಮ್ಮೆ ನನ್ನ 'ಕಯಕ್'ನಲ್ಲಿ ನಾನೊಬ್ಬನೇ ಇದ್ದಾಗ ತೀರದಲ್ಲಿ ಹೊಸ ತರದ ಬಂಡೆಗಳ ಸಾಲನ್ನು ಕಂಡೆ. ಆದರೆ ಆ ಬಂಡೆಗಳು ಬಹುಬೇಗನೆ ಹಿಪ್ಪೊಗಳಾಗಿ ರೂಪಾಂತರ ಹೊಂದಿದಾಗ ಭಯದಿಂದ ನಾನು ಮರಗಟ್ಟಿ ಹೋದೆ. ಬರೀ ೧೫ ಮೀಟರ್‌ಗಳ ಅಂತರದಲ್ಲಿ ಎರಡು ದೊಡ್ಡ, ಎರಡು ಚಿಕ್ಕ ಹಿಪ್ಪೊಗಳು! ಅವು ನನ್ನನ್ನು ಅಷ್ಟಾಗಿ ಗಮನಿಸದೆ ಮುಂದೆ ಹೋಗಬಹುದೆಂಬ ನಿರೀಕ್ಷೆಯಿಂದ ನಾನು ಉಸಿರು ಬಿಗಿ ಹಿಡಿದು, ಚೂರೂ ಅಲುಗಾಡದೆ ಕಯಕ್‌ನ ಬದಿಗೆ ಒರಗಿದೆ. ಸ್ವಭಾವತಃ ಶಾಂತಿಪ್ರಿಯ ಮೃಗಗಳು ಎಂದು ಹೆಸರಾಗಿರುವ ಇವುಗಳ ಗುಣ ಸ್ವಭಾವಗಳನ್ನು ನೆನಪಿಸಿಕೊಳ್ಳಲು ನಾನು ಪ್ರಯತ್ನಿಸುವಷ್ಟರಲ್ಲೇ ಅವು ನಾನಿರುವ ದಿಕ್ಕಿನತ್ತ ಚಲಿಸ ತೊಡಗಿದುವು. ನಮ್ಮ ನಡುವಿನ ಅಂತರ ಕಡಿಮೆಯಾಗುತ್ತಿತ್ತು; ೧೨ ಮೀಟರ್, ಮತ್ತೆ ೯ ಮೀಟರ್...! ಈ ಹಂತದಲ್ಲಿ ಆಯಾಚಿತವಾಗಿ ತನ್ನ ತಲೆಯನ್ನು ತಿರುಗಿಸಿದ ಅತಿ ದೊಡ್ಡ ಹಿಪ್ಪೊ ನನ್ನನ್ನು ನೋಡಿ ಬಿಟ್ಟಿತು. ಒಂದು ಕ್ಷಣ ನಮ್ಮ ಕಣ್ಣುಗಳು ಸಂಧಿಸಿದುವು.

ಈ ಹಿಪ್ಪೊಪಟಮಸ್‌ಗಳ ವಿಚಾರ ಬಂದಾಗೆಲ್ಲ ನನ್ನ ಮನದಲ್ಲಿ ಸುಳಿಯುವ ಹೆಸರುಗಳೆಂದರೆ ಜಾರ್ಜ್ ಮತ್ತು ಮಾರ್ಥಾ. ಇವು ಮಕ್ಕಳ ಪುಸ್ತಕಗಳ ಪ್ರಾಣಿಕಥಾ ಮಾಲಿಕೆಯಲ್ಲಿ ಬರುವ ಸಾತ್ವಿಕ ಸ್ವಭಾವದ ಹಿಪ್ಪೋ ಪಾತ್ರಗಳು!

ಆದರೆ ನಿಜ ಸಂಗತಿ ಬೇರೆಯೇ! ವನ್ಯ ಮೃಗಗಳಲ್ಲೇ ಅತ್ಯಂತ ನೀಚ ಬುದ್ಧಿಯ ಪ್ರಾಣಿ ಎಂದರೆ ಹಿಪ್ಪೊ! ಪಾಪ, ಸಸ್ಯಾಹಾರಿ ತಾನೇ, ಏನೂ ಅಪಾಯವಿಲ್ಲ, 'ನಿರುಪದ್ರವಿ' ಎಂದುಕೊಂಡರೆ ಮೋಸ ಹೋದಂತೆಯೇ ಸರಿ. ನಾಲ್ಕು ಟನ್‌ಗಳಷ್ಟು ತೂಕವಿರುವ ಒಂದು ಗಂಡು ಹಿಪ್ಪೊ, ಸುಮಾರು ನಾಲ್ಕುವರೆ ಮೀಟರ್ ಉದ್ದದ ಮೊಸಳೆಯನ್ನು ಸಹ ಕಚ್ಚಿ ಸಿಗಿದು ಹಾಕಬಲ್ಲದು. ಅಷ್ಟು ಶಕ್ತಿಶಾಲಿ! ಇನ್ನು ನಾವೇನಾದರೂ ಸಿಕ್ಕಿ ಬಿದ್ದರೆ, ಅವು ಕಚ್ಚುವುದಂತಿರಲಿ, ಅಯ್ಯೋ, ನಾರು ನಾರಾಗಿ ಸೀಳಿ ಹಾಕ ಬಲ್ಲದು!

ಹಾಂ, ಇದೀಗ ನನ್ನ ಮತ್ತು ಹಿಪ್ಪೊಗಳ ಮಧ್ಯೆ ದೃಷ್ಟಿಮಿಲನ ಸುಮಾರು ಮೂರು

ಸೆಕಂಡುಗಳ ಕಾಲ ಮುಂದುವರಿದಿರಬಹುದು. ಈ ಅವಧಿಯಲ್ಲಿ ಅವು ಬಹುಶಃ ನನ್ನನ್ನು ಶತ್ರು ಎಂದು ತೀರ್ಮಾನಿಸಿರಬೇಕು. ಆ ದೊಡ್ಡ ಹಿಪ್ಪೊ ತಾರ ಸ್ಥಾಯಿಯಲ್ಲಿ 'ಫಾಗ್ ಹಾರ್ನ್'ನಂಥ ಭಯಂಕರ ಶಬ್ದವನ್ನು ಹೊರಡಿಸುತ್ತಿದ್ದಂತೆಯೇ, ನಾಲ್ಕು ಭೀಕರಾಕೃತಿಗಳು ನೀರನ್ನು ಸೀಳಿಕೊಂಡು ನನ್ನ ದೋಣಿಯತ್ತ ಮುನ್ನುಗ್ಗಿದ್ದುವು.

ನನ್ನ ಬೆನ್ನ ಹುರಿಯಿಂದ ತಲೆಯುವರೆಗೆ ಮಿಂಚಿನ ಪ್ರವಾಹ! ಇದು ಜೀವ ಭಯ! ನನಗರಿವಿಲ್ಲದಂತೆಯೇ ಅತಿ ವೇಗವಾಗಿ ಹುಟ್ಟುಹಾಕುತ್ತಾ ಕ್ಷಣಾರ್ಧದಲ್ಲೇ ನದಿಯ ಮಧ್ಯ ಭಾಗಕ್ಕೆ ಬಂದು ಬಿಟ್ಟೆ. ಏದುಸಿರು ಬಿಡುತ್ತ ತಲೆಯೆತ್ತಿ ನೋಡಿದಾಗ ನಾಲ್ಕು ಹಿಪ್ಪೊಗಳ ತಲೆಗಳು ತೀರದ ಬದಿಯಲ್ಲೇ ಕಾಣುತ್ತಿರಲು 'ಬದುಕಿದೆಯಾ ಬಡಜೀವವೇ' ಎಂದು ಎದೆಯೊತ್ತಿಕೊಂಡೆ.

* * *

ನಮ್ಮ ಪ್ರವಾಸದ ಕೊನೆಯ ದಿನಗಳಲ್ಲಿ ನಮ್ಮಲ್ಲಿ ಐದು ಜನರಿಗೆ ಮಲೇರಿಯಾ ರೋಗ ಅಂಟಿಕೊಂಡಿತು. ಸ್ವತಃ ಬ್ರೂಸ್'ರೇ ಹಾಸಿಗೆ ಹಿಡಿದರು. ೩೭ ಡಿಗ್ರಿಯ ಬಿಸಿ ಹವೆಯಲ್ಲಿ, ಕಂಬಳಿ ಹೊದ್ದುಕೊಂಡರೂ ನಡುಗುತ್ತಿದ್ದ ಅವರು ಜ್ವರದ ತಾಪದಿಂದ ಕನವರಿಸುತ್ತಿದ್ದರು. ಆದರೆ ಹೆದರುವ ಅಗತ್ಯವಿರಲಿಲ್ಲ. ಬ್ರೂಸ್'ರು ಈ ಹಿಂದೆಯೂ ಮಲೇರಿಯಾ ಜ್ವರವನ್ನು ಅನುಭವಿಸಿದ್ದರಾಗಿ ಆ ರೋಗ ಅವರಿಗೆ ಒಗ್ಗಿ ಹೋಗಿತ್ತು; ಅಥವಾ ಅವರು ರೋಗಕ್ಕೆ ಒಗ್ಗಿ ಹೋಗಿದ್ದರು! ''ಮಲೇರಿಯಾ ಜ್ವರದಲ್ಲಿ ಒಂದು ಒಳ್ಳೆ ಅಂಶವಿದೆ. ಅದೇನೆಂದರೆ ಒಮ್ಮೆ ರೋಗಮುಕ್ತನಾದಾಗ ಎಲ್ಲಿಲ್ಲದ ಒಮ್ಮೆ ಆರಾಮವೆನಿಸುತ್ತದೆ'' ಎಂದು ಬ್ರೂಸ್'ರು ವಿನೋದವಾಗಿ ಹೇಳಿದಾಗ ಅವರು ಪೂರ್ಣ ಪ್ರಜ್ಞೆಯಲ್ಲಿದ್ದರೋ, ಅರ್ಧ ಪ್ರಜ್ಞಾವಸ್ಥೆಯಲ್ಲಿದ್ದರೋ ಗೊತ್ತಾಗಲಿಲ್ಲ!

* * *

ನಾವು ಊಹಿಸಿದಂತೆಯೇ ನಮ್ಮ ಯಾತ್ರೆ ಸುಸೂತ್ರವಾಗಿ ಮುಕ್ತಾಯಗೊಂಡಿತು. ನಮ್ಮ ಇಷ್ಟುದ್ದ ಪ್ರಯಾಣದ ಕಾಲದಲ್ಲಿ ನಾವು ಒಂದೇ ಒಂದು ಪ್ರಾಣಿ ಹಂತಕನನ್ನೂ ನೋಡಿರಲಿಲ್ಲ ವೆನ್ನುವುದು ವಿಶೇಷ. ಹಂತಕರಂತಿರಲಿ, ಸಾದಾ ಮನುಷ್ಯರೂ ನಮ್ಮ ಕಣ್ಣಿಗೆ ಬಿದ್ದಿರಲಿಲ್ಲ. ಮುಂದೆ ನಮ್ಮ ದೋಣಿಗಳು, ಸುಮಾರು ಹತ್ತೈವತ್ತು ಮಣ್ಣಿನ ಗುಡಿಸಲುಗಳನ್ನೊಳಗೊಂಡ 'ರಾಫಾಯ್' ಎಂಬ ಹಳ್ಳಿಯನ್ನು ಹಾದು ಹೋಗುತ್ತಿರುವಾಗ ಒಬ್ಬ ಪ್ರೌಢ ವ್ಯಕ್ತಿಯನ್ನು - ಪ್ರಥಮ ವ್ಯಕ್ತಿಯನ್ನು - ಕಂಡೆವು. ತಲೆಯನ್ನೂ ಮುಚ್ಚುವಂಥ ಉದ್ದದ ನಿಲುವಂಗಿಯನ್ನು ತೊಟ್ಟಿದ್ದ ಆ ಮನುಷ್ಯನ ನೋಟದಲ್ಲಿ ಏನೋ ಕಾಣದ್ದನ್ನು ಕಂಡಂಥ ಆಶ್ಚರ್ಯವಿತ್ತು. ''೧೯೬೪ರ ಅನಂತರ, ಕೆಲವು ಮತಪ್ರಚಾರಕರನ್ನು ಹೊರತು ಪಡಿಸಿದರೆ, ಇಲ್ಲಿಯವರೆಗೆ ಪ್ರಯಾಣ ಬೆಳೆಸಿರುವ ಪ್ರಥಮ ಬಿಳಿಯರು ನೀವೇ!'' ಎಂದು ಅವನು ಉದ್ಗರಿಸಿದ. 'ರಾಫಾಯ್' ಮತ್ತು ಅದರಂಥ ಹಲವಾರು ಗ್ರಾಮಗಳು ಕಳ್ಳಬೇಟೆಗಾರರ ಬೆದರಿಕೆಗೆ ಮತ್ತು ದಬ್ಬಾಳಿಕೆಗೆ ಒಳಪಟ್ಟಿದ್ದವು. ಆ ಘೋರ ಹಂತಕರಿಗೆ ಅಂತ್ಯ ಕಾಣಿಸುವುದೇ ನಮ್ಮ ಪಯಣದ ಮುಖ್ಯ ಉದ್ದೇಶವೆಂದು ತಿಳಿದಾಗ ಇಡೀ ಹಳ್ಳಿಯಲ್ಲಿ ಸಂತಸದ ಅಲೆ ಎದ್ದಿತು. ಇದ್ದಕ್ಕಿದ್ದಂತೆ ಅಲ್ಲಿ ಉತ್ಸವದಂಥ ವಾತಾವರಣ ಉಂಟಾಗಿರಲು ನಮಗೆ ಭರ್ಜರಿಯಾಗಿ ಆದರಾತಿಥ್ಯ ನಡೆಯಿತು. ಪಪಾಯಿ ಮತ್ತು ದ್ರಾಕ್ಷಿ ಹಣ್ಣುಗಳ ರಾಶಿ ಮಾಡಿದರು. ಇನ್ನೊಂದೆಡೆ ಮಾಂಸದ ರುಚಿಕಟ್ಟಾದ ಅಡುಗೆ ತಯಾರಾಯಿತು. ಟಾಪಿಯೋಕಾ ಗೆಣಸಿನ ಹಿಟ್ಟು ಮತ್ತು ಧಾನ್ಯಗಳೊಂದಿಗೆ ಜೇನುತುಪ್ಪವನ್ನು ಬೆರೆಸಿ

ತಯಾರಿಸಲಾಗುವ 'ದಗ್‌ಬಾಕಾ'' ಎಂಬ ತಿನಿಸನ್ನು ನಮಗೆ ಮೊದಲು ನೀಡಿದರು.

ಪಪಾಯ ಮರದ ಕಟ್ಟಿಗೆಗಳನ್ನು ಜೋಡಿಸಿದ 'ಜೈಲೋಫೋನ್' ವಾದ್ಯ ಮತ್ತು ಮದ್ದಳೆಗಳು ಹೊರ ಬರಲು ಅಲ್ಲಿಯ ಸಂಗೀತಗಾರರು ಸಂಮೋಹಕವಾದ ತಾಳದಲ್ಲಿ ಬಡಿಯತೊಡಗಿದರು. ಬಾನಲ್ಲಿ ಹುಣ್ಣಿಮೆಯ ಚಂದ್ರ ಮೇಲೇರುತ್ತಿದ್ದಂತೆ ನಾವೆಲ್ಲಾ ನರ್ತಿಸಲು ತೊಡಗಿದೆವು. ನನ್ನ ತಲೆಯೊಳಗೆ ಈ ವಾದ್ಯವೃಂದದ ಪ್ರಭಾವ ಎಷ್ಟರಮಟ್ಟಿಗೆ ತುಂಬಿತ್ತೆಂದರೆ, ತಿಂಗಳ ಬೆಳಕಿನ ಈ ರಾತ್ರಿಯಲ್ಲಿ, ನಾನು ನರ್ತಿಸುತ್ತಿರುವ ಈ ಜಾಗ ಮತ್ತು ಈ ಪರಿಸರದಂತಹ ಶ್ರೇಷ್ಠವಾದ ಪ್ರದೇಶ ವಿಶ್ವದ ಯಾವ ಮೂಲೆಯಲ್ಲೂ ಖಂಡತವಾಗಿಯೂ ಇರಲಿಕ್ಕಿಲ್ಲ ಎಂದು ಆಗ ನನಗೆ ಖಚಿತವಾಗಿ ಅನಿಸಿದ್ದು ಸತ್ಯ!

• • •

ಮರುದಿನ ಬೆಳಿಗ್ಗೆ ವಿಮಾನದಲ್ಲಿ ನಾವು 'ಬಾಂಗುಯ್' ಪಟ್ಟಣದಲ್ಲಿ ಬಂದಿಳಿದೆವು. ಸರಕಾರಿ ಅಧಿಕಾರಿಗಳನ್ನು , ಮಂತ್ರಿಗಳನ್ನು ಭೇಟಿ ಮಾಡಿ ನಮ್ಮ ಸಂಶೋಧನೆಗಳನ್ನು ಅವರ ಮುಂದಿರಿಸಿದೆವು.''ಚಿಂಕೋ ಪ್ರಾಂತಕ್ಕೆ ಈಗಲೂ ಹೊಸ ಚೈತನ್ಯ ನೀಡುವುದು ಸಾಧ್ಯ. ಸಾಕಷ್ಟು ವನ್ಯಪ್ರಾಣಿಗಳು ಇನ್ನೂ ಉಳಿದಿವೆಯಾದ ಕಾರಣ-ಆದಷ್ಟು ಬೇಗ ಚೋರ ಹಂತಕರ ನಿರ್ಮೂಲಕ್ಕೆ ಕ್ರಮಗಳನ್ನು ಕೈಗೊಂಡರೆ- ಐದಾರು ವರ್ಷಗಳೊಳಗೆ ಇಲ್ಲಿಯ ಪ್ರಾಣಿಗಳ ಸಂಖ್ಯೆಯನ್ನು ಗಣನೀಯವಾಗಿ ವೃದ್ಧಿಪಡಿಸುವುದು ಅಸಾಧ್ಯವಲ್ಲ. ಸೈನಿಕರ ಕೆಲವು ತುಕಡಿಗಳು, ಆಕಾಶ ಮಾರ್ಗವಾಗಿ ಆಗಾಗ ಪಹರೆ ನಡೆಸಲು ಒಂದು ವಿಮಾನ. ಇಷ್ಟರಲ್ಲಿ ಹೆಚ್ಚು ಖರ್ಚೇನೂ ಮಾಡದೆಯೇ ಪ್ರಾಣಿಗಳ ಬೇಟೆಯನ್ನು ತಡೆಗಟ್ಟಬಹುದು. ಇದರಿಂದ ಭವಿಷ್ಯದಲ್ಲಿ ಚಿಂಕೋ ಪ್ರಾಂತವು ಇಡೀ ವಿಶ್ವದಲ್ಲೇ ಅತ್ಯಂತ ಸಮೃದ್ಧವಾದ ವನಸಿರಿಯನ್ನೂ, ಪ್ರಾಣಿ ಸಂಪತ್ತನ್ನೂ ಹೊಂದಿರುವ ಪ್ರದೇಶವಾಗಿ ಬೆಳಗಲಿದೆ!''

ಡಾ. ಬ್ರೂಸ್‌ರ ವರದಿ ಮತ್ತು ಅವರ ಉಪಾಯಗಳನ್ನು ಕೇಳಿ ಸಂತೋಷದಿಂದ ತಲೆದೂಗಿದ ಮಂತ್ರಿಗಳು, ಅದಕ್ಕೆ ತಮ್ಮ ಸಹಾಯಹಸ್ತವನ್ನು ನೀಡುವ ಇಚ್ಛೆಯನ್ನೂ ವ್ಯಕ್ತಪಡಿಸಿದರೇನೋ, ಹೌದು: ಆದರೆ ಮಧ್ಯ ಆಫ್ರಿಕ ಗಣರಾಜ್ಯದ ರಾಜಕೀಯ ಅಸ್ಥಿರತೆಯಂತೂ ಸರ್ವವಿಧಿತ. ನಾವು ಅಲ್ಲಿಂದ ಮರಳಿದ ಒಂದು ವಾರದೊಳಗೆ ಕೆಲವಾರು ಮಂತ್ರಿಗಳ ವರ್ಗಾವಣೆ ನಡೆದು ಹೋಗಿತ್ತು! ಹೊಸಬರ ನೇಮಕವಾಗಿತ್ತು!

ಬ್ರೂಸ್'ರು ಹಾಗೆಲ್ಲಾ ಎದೆಗುಂದುವ ಜಾಯಮಾನದವರಲ್ಲ. ಇನ್ನೊಂದು ಕಾರ್ಯಕ್ರಮವನ್ನು ರೂಪಿಸುತ್ತಿರುವ ಡಾ. ಬ್ರೂಸ್, ಪ್ರಾಣಿ ಹಂತಕರನ್ನು ನೇರವಾಗಿಯೇ ಸಂಧಿಸಿ, ಸಾಧ್ಯವಾದರೆ ಅವರೊಂದಿಗೆ ಒಂದು ಒಪ್ಪಂದವನ್ನು ಮಾಡಿಕೊಳ್ಳಲು, ಮುಂದಿನ ವರ್ಷ- ಅದೂ ಬೇಟೆಯ ಋತುವಿನಲ್ಲಿ ಮತ್ತೊಮ್ಮೆ ಪ್ರಯಾಣ ಬೆಳೆಸುವ ನಿರ್ಧಾರ ಕೈಗೊಂಡಿದ್ದಾರೆ. ನಾವು ಈಗಷ್ಟೇ ಮುಗಿಸಿರುವ ಜಲಪ್ರವಾಸವನ್ನೂ ಮೀರಿಸುವಂತಹ, ಹುಚ್ಚು ಧೈರ್ಯದ-ಸ್ವಲ್ಪ-ಮಟ್ಟಿಗೆ ಆಕರ್ಷಕವಾದ-ಈ ರೀತಿಯ ಯೋಜನೆಯನ್ನು ಮುಂದಿಡಲು ಡಾ. ಬ್ರೂಸ್'ರಿಂದ ಮಾತ್ರ ಸಾಧ್ಯ!

ಈ ಸಲವೂ ತನ್ನೊಂದಿಗೆ ಜತೆಗೂಡಲು ಸಾಧ್ಯವೇ ಎಂದು ಅವರು ನನ್ನನ್ನು ಆಹ್ವಾನಿಸಿದಾಗ ನಾನು ಸ್ವಲ್ಪವೂ ಹಿಂಜರಿಯಲಿಲ್ಲ. ಕೂಡಲೆ ಅವರಿಗೆ ತಿಳಿಸಿಬಿಟ್ಟೆ, ''ನಾನು ತಯಾರಿದ್ದೇನೆ''!

ನನ್ನಮ್ಮನ ಪತ್ರಗಳು

ಟಿ.ಎಸ್.ಲಲಿತ
೭೦೨, ೧ನೇ ಮಹಡಿ, ೧೭ನೇ
ಮುಖ್ಯರಸ್ತೆ, ಸರಸ್ವತಿಪುರಂ,
ಮೈಸೂರು-೫೭೦೦೦೯

ನಾನಿಂದಿಗೂ ನನ್ನಮ್ಮನ ಪತ್ರ ಲೇಖನವನ್ನು ನೆನಪಿನಲ್ಲಿಟ್ಟಿದ್ದೇನೆ. ಅದು ೧೯೪೧ರ ಚಳಿಗಾಲದಲ್ಲಿ ಪ್ರಾರಂಭವಾಯ್ತು. ಕಳೆದ ಬೇಸಗೆಯಲ್ಲಿ ಯುದ್ಧಕ್ಕೆ ಸೇರಿ ಪರ್ಲ್‌ಹಾರ್ಬರ್‌ನ ಘಟನೆಯ ಬಳಿಕ ಅವನ ಬಗ್ಗೆ ಕೇಳಿಯೇ ಇರದ ನನ್ನ ಸೋದರ ಜಾನಿಗೆ ಪ್ರತಿ ರಾತ್ರಿ ಅಡುಗೆ ಮನೆಯ ದೊಡ್ಡ ಮೇಜಿನ ಬಳಿ ಕುಳಿತು ಕಾಗದ ಬರೆಯುತ್ತಿದ್ದಳು.

ಜಾನಿ ಉತ್ತರಿಸದೇ ಇದ್ದರೂ, ಅಮ್ಮ ಅವನಿಗೇಕೆ ಕಾಗದ ಬರೆಯುತ್ತಲೇ ಇದ್ದಳೆಂದು ನನಗರ್ಥ ಮಾಡಿಕೊಳ್ಳಲೇ ಆಗುತ್ತಿರಲಿಲ್ಲ. ''ಅವನಿಂದ ಕಾಗದ ಬಂದೇ ಬರತ್ತೆ. ನೀನೇ ನೋಡ್ತೀಯ'' ಅವಳು ಒತ್ತಿ ಹೇಳುತ್ತಿದ್ದಳು. ದೇವರು ಕೊಟ್ಟಂತೆ ಮೆದುಳಿಗೂ ಬರೆದ ಶಬ್ದಕ್ಕೂ ಬೆಳಕಿನಷ್ಟು ಶಕ್ತಿಶಾಲಿಯಾದ ಸಂಬಂಧವಿದೆ,''. ಎನ್ನುತ್ತಿದ್ದಳು. ಆ ಬೆಳಕಿನಲ್ಲಿ ಜಾನಿಯನ್ನು ಹುಡುಕುವ ಪ್ರಯತ್ನ ಅವಳದು.

ತನ್ನಷ್ಟಕ್ಕೆ ತನಗೆ ಅಪ್ಪನಿಗೆ ಹಾಗೂ ನಮ್ಮೆಲ್ಲರಲ್ಲೂ ಭರವಸೆ ತುಂಬಲು ಹೀಗೆ ಹೇಳುತ್ತಿದ್ದಳೋ ಏನೋ ನನಗೆ ಗೊತ್ತಿಲ್ಲ. ನಮ್ಮೆಲ್ಲರನ್ನೂ ಬಂಧಿಸಿಡಲು ಅದು ಸಹಾಯ ಮಾಡಿತೇನೋ ಅದೂ ನನಗೆ ಗೊತ್ತಿಲ್ಲ. ಅಂತೂ ಒಂದು ದಿನ ಪತ್ರವೊಂದು ಬಂತು. ದಕ್ಷಿಣ ಪ್ಯಾಸಿಫಿಕ್‌ನಲ್ಲಿ ಜಾನಿ ಜೀವಂತನಾಗಿದ್ದ.

ಅಮ್ಮ, ಅವಳ ಪತ್ರಗಳಿಗೆ ಸಿಸಿಲಿಯಾ ಕಪುಜಿ ಎಂದು ಸಹಿ ಹಾಕುತ್ತಿದ್ದುದು ನನಗೆ ತಮಾಷೆ ಎನಿಸುತ್ತಿತ್ತು. ಬರಿ ''ಅಮ್ಮ'' ಎಂದಷ್ಟೇ ಬರೆಯುವುದಿಲ್ಲವೇಕೆ? ಎಂದು ನಾನವಳನ್ನು ಕೀಟಲೆ ಮಾಡುತ್ತಿದ್ದೆ. ''ಅಮ್ಮ'' ಎಂದಲ್ಲದೆ ಅವಳು ಯಾವಾಗಲೂ ತನ್ನನ್ನು ಸಿಸಿಲಿಯಾ ಕಪುಜಿ ಎಂದು ಕರೆದುಕೊಳ್ಳುತ್ತಿದ್ದುದು ನನಗೆ ತಿಳಿದಿರಲಿಲ್ಲ. ಹಿಮ್ಮಡಿಯ ಬೂಟಿನಲ್ಲಿ ಕೇವಲ ೧೫೦ ಸೆಂಟಿಮೀಟರ್ ಎತ್ತರವಿದ್ದ ಅವಳನ್ನು ನಾನು ಹೊಸ ಬೆಳಕಿನಲ್ಲಿ ನೋಡತೊಡಗಿದೆ.

ಅಲಂಕಾರ ರಹಿತಳಾದ ಅಮ್ಮ, ಮದುವೆಯ ಪಟ್ಟಿಯೊಂದನ್ನು ಬಿಟ್ಟು ಬೇರಾವ ಒಡವೆ ತೊಡುತ್ತಿರಲಿಲ್ಲ. ಕತ್ತರಿಸದೆ ನೀಳವಾಗಿ, ಕಪ್ಪಾದ ಅವಳ ಕೂದಲು ಅಂದವಾಗಿದ್ದು, ಅದನ್ನು ಗಂಟು ಹಾಕಿಕೊಳ್ಳುತ್ತಿದ್ದಳು. ಮೂಗಿನ ಮೇಲೆ ಬೆಳ್ಳಿಯ ಕಟ್ಟಿನ ಕನ್ನಡಕ.

ಅಮ್ಮ ಕಾಗದ ಬರೆದು ಪೂರೈಸಿದ ಬಳಿಕ ಅದನ್ನು ಅಂಚೆಗೆ ಹಾಕಲು ಅಪ್ಪನ ಕೈಗೆ ಕೊಡುವಳು. ಮತ್ತೆ ಕಾಫಿ ತಯಾರಿಕೆ. ನಾವೆಲ್ಲ ಅಪ್ಪ, ಅಮ್ಮ , ಎಂಟು ಮಕ್ಕಳು, (ಐವರು ಹುಡುಗರು ಹಾಗೂ ಮೂವರು ಹುಡುಗಿಯರು ಇದ್ದ ಆ ಒಳ್ಳೆಯ ದಿನಗಳ ಬಗ್ಗೆ ಮಾತಾಡುತ್ತಾ ಕುಳಿತು ಕೊಳ್ಳುತ್ತಿದ್ದೆವು. ನನ್ನೊಬ್ಬನ ಹೊರತು ಉಳಿದವರೆಲ್ಲ ಕೆಲಸಕ್ಕೆ, ಯುದ್ಧಕ್ಕೆ ಅಥವಾ ಮದುವೆ ಮಾಡಿಕೊಳ್ಳಲೆಂದೋ ಹೋಗಿದ್ದಾರೆನ್ನುವುದು ನಂಬಲು ಸಾಧ್ಯವಿರಲಿಲ್ಲ!

ವಸಂತದ ವೇಳೆಗೆ ಅಮ್ಮ ತಾನು ಬರೆಯುವ ಪತ್ರದ ಪಟ್ಟಿಗೆ ಮತ್ತಿಬ್ಬರು ಮಕ್ಕಳನ್ನು ಸೇರಿಸಿದ್ದಳು. ಪ್ರತಿ ರಾತ್ರಿ ಮೂರು ಬೇರೆ,

ಮೂಲ: ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಅಕ್ವೇವಿಯಾ ಕಪುಜಿ ಲಾಕ್‌ರ ''ಮೈ ಮಮ್ಮಾಸ್ ಲೆಟರ್ಸ್'' ಎಂಬ ಲೇಖನದ ಭಾವಾನುವಾದ

ಬೇರೆ ಪತ್ರಗಳನ್ನು ಬರೆದು, ನಮ್ಮ ಶುಭಾಶಯಗಳನ್ನು ಸೇರಿಸಲು ನನಗೂ, ಅಪ್ಪನಿಗೂ ಕೊಡುತ್ತಿದ್ದಳು.

ಮೆಲ್ಲ, ಮೆಲ್ಲಗೆ ಅಮ್ಮ ಪತ್ರ ಬರೆಯುವ ಸುದ್ದಿ ಹಬ್ಬಿತು. ಒಂದು ಬೆಳಗು ಬೂದು ಬಣ್ಣದ ಕೂದಲ ಹೆಂಗಸೊಬ್ಬಳು ನಮ್ಮ ಮನೆಯ ಬಾಗಿಲು ತಟ್ಟಿದಳು.

''ನೀನು ಕಾಗದಗಳನ್ನು ಬರೆಯುತ್ತೀಯಂತೆ, ನಿಜವೇನು?'' ಎಂದು ಕೇಳಿದ ಅವಳ ಧ್ವನಿ ನಡುಗುತ್ತಿತ್ತು.

'ನನ್ನ ಮಕ್ಕಳಿಗೆ ಬರೆಯುತ್ತೇನೆ'

''ನಿನಗೆ ಕಾಗದಗಳನ್ನು ಓದಲೂ ಬರುತ್ತದೇನು?'' ಹೆಂಗಸು ಪಿಸುಗುಟ್ಟಿದಳು.

''ಹಾ, ಹಾ''

ಹೆಂಗಸು ತನ್ನ ಚೀಲ ಬಿಚ್ಚಿ ಕಾಗದಗಳ ಕಟ್ಟೊಂದನ್ನು ಹೊರತೆಗೆದಳು. ''ಓದು.... ಓದು ನನಗಾಗಿ, ದಯವಿಟ್ಟು''.

ಅಮ್ಮನಿಗೆ ನೆನಪಿದ್ದಂತೆ ಆ ಕೆಂಗೂದಲ ಹುಡುಗ ನನ್ನ ಸೋದರರೊಂದಿಗೆ ನಮ್ಮ ಮನೆಯ ಮುಂದಿನ ಮೆಟ್ಟಿಲುಗಳ ಮೇಲೆ ಕುಳಿತಿರುತ್ತಿದ್ದ. ಈಗ ಯೂರೋಪಿನಲ್ಲಿ ಯುದ್ಧ ಮಾಡುತ್ತಿದ್ದ, ಆ ಹೆಂಗಸಿನ ಮಗನದೇ ಕಾಗದಗಳವು.

ಇಂಗ್ಲೀಷಿನಿಂದ ಇಟಾಲಿಯನ್‌ಗೆ ಭಾಷಾಂತರಿಸಿ, ಅಮ್ಮ ಆ ಪತ್ರಗಳನ್ನು ಒಂದೊಂದಾಗಿ ಓದಿದಳು. ಆ ಹೆಂಗಸಿನ ತೇವಗೊಂಡ ಕಣ್ಣುಗಳು ಹೊಳೆದುವು. ''ನಾನೀಗ ಉತ್ತರಿಸಲೇಬೇಕು'' ಅವಳೆಂದಳು. ''ಆದರೆ ಯಾವ ಪದಗಳನ್ನು ಪಯೋಗಿಸಲಿ?''

ಅಮ್ಮ ಅವಳನ್ನು ಅಡುಗೆಯ ಮನೆಯ ಮೇಜಿನ ಬಳಿ ಕರೆದೊಯ್ಯುತ್ತ ''ಸ್ವಲ್ಪ ಕಾಫಿ ತಯಾರಿಸು ಟ್ಯಾವಿ'' ಎಂದಳು. ಪತ್ರ, ಲೇಖಣಿ ತೆಗೆದು ಬರೆಯಲು ಪ್ರಾರಂಭಿಸಿದಳು. ಮುಗಿಸಿದ ನಂತರ ಆ ಹೆಂಗಸಿಗೆ ಓದಿ ಹೇಳಿದಳು.

''ನಾನು ಆ ವಿಷಯವನ್ನೇ ಹೇಳಬೇಕೆಂದಿದ್ದೆನೆಂದು ನಿನಗೆ ಹೇಗೆ ತಿಳಿಯಿತು?

''ನಾನು ಕೆಲವೊಮ್ಮೆ ನನ್ನ ಮಕ್ಕಳಿಗೆ ಬರೆದ ಕಾಗದವನ್ನು ದಿಟ್ಟಿಸುತ್ತೇನೆ. ಏನು ಬರೆಯಬೇಕೆಂದೂ ಯೋಚಿಸುತ್ತಿರುತ್ತೇನೆ''.

ಶೀಘ್ರವೇ ಆ ಹೆಂಗಸು ತನ್ನೊಬ್ಬ ಸ್ನೇಹಿತಳೊಂದಿಗೆ ಹಿಂತಿರುಗಿದಳು. ಇನ್ನೊಬ್ಬಳು ಮತ್ತೊಬ್ಬಳು - ಎಲ್ಲರ ಮಕ್ಕಳೂ ಯುದ್ಧದಲ್ಲಿದ್ದವರು - ಎಲ್ಲರಿಗೂ ಪತ್ರದ ಆವಶ್ಯಕತೆ ಇತ್ತು. ಅಮ್ಮ ನೆರೆಯ ಪತ್ರ ಬರಹಗಾರ್ತಿಯಾಗಿದ್ದಳು. ಕೆಲವೊಮ್ಮೆ ಇಡೀ ದಿನ ಪತ್ರ ಬರೆಯುವುದರಲ್ಲಿ ತೊಡಗುವಳು.

ಕಾಗದಕ್ಕೆ ಸಹಿ ಮಾಡುವ ಬಗ್ಗೆ ಅಮ್ಮ ಹೆಚ್ಚಿನ ಪ್ರಾಮುಖ್ಯ ಕೊಡುತ್ತಿದ್ದಳು. ಬೂದು ಬಣ್ಣದ ಕೂದಲಿನ ಆ ಪುಟ್ಟ ಹೆಂಗಸು ಸಹಿ ಹಾಕುವುದನ್ನು ಕಲಿಸಿಕೊಡುವಂತೆ ಅಮ್ಮನಿಗೆ ಹೇಳಿದಳು. ''ನನ್ನ ಮಗ ನೋಡುವಂತೆ ನನ್ನ ಹೆಸರು ಬರೆಯಲು ನಾನು ಕಲಿಯಬೇಕಿದೆ''. ಅಮ್ಮ ತನ್ನ ಕೈಯ್ಯಲ್ಲಿ ಆ ಹೆಂಗಸಿನ ಕೈ ತೆಗೆದುಕೊಂಡು, ಮೇಲೆ ಕೆಳಗೆ ಪತ್ರದ ಸುತ್ತ, ಮತ್ತೆ ಮತ್ತೆ ಸುತ್ತಾಡಿಸಿ, ಅವಳು ಯಾರ ಸಹಾಯವಿಲ್ಲದೆ ಬರೆಯುವಷ್ಟು ಕಲಿಸಿದಳು. ಅದಾದ ನಂತರ ಅಮ್ಮ ಅವಳಿಗಾಗಿ ಪತ್ರವೊಂದನ್ನು ಬರೆದು ಕೊಟ್ಟಾಗೆಲ್ಲಾ ತನ್ನ ಸಹಿ ಮಾಡಿ ಮುಗುಳ್ನಗುವಳು.

ಒಂದು ದಿನ ಆಕೆ ನಮ್ಮ ಮನೆಗೆ ಬಂದಳು. ಅವಳತ್ತ ಒಮ್ಮೆ ದೃಷ್ಟಿಹಾಯಿಸಿದ ಅಮ್ಮ, ಏನು ನಡೆದಿದೆ ಎಂದು ಥಟ್ಟನೆ ಊಹಿಸಿದಳು. ಅವಳ ಕಣ್ಣುಗಳಲ್ಲಿದ್ದ ಭರವಸೆ

ಎಲ್ಲ ಮಾಯವಾಗಿತ್ತು. ಕೈಯಲ್ಲಿ ಕೈಹಾಕಿ ಒಂದಾಗಿ ಬೆಸೆದ ಹೃದಯದೊಂದಿಗೆ ಇಬ್ಬರೂ ಒಟ್ಟಾಗಿ ದೀರ್ಘಕಾಲ ಕುಳಿತಿದ್ದರು. ''ನಾವು ಚರ್ಚಿಗೆ ಹೋಗೋಣ ಬಾ. ಮಾನವರ ತಿಳುವಳಿಕೆಯ ಅಳವಿಗೆ ಮೀರಿದ ಕೆಲವು ವಿಷಯಗಳಿವೆ'' ಎಂದಳು ಅಮ್ಮ. ಮನೆಗೆ ಬಂದಾಗ ಕೆಂಗೂದಲ ಹುಡುಗನ ವಿಷಯವನ್ನು ಬಿಟ್ಟು ಅವಳು ಮತ್ತೇನನ್ನೂ ಯೋಚಿಸದಾದಳು.

ಯುದ್ಧಾನಂತರ ಅಮ್ಮ ಕಾಗದ, ಲೇಖಣಿಯನ್ನು ಬದಿಗಿಟ್ಟಳು. ಎಲ್ಲವೂ ಮುಗಿಯಿತೆಂದುಕೊಂಡಳು. ಆದರವಳ ಎಣಿಕೆ ತಪ್ಪಾಗಿತ್ತು. ತಮ್ಮ ಮಕ್ಕಳ ಪತ್ರಗಳೊಂದಿಗೆ ಅಮ್ಮನ ಬಳಿ ಬಂದಿದ್ದ ಆ ಹೆಂಗಸರು ಇಟಲಿಯಲ್ಲಿದ್ದ ತಮ್ಮ ನೆಂಟರ ಪತ್ರಗಳೊಂದಿಗೆ ಹಿಂತಿರುಗಿದ್ದರು. ಅಮೆರಿಕಾದ ಪ್ರಜೆಗಳಾಗಲು ಕೂಡ ಅವಳಿಂದ ಸಹಾಯ ಪಡೆಯಲು ಬಂದಿದ್ದರು.

ಒಮ್ಮೆ ''ಶಾನೊಂದು ಕಾದಂಬರಿ ಬರೆಯುವ ಬಗ್ಗೆ ಯಾವಾಗಲೂ ಕನಸು ಕಾಣುತ್ತಿದ್ದೆ.'' ಎಂದಳು ಅಮ್ಮ.

''ಮತ್ತೇಕೆ ಬರೆಯಲಿಲ್ಲ?'' ನಾನು ಕೇಳಿದೆ.

''ಪ್ರತಿಯೊಬ್ಬರಿಗೂ ಜೀವನದಲ್ಲೊಂದು ಉದ್ದೇಶವಿದೆ. ನನ್ನದು ಪತ್ರ ಬರೆಯುವುದೇ ಆಗಿರಬಹುದೇನೋ?'' ಎನ್ನುತ್ತಾ ಅದರ ಬಗ್ಗೆ ಅವಳ ಉತ್ಸಾಹವನ್ನು ವಿವರಿಸಲು ಪ್ರಯತ್ನಿಸಿದಳು.

''ಬೇರಾವುದರಂತಲ್ಲದೆ ಪತ್ರ ಮಾನವರನ್ನು ಒಟ್ಟುಗೂಡಿಸುತ್ತದೆ. ನಿನ್ನನ್ನದು ಅಳಿಸಬಹುದು ಇಲ್ಲವೇ ಸಂತೋಷದಿಂದ ಗಟ್ಟಿಯಾಗಿ ಕೇಕೆ ಹಾಕುವಂತೆ ಮಾಡಬಹುದು. ಪ್ರೇಮ ಪತ್ರಕ್ಕಿಂತ ಸೊಗಸಾದ ಪ್ರೀತಿಯ ಸ್ಪರ್ಶ ಮತ್ತೊಂದಿಲ್ಲ. ಕಾರಣ ಅದು ವಿಶ್ವವನ್ನು ಅತ್ಯಂತ ಕಿರಿದುಗೊಳಿಸುತ್ತದೆ. ಬರಹಗಾರ ಹಾಗೂ ಓದುಗರಿಬ್ಬರೇ ಅಲ್ಲಿನ ಅಧಿಪತಿಗಳೆನಿಸುತ್ತಾರೆ. ಹುಡುಗಿ ! ಒಂದು ಪತ್ರವೇ ಜೀವನ''!

ಈಗ ಅಮ್ಮನ ಪತ್ರಗಳೆಲ್ಲವೂ ಕಾಣದಾಗಿವೆ. ಆದರೂ ಅದನ್ನು ಪಡೆದುಕೊಂಡವರು ಇಂದಿಗೂ ತಮ್ಮ ಹೃದಯಕ್ಕೆ ಸಮೀಪವಾಗಿ, ಅದರ ಸವಿ ನೆನಪುಗಳನ್ನು ತಮ್ಮೊಂದಿಗುಳಿಸಿಕೊಂಡು, ಅವಳ ಬಗ್ಗೆ ಮಾತಾಡುತ್ತಾರೆ.

ಮೌನದಲ್ಲಿ ಮೂರು ಬಗೆ. ಮಾತಿನ ಮೌನ ಒಳ್ಳೆಯದು. ಕಾರಣ ಅಸಂಗತ ಮಾತುಗಳು ದುಷ್ಪರಿಣಾಮಕಾರಿ. ಆಶೆ ಆಕಾಂಕ್ಷೆಗಳ ಮೌನ ಇದಕ್ಕೂ ಒಳ್ಳೆಯದು. ಇಂಥ ಮೌನ ಆತ್ಮ ಶಾಂತಿ ತರುತ್ತದೆ. ಇದಕ್ಕೂ ಉತ್ತಮವಾದದ್ದು ಅನವಶ್ಯಕವಾದ ಹಾಗೂ ನೆಲೆಯಿಲ್ಲದಾಲೋಚನೆಗಳ ಮೌನ. ಈ ಮೌನ ಆಧ್ಯಾತ್ಮಿಕ ಸ್ಮರಣೆಗೆ ಅತ್ಯಗತ್ಯ.

-ಮೇಡಂ ಡೆಯನ್

ಜ್ವರ ಮತ್ತು ಜ್ವರದ ಸೆಳವು

ಡಾ. ಸಿ.ಎಸ್.ಕಮಲ
೧೪೯೮/೨೪ "ಶ್ರೀ ಹರಿಕೃಪ"
ರಾಮಯ್ಯರ್ ರಸ್ತೆ, ಕೃಷ್ಣಮೂರ್ತಿಪುರಂ
ಮೈಸೂರು-೫೭೦ ೦೦೪

ನಮ್ಮ ದೇಹದ ಸಹಜ ತಾಪ ೩೬.೫° ಸೆಂ.ನಿಂದ ೩೭.೫° ಸೆಂ.ವರೆಗೂ ಇರುತ್ತದೆ. ಇದನ್ನು ಈ ಸಹಜ ಸ್ಥಿತಿಯಲ್ಲಿ ಕಾಪಾಡಿಕೊಳ್ಳುವ ವ್ಯವಸ್ಥೆ ದೇಹದಲ್ಲಿದೆ. ಮನುಷ್ಯನಿಂದ ಮನುಷ್ಯನಿಗೆ, ಬೆಳಗ್ಗಿಗೂ ಮಧ್ಯಾಹ್ನಕ್ಕೂ ತಾಪದಲ್ಲಿ ಸ್ವಲ್ಪ ವ್ಯತ್ಯಾಸವಾಗುವುದುಂಟು. ಈ ಅಂತರಕ್ಕೂ ಮೀರಿದ ತಾಪವಿದ್ದರೆ ಅದಕ್ಕೆ 'ಜ್ವರ'ವೆನ್ನುವುದು. ಸೋಂಕು ಮತ್ತು ಇತರ ಖಾಯಿಲೆಗಳಲ್ಲಿ 'ಜ್ವರ' ಒಂದು ಚಿಹ್ನೆ. ಈ ಖಾಯಿಲೆಗಳು ಬಂದಾಗ ದೇಹದಲ್ಲಿ ಕೆಲವು ಜ್ವರಕಾರಕ ರಾಸಾಯನಿಕ ಪದಾರ್ಥಗಳ ಬಿಡುಗಡೆಯಿಂದ ತಾಪವನ್ನು ಕಾಪಾಡುವ ದೇಹದ ಮುಖ್ಯ ಭಾಗವಾದ 'ಹೈಪೋಥಲಾಮಸ್' ನಲ್ಲಿ ವ್ಯತ್ಯಾಸ ಉಂಟಾಗಿ ಜ್ವರ ಬರುತ್ತದೆ. ಜ್ವರ ಸೋಂಕುರೋಗಗಳ ವಿರುದ್ಧ ದೇಹದ ಸ್ವರಕ್ಷಣೆಯ ಪ್ರತಿಕ್ರಿಯೆಯೂ ಹೌದು. ಆದ್ದರಿಂದ ಜ್ವರ ಕಡಿಮೆ ಮಾಡುವ ಔಷಧದ ಉಪಯೋಗದಲ್ಲಿ ಯುಕ್ತಾ ಯುಕ್ತ ಪರಿಜ್ಞಾನ, ವಿವೇಚನೆ ಇರಬೇಕು. ಅಧಿಕ ತಾಪದ ಜ್ವರ ಖಾಯಿಲೆಯ ಹೆಚ್ಚಿನ ತೀವ್ರತೆಯ ಸೂಚಕವೇ ಆಗಿರಬೇಕಾಗಿಲ್ಲ.

ಜ್ವರದ ಮಟ್ಟ ತಿಳಿಯುವುದಕ್ಕಾಗಿ ತಾಪವನ್ನಳೆಯ ಬಲ್ಲ ಎರಡು ವಿಧವಾದ ತಾಪ ಮಾಪಕಗಳು ದೊರೆಯುತ್ತವೆ. ೧. ಪಾದರಸವುಳ್ಳ ಮತ್ತು ಮೇಲೆ ಅಳತೆಗೀರು ಮತ್ತು ಅಂಕಿಗಳಿರುವ ಗಾಜಿನ ತಾಪಮಾಪಗಳು ಮತ್ತು ೨.ಎಲೆಕ್ಟ್ರಾನಿಕ್(ಡಿಜಿಟಲ್) ತಾಪ ಮಾಪಕಗಳು; ಇವು ಪ್ಲಾಸ್ಟಿಕ್‌ನಿಂದ ತಯಾರಾಗಿರುತ್ತವೆ. ಇದರಲ್ಲಿ ತಾಪವನ್ನು ದಪ್ಪ ಅಂಕಿಗಳಲ್ಲಿ ತೋರಿಸುವುದರಿಂದ, ನೇರವಾಗಿ ಮತ್ತು ಸುಲಭವಾಗಿ ಓದಬಹುದು.

ಜ್ವರವಿರುವ ಮಗುವಿನ ಶುಶ್ರೂಷೆ:

ಜ್ವರ ಬಂದ ಮಗುವನ್ನು ಮಲಗಿಸಿರುವ ಕೊಠಡಿಯ ಕಿಟಕಿಗಳನ್ನು ತೆರೆದಿಟ್ಟು ಗಾಳಿ ಬೆಳಕು ಹಿತಕರವಾಗಿರುವಂತಿರಬೇಕು. ಹಿತವಾಗಿ ಪಂಖವನ್ನೂ ಹಾಕಬಹುದು. ಮಗುವಿಗೆ ಮೃದುವಾದ ಹತ್ತಿಬಟ್ಟೆಯ ಸಡಿಲವಾಗಿರುವ ಉಡಿಗೆ ತೊಡಿಸುವುದು ಒಳ್ಳೆಯದು. ಸಿಂಥೆಟಿಕ್ ಮತ್ತು ಉಣ್ಣೆಬಟ್ಟೆಗಳನ್ನು ಹಾಕದಿರುವುದೇ ಲೇಸು. ಜ್ವರಬಂದ ಮಕ್ಕಳಿಗೆ ಆಹಾರ ನಿಲ್ಲಿಸಬಾರದು. ಇವರಿಗೆ ಇನ್ನೂ ಹೆಚ್ಚಿನ ಆಹಾರ ಮತ್ತು ನೀರಿನ ಆವಶ್ಯಕತೆ ಇರುತ್ತದೆ. ದಿನನಿತ್ಯ ಉಪಯೋಗಿಸುವ ಮತ್ತು ಸುಲಭವಾಗಿ ಜೀರ್ಣಿಸುವ ಆಹಾರವನ್ನು ಕೊಡಬೇಕು. ಈ ಸ್ಥಿತಿಯಲ್ಲಿ ಅನ್ನ ಕೊಡಬಾರದೆಂಬುದು ತಪ್ಪು ನಂಬಿಕೆ. ಅನ್ನ, ತರಕಾರಿ, ಹಾಲು,ಹಣ್ಣು ಎಲ್ಲವನ್ನೂ ಕೊಡಬಹುದು. ಜ್ವರವಿದ್ದಾಗ ಹಸಿವು ಕಡಿಮೆ ಇರುತ್ತದೆ. ಆದ್ದರಿಂದ ಆಹಾರವನ್ನು ಸ್ವಲ್ಪ, ಸ್ವಲ್ಪ ಪ್ರಮಾಣ ದಲ್ಲಿ ಹೆಚ್ಚು ಬಾರಿ ಕೊಡಬೇಕು. ಜ್ವರ ನಿಂತ ಮೇಲೂ ಮುಂದೆ ೨-೩ ವಾರಗಳು ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಕೊಡಬೇಕು. ಕಾಸಿ ತಣ್ಣಗೆ ಮಾಡಿದ ನೀರನ್ನು ಆಗಾಗ ಕುಡಿಸ ಬೇಕು. ಆಹಾರ ನೀರು ಕೊಡದೆ "ಲಂಘನಂ ಪರಮೌಷಧಂ" ಎಂದು ಉಪವಾಸ ಹಾಕಿದರೆ ಮಗು ಸುಸ್ತಾಗುತ್ತದೆ. ಜ್ವರವಿರುವ ಮಗುವನ್ನು ದಿನವಿಡಿ ಹಾಸಿಗೆ ಹಿಡಿಸಬೇಕಾಗಿಲ್ಲ. ಆದರೂ ಹೆಚ್ಚಿನ ಆಯಾಸ. ಒಳ್ಳೆಯದಲ್ಲ. ಮನೆಯಲ್ಲೇ ಓಡಾಡಿಕೊಂಡು ಆಟಪಾಠ ಮಾಡಿಕೊಂಡಿರಬಹುದು.

ಜ್ವರದಿಂದ ಮಗುವಿಗೆ ತೊಂದರೆಯಾಗುತ್ತಿದ್ದರೆ ಜ್ವರ ಕಡಿಮೆ ಮಾಡಲು 'ಪಾರಸಿಟಮಾಲ್' ಔಷಧವನ್ನು ವೈದ್ಯರ ಸಲಹೆ ಪಡೆದು ನಿರ್ದಿಷ್ಟ

ಪ್ರಮಾಣದಲ್ಲಿ ಕೊಡಬಹುದು. ಔಷಧಿ ಅಂಗಡಿಗಳಲ್ಲಿ ಮಾರುವ 'ಆಸ್ಪಿರಿನ್' ಗುಳಿಗೆಯನ್ನು ೧೦ ವರ್ಷಕ್ಕಿಂತ ಕಿರಿಯ ಮಕ್ಕಳಿಗೆ ಕೊಡಬಾರದು. ಇದು ಹೊಟ್ಟೆ ಉರಿ, ಸಂಕಟ, ರಕ್ತವಾಂತಿ ಉಂಟುಮಾಡಬಹುದಲ್ಲದೆ, 'ರಿಯೇಸಿಂಡ್ರೋಮ್' ಎಂಬ ತೀವ್ರತರ ಖಾಯಿಲೆಯನ್ನೂ ಉಂಟುಮಾಡಬಹುದು.

ಜ್ವರದ ತೀವ್ರತೆ ಹೆಚ್ಚಿದ್ದರೆ ಅಥವಾ ಮಗುವಿಗೆ ಜ್ವರದ ಸೆಳವು ಬರುವ ಸಂಭವವಿದ್ದರೆ, ಜ್ವರವನ್ನು ಆದಷ್ಟು ಬೇಗ ಕಡಿಮೆ ಮಾಡಬೇಕು. ಈ ಮುಂಚೆ ತಿಳಿಸಿರುವ ಔಷಧ ಮತ್ತು ಇನ್ನಿತರ ಉಪಚಾರದ ಜೊತೆಗೆ, ಮಗುವಿನ ಮೈಯನ್ನು ನಲ್ಲಿ ನೀರಿನಲ್ಲಿ ಅಥವಾ ಉಗುರು ಬೆಚ್ಚಗಿನ ನೀರಿನಲ್ಲಿ ಒದ್ದೆ ಮಾಡಿದ ಟವಲಿನಿಂದ ಒರೆಸಿದರೆ ಜ್ವರ ಕಡಿಮೆಯಾಗುತ್ತದೆ. ಇದಕ್ಕೆ ತಣ್ಣೀರನ್ನು ಉಪಯೋಗಿಸಬಾರದು. ಟವಲ್‌ನಿಂದ ಸುತ್ತಿ ಒದ್ದೆ ಬಟ್ಟೆಯಿಂದ ಮುಖ ಒರೆಸಿ ಮೈಯ ಮುಂಭಾಗದಿಂದ ಮೊದಲು ಮಾಡಿ ಅನಂತರ ಮೈಯ್ಯಿನ ಹಿಂಭಾಗವನ್ನೂ ಚೆನ್ನಾಗಿ ಒರೆಸಬೇಕು. ೩೦ ಮಿನಿಟುಗಳವರೆಗೂ ಒರೆಸಬಹುದು. ಬಳಿಕ, ಒಣಗಿದ ಟವಲ್‌ನಲ್ಲಿ ಒರೆಸಿ ಲಘು ಉಡಿಗೆ ತೊಡಿಸಿ ಲಘು ಹೊದಿಕೆ ಹೊದಿಸಿ ಮಲಗಿಸಬೇಕು. ಬೆವತು ಜ್ವರ ಕಡಿಮೆಯಾಗಲೆಂದು ದಪ್ಪಕಂಬಳಿಯನ್ನು ಹೊದೆಸಬಾರದು. ಒದ್ದೆ ಬಟ್ಟೆಯನ್ನು ಹಣೆಯ ಮೇಲೆ ಹಾಕುವುದರಿಂದ ಜ್ವರ ಇಳಿಯುವುದಿಲ್ಲ. ಜ್ವರವಿರುವುದರ ಜೊತೆಗೆ ಈ ಕೆಳಗೆ ತಿಳಿಸಿರುವ ಪರಿಸ್ಥಿತಿಗಳಿದ್ದರೆ ನಿಮ್ಮ ವೈದ್ಯರಿಗೆ ತೋರಿಸಿ:

★ ಮಗುವಿಗೆ ಸರಿಯಾಗಿ ಆಹಾರ ತೆಗೆದುಕೊಳ್ಳಲಾಗದಿದ್ದರೆ, ವಾಂತಿಯಾಗುತ್ತಿದ್ದರೆ, ಆಲಸ್ಯವಿದ್ದರೆ,

★ ಉಸಿರಾಡಲು ತೊಂದರೆ ಇದ್ದರೆ,

★ ಅಸ್ವಸ್ಥತೆ ಜಾಸ್ತಿ ಆದರೆ,

★ ಹೊಟ್ಟೆ ನೋವು ಅಥವಾ ಹೊಟ್ಟೆಯಲ್ಲಿ ಇರುಸು ಮುರುಸು ಇದ್ದರೆ,

★ ಚರ್ಮದ ಮೇಲೆ ಗಂಧೆಗಳು ಕಾಣಿಸಿಕೊಂಡರೆ,

★ ಮೂತ್ರ ಕಡಿಮೆಯಾದರೆ ಅಥವಾ ಮೂತ್ರ ವಿಸರ್ಜನೆಯಲ್ಲಿ ಉರಿ ಇದ್ದರೆ,

★ ಜ್ವರದ ಪ್ರಮಾಣ ಅತಿ ಜಾಸ್ತಿ ಇದ್ದರೆ,

ಗಮನಿಸಬೇಕು : ಈ ಮೇಲೆ ತಿಳಿಸಿದ ತೊಂದರೆಗಳು ಜ್ವರವಿರುವ ಮಗುವಿನಲ್ಲಿ ತೋರಿ ಬಂದಲ್ಲಿ, ಜ್ವರಕ್ಕಾಗಿ ಸಲಹೆ ಪಡೆದಿದ್ದ ವೈದ್ಯರ ಹತ್ತಿರವೇ ಮತ್ತೆ ಸಲಹೆ ತೆಗೆದುಕೊಳ್ಳಬೇಕು. ಅವರಿಗೆ ಮಗುವಿನ ರೋಗ ಲಕ್ಷಣಗಳು ಪ್ರಾರಂಭದಿಂದ ತಿಳಿದಿರುವುದರಿಂದ ಬೇಗ ಖಾಯಿಲೆ ಗುರುತಿಸಲು ಸುಲಭವಾಗುತ್ತದೆ.

ಜ್ವರದ ಸೆಳವು : ಸೆಳವು ತಾಯಿಯರಿಗೆ ಗಾಬರಿ ಉಂಟು ಮಾಡುವಂತಹ ಒಂದು ರೋಗ ಚಿಹ್ನೆ. ಅದು ಬಂದಾಗ ಮರಣಾಂತಿಕ ರೋಗವೆಂದೋ ಅಥವಾ ಮಗುವಿನ ಮಿದುಳಿಗೆ ಗಾಸಿಯಾಗಬಹುದೆಂದೋ ಹೆದರುತ್ತಾರೆ. ಸಾಧಾರಣವಾಗಿ ಜ್ವರದ ಸೆಳವು ಬಂದ ಮಕ್ಕಳಲ್ಲಿ ಯಾವುದೇ ಮರುಕುತ್ತು ಇರುವುದಿಲ್ಲ. ಆದರೆ ತೀವ್ರತರಹದ ಮಿದುಳು ಸೋಂಕು ರೋಗಗಳಲ್ಲೂ ಸೆಳವು ಬರಬಹುದಾದ ಕಾರಣ ತೀವ್ರವಲ್ಲದ ಜ್ವರದ ಸೆಳವಿನ ಬಗ್ಗೆ ಮಾಹಿತಿಗಳನ್ನು ತಿಳಿಯುವುದರಿಂದ ಅನಾವಶ್ಯಕ ಆತಂಕ ಕಡಿಮೆಯಾಗುತ್ತದೆ.

ಮಿದುಳು ಸೋಂಕು ಹೊರತುಪಡಿಸಿ ಮಿಕ್ಕ ಇತರ ಜ್ವರದಿಂದ ಕೂಡಿದ ಖಾಯಿಲೆಗಳಲ್ಲಿ ಕಾಣಿಸಿಕೊಳ್ಳುವ ಸೆಳವಿಗೆ 'ಜ್ವರದ ಸೆಳವು' ಎನ್ನುತ್ತಾರೆ. ಇದಕ್ಕೆ ಇಂಥದೇ ಎಂಬ ನಿರ್ದಿಷ್ಟ ಕಾರಣ ತಿಳಿದು ಬಂದಿಲ್ಲ. ಸಾಮಾನ್ಯವಾಗಿ ವಿಷಾಣು ಸೋಂಕಿನ ಜ್ವರ (ವೈರಲ್ ಜ್ವರ), ಶ್ವಾಸಕೋಶ ಸೋಂಕು, ಮತ್ತು ಮೂತ್ರನಾಳ ಸೋಂಕುಗಳಲ್ಲಿ ಜ್ವರದ ಜೊತೆಗೆ ಈ ಸೆಳವು ಬರುತ್ತದೆ.

ಶೇ.೨ ರಿಂದ ೬ರಷ್ಟು ಮಕ್ಕಳಲ್ಲಿ ಈ ಸೆಳವು

ಬರುವ ಸಂಭವವಿರುತ್ತದೆ. ಮಕ್ಕಳಲ್ಲಿ ಬರುವ ಒಟ್ಟಾರೆ ಸೆಳವಿನಲ್ಲಿ ಶೇ.೫೦ ಭಾಗದಷ್ಟು ಜ್ವರದ ಸೆಳವೇ ಆಗಿರುತ್ತದೆ. ಅವಳಿ ಮಕ್ಕಳಲ್ಲಿ, ಸಗೋತ್ರದಲ್ಲಿ ವಿವಾಹವಾದವರ ಮಕ್ಕಳಲ್ಲಿ ಈ ಸೆಳವು ಬರುವ ಸಂಭವ ಹೆಚ್ಚು. ಹಾಗೂ ಹೆಣ್ಣುಮಕ್ಕಳಿಗಿಂತ ಗಂಡು ಮಕ್ಕಳಿಗೆ ಇದು ಹೆಚ್ಚಾಗಿ ಬರುತ್ತದೆ.

ಜ್ವರದ ಸೆಳವು ಸಾಮಾನ್ಯವಾಗಿ ೩ ತಿಂಗಳ ಮಗುವಿನಿಂದ ೬ ವರ್ಷದ ಮಕ್ಕಳಲ್ಲಿ ಬರುತ್ತದಾದರೂ, ಮೊತ್ತ ಮೊದಲಿನ ಸೆಳವು ೧ ವರ್ಷದಿಂದ ೩ ವರ್ಷದವರೆಗಿನ ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಕೆಲವು ಮಕ್ಕಳಲ್ಲಿ ಇದು ಮರುಕೊಳಿಸಲೂಬಹುದು. ೬ ತಿಂಗಳಿಗಿಂತ ಕಿರಿಯರಲ್ಲಿ, ಅಥವಾ ತಾಯಿ ತಂದೆಯರಲ್ಲಿ ಈ ಸೆಳವು ಬಂದಿದ್ದರೆ, ಇದು ಮರುಕೊಳಿಸುವ ಸಾಧ್ಯತೆ ಹೆಚ್ಚು. ಇದು ಅಲ್ಪಕಾಲದ ಜ್ವರದಲ್ಲಿ ಮಾತ್ರವೇ ಬರುವುದು. ಜ್ವರದ ತಾಪ ಏರುತ್ತಿದ್ದಂತೆ ಇದು ಬರುತ್ತದೆ. ಆದರೆ ಜ್ವರದ ಸೆಳವಿನ ಸಂಭವ, ಜ್ವರದ ತಾಪದ ಪ್ರಮಾಣಕ್ಕಿಂತ, ಮಗುವಿನ ಸ್ವಭಾವ ಸೂಕ್ಷ್ಮತೆಯನ್ನು ಅವಲಂಬಿಸುತ್ತದೆ. ಉದಾ: ಒಂದು ಮಗುವಿಗೆ ೩೮° ಜ್ವರದ ತಾಪಕ್ಕೇ ಸೆಳವು ಬರಬಹುದು ಮತ್ತು ಮತ್ತೊಂದು ಮಗುವಿಗೆ ೩೯, ೪೦° ಜ್ವರವಿದ್ದರೂ ಸೆಳವು ಬರದೇ ಇರಬಹುದು.

ಜ್ವರದ ಸೆಳವಿನಲ್ಲಿ ಎರಡು ವಿಧ :

೧. ಸಾಂಕೇತಿಕ ಲಕ್ಷಣವಿರುವ ಜ್ವರದ ಸೆಳವು.
೨. ಸಾಂಕೇತಿಕ ಲಕ್ಷಣವಿರದ ಜ್ವರದ ಸೆಳವು.

ಸಾಂಕೇತಿಕ ಲಕ್ಷಣವುಳ್ಳ ಸೆಳವು ಜ್ವರ ಕಾಣಿಸಿಕೊಂಡ ೨೪ ಗಂಟೆಗಳೊಳಗೆ ಬರುತ್ತದೆ. ಒಂದು ಅಥವಾ ಎರಡು ಬಾರಿ ಮಾತ್ರ ಬರುವುದು. ದೇಹದ ಎಲ್ಲ ಭಾಗಗಳಲ್ಲೂ ಕಾಣಿಸಿಕೊಳ್ಳುತ್ತದೆ. ೫ ರಿಂದ ೧೦ ಮಿನಿಟುಗಳು ತನಕ ಇರುತ್ತದೆ. ಸೆಳೆವಿದ್ದಾಗ ಮಾತ್ರ ಮಗುವಿಗೆ ಎಚ್ಚರ ತಪ್ಪಿದ್ದು, ಸೆಳವು ನಿಂತ ಬಳಿಕ ಅದು ಜ್ವರ ಹೊರತು ಮಿಕ್ಕ ಎಲ್ಲಾ ರೀತಿಯಲ್ಲೂ ಸ್ವಸ್ಥವಾಗಿರುತ್ತದೆ. ಯಾವ ರೀತಿಯ ಮರುಕುತ್ತೂ ಇರುವುದಿಲ್ಲ. ಸೆಳವಿನ ಕಾರಣಗಳನ್ನು ಗುರುತಿಸಲು ಮಾಡುವ ರಾಸಾಯನಿಕ ಪ್ರಯೋಗಗಳಲ್ಲಿ (ಇಇಜಿ, ಮಿದುಳು ಬಳ್ಳಿಯ ಸ್ರಾವ ಪರೀಕ್ಷೆ) ಏನೂ ತೊಂದರೆ ಕಾಣುವುದಿಲ್ಲ. ಅವೆಲ್ಲಾ ಸಹಜಸ್ಥಿತಿಯಲ್ಲಿರುತ್ತವೆ. ಈ ಸೆಳವು ಮುಂದೆ ಅಪಸ್ಮಾರ ಬರುವ ಸೂಚಕವೇನೂ ಅಲ್ಲ.

ಸಾಂಕೇತಿಕ ಲಕ್ಷಣವಿರದ ಸೆಳವನ್ನು ಜಟಿಲ ಸೆಳವೆಂದೂ ಹೇಳಬಹುದು. ಇದು ಒಮ್ಮೆ ಬಂದರೆ ೧೫-೨೦ ಮಿನಿಟ್‌ಗಳಿಗೂ ಹೆಚ್ಚು ಕಾಲವಿರುತ್ತದೆ. ೩-೪ಕ್ಕಿಂತ ಹೆಚ್ಚು ಬಾರಿ ಬರುವುದುಂಟು. ದೇಹದ ಯಾವುದಾದರೂ ಒಂದು ಅಥವಾ ಎರಡು ಭಾಗಗಳಲ್ಲಿ ಮಾತ್ರ ಕಾಣಿಸುತ್ತದೆ. ಅತ್ಯಂತ ಕಡಿಮೆ ತಾಪದ ಜ್ವರದಲ್ಲೂ ಬರಬಹುದು. ಸೆಳವಿದ್ದಾಗ ಮತ್ತು ಸೆಳವು ನಿಂತು ಅರ್ಧ, ಒಂದು ಗಂಟೆಯಕಾಲ ಮಗುವಿಗೆ ಪ್ರಜ್ಞೆ ಇರುವುದಿಲ್ಲ. ಸೆಳವು ಬಂದು ಮುಂದೆ ೧೫ ದಿನದ ತನಕ ಇ.ಇ.ಜಿ ಪ್ರಯೋಗದಲ್ಲಿ ವ್ಯತ್ಯಾಸವಿರುತ್ತದೆ. ಮಿದುಳು ಬಳ್ಳಿ ಸ್ರಾವ ಪರೀಕ್ಷೆಯಲ್ಲಿ ಏನೂ ವ್ಯತ್ಯಾಸವಿರುವುದಿಲ್ಲ. ಈ ತರಹ ಸೆಳವು ಮಿದುಳು ಗಾಸಿ ಇರುವ, ಕುಂಠಿತ ಬೆಳವಣಿಗೆ ಇರುವಂಥ ಮಕ್ಕಳಲ್ಲಿ ವಿಶೇಷವಾಗಿ ಕಾಣಬರುತ್ತದೆ. ಇಂಥ ಮಕ್ಕಳಿಗೆ ಮುಂದೆ ಅಪಸ್ಮಾರ ಬರಬಹುದು.

ಜ್ವರದ ಸೆಳವನ್ನು ಅದರ ಬಾಹ್ಯ ಲಕ್ಷಣಗಳಿಂದಲೇ ಗುರುತಿಸಬಹುದಾದ್ದರಿಂದ, ವಿಶೇಷ ಪ್ರಯೋಗ ಪರೀಕ್ಷೆಗಳೇನೂ ಸಾಮಾನ್ಯವಾಗಿ ಬೇಕಾಗಿರುವುದಿಲ್ಲ. ಒಮ್ಮೊಮ್ಮೆ ಮಾತ್ರ, ಅನುಮಾನವಿದ್ದಲ್ಲಿ, ವೈದ್ಯರುಗಳು, ಇದು ಮಿದುಳು ಸೋಂಕಿನ ಸೆಳವಲ್ಲವೆಂದು ಖಚಿತಪಡಿಸಿಕೊಳ್ಳಲು ಕೆಲವು ವಿಶೇಷ ಪರೀಕ್ಷೆಗಳನ್ನು ನಡೆಸುತ್ತಾರೆ.

ಮಗುವಿಗೆ ಸೆಳವಿದ್ದಾಗ ಗಮನಿಸಬೇಕಾದ ಅಂಶಗಳು:

೧. ಭಯಪಡಬಾರದು. ಜ್ವರದ ಸೆಳವು ಮುಂದೆ ೧೦-೧೫ ಮಿನಿಟುಗಳಲ್ಲಿ ತಾನಾಗಿ ನಿಂತುಹೋಗಿ ಮಗು ಮೊದಲಿನಂತೆಯೇ ಆರಾಮವಾಗುತ್ತದೆ.

೨. ಮಗುವನ್ನು ಕೂಡಲೇ ಒಂದು ಮಗ್ಗುಲಿಗೆ ಹೊರಳಿಸಿ, ತಲೆಭಾಗ ಸ್ವಲ್ಪ ಕೆಳಗೆ ಮಾಡಿ ಮಲಗಿಸಬೇಕು.

೩. ಮಗು ಕೆಳಗೆ ಬೀಳದಂತೆ ನೋಡಿಕೊಳ್ಳಬೇಕು. ಗಾಯಗೊಳಿಸಬಹುದಾದ ಆಟಿಕೆಗಳು, ಮೊನಚಾದ ವಸ್ತುಗಳನ್ನು ಮಗುವಿನಿಂದ ದೂರ ಸರಿಸಬೇಕು.

೪. ಮಗುವಿನ ಕತ್ತನ್ನು ಸ್ವಲ್ಪ ಹಿಂದಕ್ಕೆ ಬಾಗಿಸಿ, ಕೆಳದವಡೆಯನ್ನು ಮುಂದಕ್ಕೆ ಸರಿಸಿದರೆ ಉಸಿರಾಡಲು ಅನುಕೂಲವಾಗುತ್ತದೆ.

೫. ಮಗು ವಾಂತಿಮಾಡಿದ್ದರೆ, ಜೊಲ್ಲು ಸುರಿಸುತ್ತಿದ್ದರೆ, ಬಾಯನ್ನು ಒಡನೆ ಒರೆಸಬೇಕು. ಹಾಗೆ ಮಾಡದಿದ್ದಲ್ಲಿ ಇದು ಶ್ವಾಸನಾಳಕ್ಕೆ ಹೋಗಿ ಶ್ವಾಸಕೋಶ ಉರಿಊತಕ್ಕೆ ಕಾರಣವಾಗಬಹುದು. ಬಾಯೊಳಗೆ ಬೆರಳಾಗಲೀ, ಚಮಚವಾಗಲಿ ಹಾಕಬಾರದು. ಹಾಕಲು ಪ್ರಯತ್ನಿಸಬಾರದು. ಇವನ್ನು ಹಾಕುವಾಗ ಹಲ್ಲು ಮುರಿದು ಶ್ವಾಸನಾಳದೊಳಗೆ ತೂರಿ ಉಸಿರು ಸಿಕ್ಕಿಹಾಕಿಕೊಳ್ಳುತ್ತದೆ., ನೀರು, ಔಷಧಿ, ಆಹಾರಪದಾರ್ಥ ಇವುಗಳನ್ನು ಸೆಳವಿದ್ದಾಗ ಕೊಡಬಾರದು.

೬. ಮಗುವಿನ ಉಡಿಗೆತೊಡಿಗೆಗಳನ್ನು ಸಡಿಲಿಸಬೇಕು.

೭. ಮಗುವನ್ನು ಅದುಮಿ ಹಿಡಿದು ಸೆಳವನ್ನು ನಿಲ್ಲಿಸುವ ಪ್ರಯತ್ನ ವ್ಯರ್ಥ. ಮಗುವಿಗೆ ಆಗ ಸ್ಮೃತಿ ಇಲ್ಲದಿರುವುದರಿಂದ ಎಷ್ಟೇ ತೀಕ್ಷ್ಣವಾಗಿ ಚುಚ್ಚಿದರೂ ಎಚ್ಚರವಾಗುವುದಿಲ್ಲ.

೮. ಸೆಳವು ಜ್ವರ ಬಂದು ಎಷ್ಟು ಸಮಯದ ನಂತರ ಬಂತು, ಎಷ್ಟು ಸಮಯ ಇತ್ತು. ಸೆಳವಿನ ನಂತರ ಎಷ್ಟು ಹೊತ್ತು ಸ್ಮೃತಿ ತಪ್ಪಿತ್ತು. ಮತ್ತು ಇನ್ನೂ ಏನಾದರೂ ಚಿಹ್ನೆಗಳು ಕಂಡಲ್ಲಿ, ಈ ಎಲ್ಲಾ ವಿವರಗಳನ್ನು ಗುರುತಿಟ್ಟುಕೊಂಡಿದ್ದು ವೈದ್ಯರಲ್ಲಿ ತಪ್ಪದೆ ತಿಳಿಸಬೇಕು. ಖಾಯಿಲೆ ಗುರ್ತಿಸಲು ಇವು ಬೇಕಾದ ಮುಖ್ಯ ವಿವರಗಳಾಗಿರುತ್ತವೆ.

೯. ಸೆಳವು ನಿಂತ ಮೇಲೆ ಜ್ವರವನ್ನು ಕಡಿಮೆ ಮಾಡುವ ಪ್ರಯತ್ನ ಮಾಡಬೇಕು. ಇದಕ್ಕೆ ಈಗಾಗಲೇ ಜ್ವರ, ವಿಷಯದಿಲ್ಲ ತಿಳಿಸಿರುವಂತೆ ಪಾರಾಸಿಟಮಾಲ್ ಔಷಧ ಕೊಟ್ಟು ಇತರ ಉಪಚಾರಗಳು ಮತ್ತು ಸ್ಪಂಜಿಂಗ್ ಮಾಡಬೇಕು.

೧೦. ಸೆಳವು ನಿಂತಮೇಲೆ, ಮತ್ತು ಸೆಳವು ೧೫ ಮಿನಿಟಗಿಂತಲೂ ಹೆಚ್ಚುಕಾಲವಿದ್ದರೆ ಮಗುವನ್ನು ವೈದ್ಯರು ಪರೀಕ್ಷಿಸಬೇಕು.

ಜ್ವರದ ಸೆಳವು ಮರುಕೊಳಿಸದಂತೆ ಕೆಲವು ಕ್ರಮಗಳನ್ನು ಕೈಗೊಳ್ಳುವುದು ಉತ್ತಮ. ಜ್ವರದ ಸೆಳವು ಬರುವ ಸಂಭವವಿರುವ ಮಕ್ಕಳಿದ್ದರೆ. ಪಾರಸಿಟಮಾಲ್ ಔಷಧಿ ಸದಾ ಮನೆಯಲ್ಲಿ ಇಟ್ಟಿರಬೇಕು. ಜ್ವರ ಕಾಣಿಸಿದ ಕೂಡಲೆ ಇದನ್ನು ಕೊಡಬೇಕು. ಜ್ವರ ಹೆಚ್ಚಿದರೆ ಸ್ಪಂಜಿಂಗ್ ಮಾಡಬೇಕು.

ಕೆಲವು ಪ್ರತಿ ಸೆಳವಿನ ಔಷಧಿಗಳು ದೊರೆಯುತ್ತವೆ. ಸಾಂಕೇತಿಕ ಲಕ್ಷಣವುಳ್ಳ ಸೆಳವಿಗೆ ಇವನ್ನು ಉಪಯೋಗಿಸಬೇಕಾಗುವುದಿಲ್ಲ. ಆದರೆ ಈ ಸೆಳವು ಮಗುವಿಗೆ ಪದೇ ಪದೇ ಬರುತ್ತಿದ್ದರೆ, ಅಥವಾ ಜಟಿಲ ಸೆಳವಿದ್ದರೆ, ಅಂಥ ಮಕ್ಕಳಿಗೆ ಈ ಔಷಧವನ್ನು ೧ ವರ್ಷ ಕಾಲ ಅಥವಾ ಮಗುವಿಗೆ ೫ ವರ್ಷ ತುಂಬುವ ತನಕ ವೈದ್ಯರ ಸಲಹೆಯಂತೆ ಕೊಡಬೇಕು. ಈ ಔಷಧಗಳಿಂದ ಜ್ವರದ ಸೆಳವು ಮರುಕೊಳಿಸದಂತೆ ತಡೆಯಬಹುದಾದರೂ, ಮುಂದೆ ಅಪಸ್ಮಾರ ಬರುವುದನ್ನು ಇವು ತಡೆಯುತ್ತವೆ ಎಂಬುದಕ್ಕೆ ಸ್ಥಿರ ಆಧಾರಗಳೇನೂ ಇಲ್ಲ.

ಕತ್ತೆಯೊಡನೆ ಪಯಣ

ಟಿ.ವಿ. ಅನ್ನಪೂರ್ಣಮ್ಮ
೧೨೧೩/೫೮, ೨ನೇ ಕ್ರಾಸ್,
ನಾಗಪ್ಪ ಬ್ಲಾಕ್, ಶ್ರೀರಾಮಪುರ,
ಬೆಂಗಳೂರು-೫೬೦ ೦೨೧

ಬಂಡಿಯಲ್ಲಿ ಪ್ರಯಾಣಮಾಡಲು ನಾನು ಒಂದು ಕತ್ತೆಯನ್ನು ಕೊಂಡುಕೊಂಡೆ.
ಈ ಪ್ರಾಣಿಯ ಬಗ್ಗೆ ಅಂತಃಕರಣದಲ್ಲಿ ಅತಿ ಪ್ರೀತಿಯನ್ನು ಬೆಳೆಸಿಕೊಂಡೆ

ಮೊರಕ್ಕೋದ ಅಟ್ಲಾಸ್ ಪರ್ವತಗಳ ಹಳ್ಳಿಯಾದ ಇಮಿಲ್‌ಚಿಲ್‌ನ ಒಂದು ಮೈದಾನದಲ್ಲಿ ಪ್ರತಿ ಶರತ್ಕಾಲದಲ್ಲಿ ನಡೆಯುತ್ತಿದ್ದ ಹೆಣ್ಣು ಗಂಡನ್ನು ಹೊಂದಿಸುವ ಹಬ್ಬ ಹಾಗೂ ಸಂತೆಯಲ್ಲಿ ಮಾರಾಟಕ್ಕಿದ್ದ ಡಜನ್ ಗಟ್ಟಳೆ ಕತ್ತೆಗಳ ಬೆಲೆ ಕನಿಷ್ಠಪಕ್ಷ ೩೦೦೦ ಡರ್ ಹಾಮ್‌ಗಳು (ಅಂದರೆ ೧೩,೦೦೦ ರೂಗಳು) ನನ್ನ ಬಜೆಟ್‌ನ್ನು ಮೀರಿದುದಾಗಿತ್ತು. ಕಂಬಳಿಯ ಮಾರಾಟಗಾರರಂತೆ, ಕತ್ತೆಯ ಮಾರಾಟಗಾರರು ಚರ್ಚೆಯಿಂದ ಬದಲಾಗುವವರಲ್ಲ, ಕೋಪದಿಂದ ಉದ್ರಿಕ್ತರಾಗುವವರಲ್ಲಿ, ಅಥವಾ ನೇರ ಬೇಡಿಕೆಗೆ ಬಗ್ಗುವವರಲ್ಲ.

ಹೇಸರಗತ್ತೆಯೊಡನೆ ಅಟ್ಲಾಸ್ ಪರ್ವತ ಹತ್ತುವಂಥ ನನ್ನ ಮೂಲ ಯೋಜನೆ ಸುಲಭವಾದದ್ದಾಗಿರಲಿಲ್ಲ. ಕುದುರೆ ಸವಾರಿಯ ಅನುಭವ ನನಗಿರಲಿಲ್ಲ. ಉತ್ತರ ಭಾರತದ ಸ್ಥಳೀಯ ಬುಡಕಟ್ಟಿನವರ ಭಾಷೆ ಬರ್ಬರ್ ನನಗೆ ತಿಳಿದಿರಲಿಲ್ಲ. ವಸಾಹತಿನವರ ಅವಶೇಷವಾದ ಫ್ರೆಂಚ್ ಭಾಷೆಯ ಕೆಲವು ಶಬ್ದಗಳನ್ನು ಆಡಬಲ್ಲವನಾಗಿದ್ದೆ. ಹೆಣ್ಣು ಕುದುರೆ ಮತ್ತು ಗಂಡು ಕತ್ತೆಯ ಥಳಿಯೇ ಹೇಸರಗತ್ತೆ ಎಂಬುದೂ ನನಗೆ ತಿಳಿದಿರಲಿಲ್ಲ.

ಇತರ ಸಾಧನಗಳಿಗೆ ಹೋಲಿಸಿದಾಗ ಹೇಸರಗತ್ತೆಯ ಸಾಮರ್ಥ್ಯ ನನಗೆ ಬಹಳ ಹಿಡಿಸಿತು. ಆ ಪ್ರಾಣಿಯ ಬಗ್ಗೆ ಒಲವು ಮೂಡಿತು. ಹಿಂದುಳಿದ, ಮುಖ್ಯವಾಗಿ ರಸ್ತೆಗಳೇ ಇಲ್ಲದ ಈ ಪ್ರದೇಶವನ್ನು ನೋಡಲು ಇರುವ ಅತ್ಯಂತ ಪ್ರಾಯೋಗಿಕವಾಗಿಯೂ, ಆರ್ಥಿಕವಾಗಿಯೂ ಇರುವ ಒಂದು ಉತ್ತಮ ದಾರಿ ಬರ್ಬರರ ದೃಷ್ಟಿಯಲ್ಲಿ ಹೇಸರಗತ್ತೆಯನ್ನು ಕೊಳ್ಳುವುದು, ಪುನಃ ಮಾರಾಟಮಾಡುವುದು. ನಾನು ಕಳ್ಳತನ ಮಾಡುವವನಲ್ಲವಾದ್ದರಿಂದ ನನಗೆ ಈ ಅದೃಷ್ಟವಿರಲಿಲ್ಲ. ಮೌಸೇಮ್‌ನಲ್ಲಿ ನನಗೆ ಸ್ನೇಹಿತನಾದ ಮೊರಕ್ಕೋದ ಅರ್ಥಶಾಸ್ತ್ರದ ವಿದ್ಯಾರ್ಥಿ ನಸೀರ್ ಸಲಹೆ ಕೊಟ್ಟ. ''ಒಂದು ಕತ್ತೆಯನ್ನು ಕೊಂಡರೆ ಹೇಗೆ?'' ಹೇಸರಗತ್ತೆಗಿಂತ ಅದರ ಬೆಲೆ ಕಡಿಮೆ ಇರುತ್ತದೆ, ಆದರೂ ಅದು ನಿನ್ನ ಮೂಟೆಯನ್ನು ಹೊರಬಲ್ಲದು''.

ಅವನ ಸಲಹೆಯ ಬಗ್ಗೆ ನನಗೆ ಸಂದೇಹವಿತ್ತು. ವಿಶೇಷವಾಗಿ ಮುದುಕರು ಮತ್ತು ಮಕ್ಕಳು ಕತ್ತೆಗಳ ಸವಾರಿ ಮಾಡುತ್ತಾರೆ. ಅದು ನಿಧಾನವಾಗಿ ಹೋಗುವದಲ್ಲದೆ ಹೇಸರಗತ್ತೆಗಿಂತ ಹೆಚ್ಚು ವಿರಾಮವನ್ನು ಅಪೇಕ್ಷಿಸುತ್ತದೆ. ನನ್ನ ಮನಸ್ಸು ಒಂದು ಹೇಸರಗತ್ತೆಯತ್ತ ಎಳೆಯಿತು. ಅದನ್ನು ಮೇಯಿಸುವುದೂ ಕಷ್ಟವೆನಿಸಲಿಲ್ಲ.

ಒಂದು ಕತ್ತೆಯು ಸ್ಪರ್ಧೆಯನ್ನು ಮೀರಿ ನಿಂತಿತು. ಅದಕ್ಕೆ ಚೆನ್ನಾಗಿ ಮಾಲೀಸು ಮಾಡಲಾಗಿತ್ತು. ಸುಮಾರು ನಾಲ್ಕು ಅಡಿಗಳಷ್ಟು ಎತ್ತರ. ಮಾಂಸ ಪುಷ್ಟಿಯುಳ್ಳ ಕಾಲುಗಳಿದ್ದುವು. ನಾಸಿರ್ ಅದರ ಬಿಳಿ ಮೂತಿಯನ್ನು ಬಿಗಿ

ಡೇವಿಡ್ ವಾಲಿಸ್ ಅವರ 'ಟ್ರಾವೆಲ್ಸ್ ವಿತ್ ಮೈ ಡಾಂಕಿ' ಎಂಬ ಲೇಖನದ ಕನ್ನಡಾನುವಾದ

ಯಾಗಿ ಹಿಡಿದು ಕೊಂಡು ಹಲ್ಲುಗಳನ್ನು ಪರೀಕ್ಷಿಸಲು ತುಟಿಗಳನ್ನು ಬಿಡಿಸಿ ಬಾಯಿ ತೆಗೆಯಿಸಿದಾಗ ಸ್ವಲ್ಪ ಅಲುಗಾಡುತ್ತಾ ಒಸರಿತು. ಉಳಿದಂತೆ ಅದು ಸ್ವಲ್ಪವೂ ಅಲುಗಾಡದೆ ನಿಂತಿತ್ತು. ನಸೀರನ ಊಹೆಯಂತೆ ಅದಕ್ಕೆ ಎಂಟು ವರ್ಷ ವಯಸ್ಸು. ಅದು ಕುದುರೆ ಮರಿಯಲ್ಲ ದಿದ್ದರೂ, ಒಂದು ಸೀಮಿತ ಪ್ರಯಾಣಕ್ಕೆ ಸಾಕಾಗುವಷ್ಟು ಚುರುಕಾಗಿದೆಯೆಂದೂ ನಸೀರ ಊಹಿಸಿದ.

ಮಾದಕ ದ್ರವ್ಯದ ಪ್ರಭಾವವನ್ನು ನೋಡಲು ಕತ್ತೆಯ ಕಣ್ಣುಗಳನ್ನು ಪರೀಕ್ಷಿಸಿದ. ನೀತಿ ನಿಷ್ಠೆಯಿಲ್ಲದ ಕೆಲ ವ್ಯಾಪಾರಿಗಳು ತಮ್ಮ ಪಳಗಿಲ್ಲದ ಕತ್ತೆಗಳನ್ನು ಶಾಂತಗೊಳಿಸಿ ಗ್ರಾಹಕರನ್ನು ಮೂರ್ಖರನ್ನಾಗಿ ಮಾಡುತ್ತಾರೆಂದು ನನ್ನ ಹೊಸ ಸ್ನೇಹಿತ ಹೇಳಿದ. ಅಂತಿಮವಾಗಿ ಅವನು ಕೆಲಸೆಂಟಿಮೀಟರ್ ದೂರದಿಂದ ಕತ್ತೆಯ ಮೂತಿಗೆ ಚುಚ್ಚಿದ. ಕತ್ತೆ ಅದನ್ನು ಧೈರ್ಯದಿಂದ ಎದುರಿಸಿತು. ನಸೀರ್ ಇದು ಒಳ್ಳೆಯ ಪ್ರತಿಕ್ರಿಯೆ ಎಂದು ಹೇಳಿ ತತ್‌ಕ್ಷಣವೇ ಅದನ್ನು ಕೊಳ್ಳುವಂತೆ ಒತ್ತಾಯಿಸಿದ. ನಾನು ೩೦೦ ಡರ್‌ಹಾಮ್ ಕೊಟ್ಟೆ.

ಕತ್ತೆಯ ಹೆಸರೇನು ಎಂದು ನಾನು ನಗುತ್ತಾ ಕೇಳಿದೆ. ಯಾರೂ ಕತ್ತೆಗೆ ಹೆಸರಿಡುವುದಿಲ್ಲ ಎಂದು ನಸೀರ್ ಹೀಯಾಳಿಸಿದ. ಗಾಲಿಚಕ್ರದ ಬಂಡಿಯಂತೆ ಕತ್ತೆ ಒಂದು ಜಡ ವಸ್ತು ಎಂದು ಬರ್ಬರರು ತಿಳಿದುಕೊಂಡಿರುತ್ತಾರೆ.

ನಾನು ಕತ್ತೆಯನ್ನು, ಗೌರವಿಸುತ್ತೇನೆಂದು ಶಪಥಮಾಡಿದೆ. ಅದಕ್ಕೆ ಒಂದು ಜೊತೆ ಬೂಟು ಹಾಗೂ, ಅದರ ಭಾರವನ್ನು ಕಡಿಮೆ ಮಾಡಲು ಸಮವಾಗಿ, ತೂಗಿಸುವಂತಹ ಬುಟ್ಟಿಗಳನ್ನು ಕೊಡಿಸಿದೆ. ರಾಬರ್ಟ್ ಲೂಯಿಸ್ ಸ್ಟೀವನ್‌ಸನ್‌ನ 'ಒಂದು ಕತ್ತೆಯೊಡನೆ ಪಯಣ' ಎಂಬ ರಚನೆಗೆ ಗೌರವಾರ್ಪಣೆ ಮಾಡಿ ಆ ಕತ್ತೆಯನ್ನು ಸ್ಟೀವನ್‌ಸನ್ ಎಂದು ಹೆಸರಿಸಿದೆ.

ಮಾರನೆಯ ದಿನವೇ ನಾಸೀರ್ ಮೋರಕ್ಕೋಗೆ ಹಿಂದಿರುಗಬೇಕಾದುದರಿಂದ ಆತ ನನ್ನನ್ನು ಹೆಚ್ಚು ಕಾಯಲಾರದಾದ. ಸುಮಾರು ೧೨೦ ಕಿಲೋಮೀಟರ್ ದೂರದಲ್ಲಿರುವ ಟೌನ್ ಪೈಟ್‌ಗೆ ಹೋಗಿ ಸ್ಟೀವನ್‌ಸನ್‌ನನ್ನು ಲಾಭಕ್ಕೆ ಮಾರಿ ಅಲ್ಲಿಂದ 'ಫೆಸ್'ಗೆ ಬಸ್ಸಿನಲ್ಲಿ ಹೋಗಲು ಮಾರ್ಗದರ್ಶನ ಮಾಡುವ ಒಬ್ಬ ಮಾರ್ಗದರ್ಶಕ ನನಗೆ ಬೇಕಾಗಿತ್ತು. ಕೆಲ ಸರ್ಕಾರಿ ಮಾರ್ಗದರ್ಶಕರಿರುವ 'ಇಮಿಲ್‌ಚಿಲ್'ವರೆಗೆ ನನ್ನ ಸಂಗಡವಿರಲು ಒಬ್ಬ ಸ್ಥಳೀಯ ರೈತನನ್ನು ನಾಸೀರ್ ಒಪ್ಪಿಸಿದ.

ಕೈ ಸನ್ನೆಗಳಿಂದ ಮಾತ್ರ ನಾನು ನನ್ನ ಅಭಿಪ್ರಾಯಗಳನ್ನು ತಲಪಿಸುತ್ತಿದ್ದೆ. ಆದರೂ ಅವನು ನನಗೆ ಕತ್ತೆಯನ್ನು ನಡೆಸುವ ಬಗ್ಗೆ ಬಹಳಷ್ಟು ಕಲಿಸಿದ್ದ. ಮೊದಲ ಪಾಠ; ತಥ್, ತಥ್ ಎಂದು ಛಂದೋಬದ್ಧಗತಿಯಲ್ಲಿ ಶಬ್ದ ಮಾಡು. ನೀನು ತೀವ್ರಗತಿಯಿಂದ ಉಚ್ಚರಿಸಿದಷ್ಟೂ ಕತ್ತೆ ವೇಗವಾಗಿ ಮುಂದೆ ಹೋಗುತ್ತದೆ. ಎರಡನೇ ಪಾಠ ಆಗ್ಗಾಗ್ಗೆ ('ರ ಹಮರೆ ರಾ') ನಡೆ, ಕತ್ತೆ ನಡೆ ಎಂದು ಚೀರುತ್ತಿರಬೇಕು. ಪಾಠ ಮೂರು: ವಿಶೇಷ ಸಂದರ್ಭದಲ್ಲಿ ಮಾತ್ರ ಕತ್ತೆಯ ಮೇಲೆ ಸವಾರಿ ಮಾಡಬೇಕು. ಅಥವಾ ಮೇಯಲು ಪದೇ ಪದೇ ವಿರಾಮ ಕೊಡುವ ಜವಾಬ್ದಾರಿ ಹೊರಬೇಕು.

ಒಣಗಿದ ಕೆಂಪು ಗುಲಾಬಿ ಬಣ್ಣದ ಗೋಪುರವಿರುವ ಹೋಬಳಿಯೇ ಪ್ರಧಾನವಾಗಿರುವ, ಸಿನೆಮಾ ನಿರ್ದೇಶಕನ ಹಳ್ಳಿ ಇಮಲ್‌ಚಿಲ್‌ಗೆ, ಏಳು ಘಂಟೆಗಳ ಸುರಕ್ಷಿತ ಪ್ರಯಾಣದ ಅನಂತರ ನಾವು ತಲುಪಿದೆವು.

ಆಂಗ್ಲಭಾಷೆ ಮಾತನಾಡುವ, ಲಭ್ಯವಿರುವ

ಏಕಮಾತ್ರ ಮಾರ್ಗದರ್ಶಕ ಜೈಡ್‌ನ್ನು ಮಾರನೆಯ ಬೆಳಗ್ಗೆ ಕಂಡೆ. ಸದಾಕಾಲ ಸಿಗರೇಟು ಸೇದುತ್ತಿರುವ, ಸಣಕಲ ಜೈಡ್ ಗೊಣಗುಟ್ಟುವ ಧ್ವನಿಯಲ್ಲಿ ಹೇಳಿದ, ನನಗೆ ಹಣ ಬೇಕಾಗಿದೆ. ಇಲ್ಲದಿದ್ದರೆ ನಾನು ಈ ಕೆಲಸ ಮಾಡುತ್ತಿರಲಿಲ್ಲ. ಭೂಪಟ ನೋಡಿ ನಾವು ನಮ್ಮ ಯೋಜನೆಯನ್ನು ರೂಪಿಸುವಾಗ ಯೋಚಿಸಿದ್ದಕ್ಕಿಂತ ಹೆಚ್ಚು ಉದಾರ ಬುದ್ಧಿಯುಳ್ಳವನಾಗಿರುವುದು ಸಾಧ್ಯವೇ ಇರಲಿಲ್ಲ. ಸ್ನೇಹಿತನೇ, ತಿನ್ನು, ಕುಡಿ ಎಂದು ಆತ ಶ್ರದ್ಧೆಯಿಂದ ಪ್ರಾರ್ಥಿಸಿದ. ಅವನ ಹೆಂಡತಿ ಟೀ, ಬಾದಾಮಿ ಬ್ರೆಡ್ ಹಾಗೂ ಆಪ್ರಿಕಾಟ್‌ಜಾಮ್ ತೆಗೆದುಕೊಂಡು ಬಂದಳು.

ನಮ್ಮ ಊಟದ ನಿಲ್ದಾಣವಿದ್ದ, ಒಂದು ವಿಶಾಲವಾದ ಕೊಳದವರೆಗೆ ಸ್ಟೀವನ್‌ಸನ್‌ನನ್ನು ನಡೆಸಿಕೊಂಡು ಹೋದೆವು. ನಾನು ನನ್ನ ಹೆಜ್ಜೆಗಳನ್ನು ಊರಿ ಶಾಂತಗೊಂಡಾಗ ಜೈಡ್ ಸ್ಟೀವನ್‌ಸನ್‌ನನ್ನು ನಡೆಸಿಕೊಂಡು ಹೋದೆವು. ನಾನು ನನ್ನ ಹೆಜ್ಜೆಗಳನ್ನು ಊರಿ ಶಾಂತಗೊಂಡಾಗ ಜೈಡ್ ಸ್ಟೀವನ್‌ಸನ್‌ನನ್ನು ಮೇಯಲು ಬಿಟ್ಟ. ಬಹಳ ಜೋರಾದ ಭಯಂಕರ ಪ್ರಲಾಪ ನಮ್ಮ ಶಾಂತಿಯನ್ನು ಭಂಗಗೊಳಿಸಿತು. ಸ್ಟೀವನ್‌ಸನ್ ಪ್ರಣಯ ವಿಲಾಸ ನಡೆಸಲು ಒಂದು ಹೆಣ್ಣುಕತ್ತೆಯನ್ನು ಹಿಂಬಾಲಿಸಿ ಹೋಗಿತ್ತು. ನಾಲ್ಕನೆಯ ಪಾಠ ಹೀಗಿತ್ತು. ನಿಂತಾಗ ನಿನ್ನ ಕತ್ತೆಯನ್ನು ಕಟ್ಟಿಹಾಕು. ನಾವು ಅಟ್ಟಿಸಿಕೊಂಡು ಹೋದೆವು. ಒಂದು ಘಂಟೆಯನಂತರ ಜೈಡ್ ಮತ್ತು ವಿಷಾದದಿಂದೊಡಗೂಡಿದ ಸ್ಟೀವನ್‌ಸನ್ ಪುನಃ ಬಂದರು.

ಮುಚ್ಚಂಜೆಯೊಳಗೆ 'ಆನೀ' ಹಳ್ಳಿಯನ್ನು ತಲುಪಬೇಕಾದರೆ ಬಹಳ ಸಿದ್ಧತೆ ನಡೆಸಬೇಕಾಗಿತ್ತು. ಆದರೆ ಸ್ಟೀವನ್‌ಸನ್ ಮೊದಲಿಗಿಂತ ಹೆಚ್ಚು ನಿಧಾನವಾಗಿ ನಡೆಯಲಾರಂಭಿಸಿದ. ಕಡಿದಾದ ಬೆಟ್ಟದ ಕಣಿವೆಯನ್ನು ಹತ್ತುವಾಗಲಂತೂ ಗುಡ್ಡದ ಮೇಲೆ ಹೋಗಲು ನಾನು ತಳ್ಳಬೇಕಾಗುತ್ತಿತ್ತು. ಜೈಡ್ ಮೇಲಿನಿಂದ ಅದನ್ನು ರಭಸವಾಗಿ ಎಳೆಯುತ್ತಿದ್ದ. ಅವನು ಗೊಣಗುಟ್ಟಿದ, "ನಿನ್ನ ಕತ್ತೆಗೆ ಈಗ ಹೆಣ್ಣಿನ ಸಹವಾಸ ಮಾಡುವುದು ಬೇಕಾಗಿದೆ ಅದು ಕೆಲಸ ಮಾಡಲು ಇಚ್ಛಿಸುವುದಿಲ್ಲ".

ಮಾರನೆಯ ಬೆಳಿಗ್ಗೆ ನಾವು ಹೊರಟಾಗ ಬೂದುಬಣ್ಣದ ಮಂಜು ಕಂಬಳಿ ಹೊದಿಸಿದಂತೆ ಪರ್ವತಗಳಿಗೆ ಮುಸುಕಿತ್ತು. ಆಯಾಸದಿಂದ ಪಂಚೇಂದ್ರಿಯಗಳಲ್ಲಿ ಹಾಗೂ ಉದ್ವೇಗದಲ್ಲಿ ತೀವ್ರತೆ ಉಂಟಾಯಿತು. ಊಟದಲ್ಲಿ ನಾನು ತಿಂದ ಟೊಮೇಟೋ ನಾನು ಇದುವರೆಗೆ ತಿಂದ ಎಲ್ಲ ಟೊಮೇಟೋಗಳಿಗಿಂತ ಸಿಹಿಯಾಗಿತ್ತು. ಪರ್ವತದ ಗಾಳಿ ಇದುವರೆಗೆ ಸೇವಿಸಿದ್ದ ಗಾಳಿಗಿಂತ ಹೊಚ್ಚ ಹೊಸದಾಗಿತ್ತು. ವೇಗವಾಗಿ ಹರಿಯುತ್ತಿದ್ದ ಒಂದು ತೊರೆಯಲ್ಲಿ ಪೂರ್ವ ಸಿದ್ಧತೆಯಿಲ್ಲದೆ ನಾನು ಮಾಡಿದ ಸ್ನಾನ ಹೆಚ್ಚು ಶುಭ್ರಗೊಳಿಸುವುದಾಗಿತ್ತು.

ಆ ರಾತ್ರಿ ಇನ್ನೊಂದು ಹೊಸಮನೆಯ ನೆಲದ ಮೇಲೆ ಮಲಗಿದ್ದಾಗ ಜ್ವರದ ಕಾರಣದಿಂದ ಶರೀರಕ್ಕೆ ಸುತ್ತಿಗೆಯಿಂದ ಹೊಡೆದ ಅನುಭವವಾಗುತ್ತಿತ್ತು. ಪ್ರತಿಯೊಂದು ಸ್ನಾಯುವೂ ಹೊಡೆದುಕೊಳ್ಳಲಾರಂಭಿಸಿತು. ಪ್ರಯಾಣಿಕರನ್ನು ಚಲಿಸುವ ಔಷಧಾಲಯಗಳೆಂದು ತಿಳಿಯುವ ಸ್ಥಳೀಯ ಜನರಿಗೆ ಅಸಂಖ್ಯಾತ ಮಾತ್ರೆಗಳನ್ನು ಕೊಟ್ಟ ಮೇಲೆ ನನ್ನಲ್ಲಿ ಯಾವ ಔಷಧಿಯೂ ಉಳಿದಿರಲಿಲ್ಲ.

ಅತ್ಯಂತ ಸಮೀಪವೆಂದರೂ, ವೈದ್ಯರು ೫೦ ಕಿಲೋ ಮೀಟರುಗಳಷ್ಟು ದೂರವಿದ್ದರು. ಸೂರ್ಯೋದಯದ ಹೊತ್ತಿಗೆ ನಾನು ನನ್ನ ಪ್ರಯಾಣ ಕೈಗೊಂಡೆ. ಒಂದು ಕಣಿವೆಗೆ

ಇಳಿಯುವ ಮೊದಲು, ೩೦೦ ಮೀಟರ್ ಎತ್ತರದ ಶಿಖರಕ್ಕೆ ಪ್ರಯಾಸದ ನಡುಗೆ ಮಾಡಬೇಕಾಗಿತ್ತು. ಸ್ಟೀವನ್‌ಸನ್ ಮೇಲಿದ್ದ ವಸು ಸಮತೋಲನ ಕಳೆದುಕೊಂಡು ಕೆಳಕ್ಕೆ ಬಿದ್ದ.

ಆ ರಾತ್ರಿ ನಾವು ತಂಗಿದ್ದ ಫಾರಂ ಹೌಸಿನ ಹೊಸಲಿನ ಮೇಲೆ ನಾನು ಬಿದ್ದು ಬಿಟ್ಟೆ. ನನ್ನ ಆತಿಥೇಯರಾದ ಮಧ್ಯವಯಸ್ಸಿನ ದಂಪತಿಗಳು ನನ್ನ ಮೇಲೆ ಕರುಣೆ ತೋರಿಸಿದರು. ಅವರು ನನಗೆ ಆಹಾರ ಕೊಟ್ಟರು. ಹಾಗೂ ತಣ್ಣನೆಯ ಸ್ಪಂಜ್ ಸ್ನಾನ ಮಾಡಿಸಿದರು. ಇವರಿಗೆ ಹಸನ್ ಎಂಬ ಹೆಸರಿನ ಮಗನಿದ್ದ.

ಮಾರನೆಯ ದಿನ ನಾನು ಒಂದು ಸಂದಿಗ್ಧ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಸುಮಾರು ಎರಡು ಕಿಲೋಮೀಟರ್ ನಡೆದ ನಂತರ ೨೦ ಕಿ.ಮೀಟರ್‌ಗಿಂತ ಹೆಚ್ಚು ದೂರವಿರುವ ಟೌನ್‌ಪೈಟ್‌ಗೆ ಒಂಟಿಯಾಗಿ ಹೋಗುವುದು ಅಸಾಧ್ಯವಾಗಿತ್ತು. ಒಂದು ಬಾಡಿಗೆಯ ಹೇಸರಗತ್ತೆಯನ್ನು ಪಡೆದುಕೊಳ್ಳುವ ಪರಿಹಾರವನ್ನು ಜೈಡ್ ಸೂಚಿಸಿದ. ಆತಿಥೇಯರ ಒಬ್ಬ ಸ್ನೇಹಿತ ತನ್ನ ಪ್ರಾಣಿಯನ್ನು ಬಾಡಿಗೆಗೆ ಕೊಡಲು ಒಪ್ಪಿಕೊಂಡ.

ನಾನು ಸ್ಟೀವನ್‌ಸನ್‌ನನ್ನು ಪರೀಕ್ಷಿಸಲು ಹೋದೆ. ಹಸನ್ ಅದಕ್ಕೆ ಒಂದು ಕಂಬಳಿ ಹೊದಿಸಿದ್ದ, ಹಾಗೂ ಅಶಕ್ತ ಕತ್ತೆಗೆ ಕೊಡುವ ಕುದುರೆಸೊಪ್ಪಿನಿಂದ ಮಾಡಿದ ಪಲಾವ್ ತಿನ್ನಿಸಿದ್ದ. ಸ್ಟೀವನ್‌ಸನ್‌ನನ್ನು ಕುಟುಂಬದ ಒಬ್ಬ ಸದಸ್ಯನಂತೆ ಕಾಣುತ್ತಾರೆಂದು ತಿಳಿಯಿತು. ಆದ್ದರಿಂದ ಎರಡು ಷರತ್ತುಗಳ ಮೇಲೆ ನಾನು ಅವನನ್ನು ಹಸನ್‌ಗೆ ಕೊಟ್ಟೆ. ಆ ಹುಡುಗ ಪ್ರತಿನಿತ್ಯವೂ ಅದನ್ನು ಮುದ್ದು ಮಾಡಬೇಕು. ವಿಶೇಷ ಸಂದರ್ಭದಲ್ಲಿ ಮಾತ್ರ ಹೆಣ್ಣು ಕತ್ತೆಗಳ ಜೊತೆಗೆ ಬಿಡಬೇಕು. ಸರಿ ಎಂದು ಅವನು ಕೈ ಕುಲುಕಿದ.

ಹೇಸರಗತ್ತೆಯನ್ನು ಹತ್ತುವಾಗ ನನ್ನಲ್ಲಿ ಮಿಶ್ರಭಾವನೆಗಳಿದ್ದುವು. ನನ್ನ ಮೂಲ ಉದ್ದೇಶವನ್ನು ಪೂರ್ಣಗೈದುದಕ್ಕೆ ತೃಪ್ತಿ ಸಿಕ್ಕುವುದರ ಜೊತೆಗೆ ದುಃಖವೂ ಆಯಿತು. ನಾನು ಒಬ್ಬ ನಿಷ್ಠಾವಂತ ಸ್ನೇಹಿತನನ್ನು ಕಳೆದುಕೊಳ್ಳುತ್ತಿದ್ದೆ.

ದೋಷಗಳನ್ನು ಕಾಣುವದು ಸುಲಭವಾದರೂ, ಅದನ್ನು ಸಾಧಿಸುವದು ಕಷ್ಟ. ಗುಣಗಳನ್ನು ಕಾಣುವದು ಕಷ್ಟವಾದರೂ ಸಾಧಿಸುವದು ಸುಲಭ. ಆದುದರಿಂದ ಗುಣವನ್ನೇ ಆರಸಿ ಅದನ್ನು ಪ್ರಶಂಸಿಸುವದು ಉಪಯುಕ್ತವೂ ಸುಲಭವೂ ಆಗಿದೆ.

-ಪರಮಹಂಸ

ಕ್ರೂರ ಸಮುದ್ರದಿಂದ ಪಾರಾದ ಅನುಭವ

ಕೆ. ಸುಕನ್ಯ ಭಟ್
ಮಗೀಲಾ ಹೌಸ್, ಕದ್ರಿ ರಾಕ್ ಸೈಡ್
ಮಂಗಳೂರು-೫೭೫ ೦೦೪

ಹನ್ನೊಂದು ವರ್ಷದ ಜೇಮ್ಸ್ ಲೀಡ್ಸ್ ತನ್ನ ಮನೆಯವರು ನಡೆಸುತ್ತಿದ್ದ ಇಂಗ್ಲೆಂಡ್‌ನ ಕಾರ್ನ್‌ವಲ್‌ನಲ್ಲಿನ ಹೋಟೆಲ್‌ನ ಡೈನಿಂಗ್ ಕೋಣೆಯೊಳಗೆ ಬರುತ್ತಾ, ''ನಾನು ಬೀಚಿಗೆ ಹೊರಟೆ'' ಎಂದು ದೊಡ್ಡದಾಗಿ ಹೇಳಿದ್ದ. ರವಿವಾರ ಮಧ್ಯಾಹ್ನದ ಊಟಕ್ಕೆಂದು ಬಂದಿದ್ದ ೩೮ ಜನರಿಗೆ ಊಟದ ಮೊದಲು ವೈನ್ ನೀಡುತ್ತಿದ್ದ ನಿಕ್ ಲೀಡ್ಸ್, ಕಪ್ಪು ಕೂದಲಿನ, ಹೊಳಪುಕಂಗಳ ತನ್ನ ಮಗನ ಮಾತು ಕೇಳಿ ಮುಗುಳು ನಗೆ ಬೀರಿದ್ದ.

ಮಗ ಎಲ್ಲಿಗೆ ಹೋಗುವುದಿದ್ದರೂ ತಿಳಿಸುತ್ತಿದ್ದುದರಿಂದ ಮತ್ತು ವಯಸ್ಸಿಗೆ ಮೀರಿದ ಬುದ್ಧಿವಂತಿಕೆಯನ್ನೂ ಹೊಂದಿದ್ದರಿಂದ ನಿಕ್‌ನಿಗೆ ಮಗನ ಬಗ್ಗೆ ಎಂದೂ ಅಧೈರ್ಯ ಅಥವಾ ಅಸಮಾಧಾನ ಇರಲಿಲ್ಲ. ಹಾಗಾಗಿ 'ಸಂತೋಷವಾಗಿ ಕಾಲಕಳೆದು ಬಾ' ಎಂದು ಹೇಳಿದ್ದ.

ಹೋಟೆಲ್‌ನಿಂದ ೨೦೦ ಮೀ. ದೂರದಲ್ಲಿ ಪ್ರಸಿದ್ಧವಾದ ಬೋಸ್ಸಿನಿ ಕೋವ್ ಎಂಬ ನೊರೆಯಿಂದಾವೃತವಾದ ಬೀಚ್ ಇದ್ದೆಡೆ, ನಿಕ್ ತನ್ನ ಹೋಟೆಲ್‌ನ ಕಿಟಕಿಯಿಂದಲೇ ನೋಡಿದ್ದ, ತೊಟ್ಟಿಲಿನಂತಿದ್ದ ಕಪ್ಪು ಬಂಡೆಗಳಿಂದಾವೃತವಾದ ಸಣ್ಣ ಕೊಲ್ಲಿಯ ಆಕರ್ಷಣೆ ತನಗೆಂದಿಗೂ ಸಾಕೆನಿಸದು ಎಂದು ಕೊಂಡ. ಆರ್ಥರ್ ರಾಜ ಹುಟ್ಟಿದ ಟಂಟೇಜಲ್ ಅರಮನೆ ಒಂದು ಕಿ.ಮೀ. ದೂರದಲ್ಲಿ ಇತ್ತು. ಅರಮನೆಯ ಚಿನ್ನದ ಬಣ್ಣದ ಉರುಟು ಮೋಜು ಅಲ್ಲೇ ಹತ್ತಿರದ ಹೊಲದಲ್ಲಿದ್ದ ದಿಬ್ಬದ ಕೆಳಗೆ ಹೂತು ಹೋಗಿದೆ ಎಂಬ ಕಲ್ಪಿತ ಕತೆಯೂ ಇತ್ತು.

ನಿಕ್‌ನು ಅರಮನೆಯ ಸಮೀಪದಲ್ಲಿದ್ದ ಬಂಡೆಗಳ ಮೇಲೆ ಇದ್ದಂತಹ ಹಾಳು ಬಿದ್ದ ಒಂದು ದೊಡ್ಡ ಮನೆಯನ್ನು ಕೊಂಡು ತನ್ನ ಸುಂದರಿ ಪತ್ನಿ ಲಿಜ್‌ಳ ಸಹಾಯದಿಂದ ಅದನ್ನು ಕಷ್ಟಪಟ್ಟು ಹದಿನಾಲ್ಕು ಕೋಣೆಗಳ ಹೋಟೆಲ್ ಆಗಿ ಪರಿವರ್ತಿಸಿದ್ದ.

ಅಂದು ಸೆಪ್ಟೆಂಬರ್ ೬,೧೯೯೮ ಲಿಜ್ ಅಡುಗೆ ಕೋಣೆಯಲ್ಲಿದ್ದಳು. ನಿಕ್ ಮತ್ತು ೨೩ ವರ್ಷದ ಮಗಳು ಕೇಟ್ ಹೋಟೆಲ್‌ನಲ್ಲಿದ್ದರು. ಟೆನ್ನಿಸ್ ಆಟಗಾರನಾಗಿದ್ದ ನಿಕ್, ಅಂದಿನ ಮಧ್ಯಾಹ್ನದ ಹೊತ್ತು ಟಿ.ವಿ.ಯಲ್ಲಿ ಪ್ರಸಾರವಾಗುವ ಪಂದ್ಯವನ್ನು ನೋಡಬೇಕೆಂದು ಕೊಂಡಿದ್ದ.

ಸುಮಾರು ನಾಲ್ಕೂವರೆಗಂಟೆ ಹೊತ್ತಿಗೆ ಹೆಂಡತಿ ಕಿರುಚುವುದು ನಿಕ್‌ನಿಗೆ ಕೇಳಿಸಿತು. ಕೂಡಲೇ ಹಾಲ್‌ನೊಳಗೆ ಬಂದ ನಿಕ್‌ನಿಗೆ, ಲಿಜ್‌ಳ ಮುಂದೆ ಅಳುತ್ತ ಒದ್ದೆ ಚಡ್ಡಿಯಲ್ಲಿದ್ದ ಜೇಮ್ಸ್‌ಗೆಳೆಯ ಕ್ರಿಸ್ಟೋಫರ್ ಕಂಡ.

''ಜೇಮ್ಸ್ ನೀರಿನಲ್ಲಿ ಕೊಚ್ಚಿಹೋದ, ಅವನಿಗೆ ಪೆಟ್ಟಾಗಿದೆ ಎಂದು ನನಗನಿಸುತ್ತೆ'' ಎಂದು ಬಿಕ್ಕುತ್ತ ಕ್ರಿಸ್ಟೋಫರ್ ಹೇಳಿದ್ದ.

ಗಾಬರಿಯಿಂದ ಬೀಚಿಗೆ ಹೋದಾಗ ನಿಕ್‌ನಿಗೆ ಅಲೆಗಳು ಎಂದಿಗಿಂತ ದೊಡ್ಡದಾಗಿ ಮತ್ತು ರಭಸದಿಂದ ಅಪ್ಪಳಿಸುತ್ತಿರುವುದು ಕಂಡಿತ್ತು. ಇಬ್ಬರು ಹುಡುಗರು ಆರು ಮೀ. ಎತ್ತರದ ಬಂಡೆಯನ್ನೇರಿದ್ದು, ದೊಡ್ಡ ಅಲೆ

ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಲೇಖನದ ಅನುವಾದ

ಯೊಂದು ಅವರನ್ನು ನುಂಗಿದ್ದು ಎಂಬ ವಿಷಯವನ್ನು ಕ್ರಿಸ್ಟೋಫರ್ ತಿಳಿಸಿದ್ದ. ಜೇಮ್ಸ್‌ನ ಕಾಲ ಕೆಳಗಿನ ಉಸುಕು ಜಾರಿದ್ದು, ಅಲೆಗಳು ಅವನನ್ನು ಅಟ್ಲಾಂಟಿಕ್ ಸಾಗರದೆಡೆ ನೂಕಿದ್ದು ತಿಳಿದಿತ್ತು. ಹೋಟೆಲ್‌ನಿಂದ ಓಡಿ ಬರುವಾಗಲೇ ''ಜೇಮ್ಸ್-ಜೇಮ್ಸ್'' ಎಂದು ನಿಕ್ ಕರೆಯುತ್ತಿದ್ದ. ಪಾರ್ಟಿಗಾಗಿ ಧರಿಸಿದ್ದ ಗರಿ- ಗರಿಯಾದ ಬಿಳಿ ಅಂಗಿ ಮತ್ತು ಬೊ, ಟೈ ಮತ್ತು ವೇಸ್ಟ್ ಕೋಟ್‌ನ್ನು ಬದಲಾಯಿಸಲು ಪುರುಸೊತ್ತಿಲ್ಲದೆ ಮಗನನ್ನುಳಿಸಲು ಓಡಿ ಬಂದಿದ್ದ.

ತನ್ನ ಏಳು ಮಕ್ಕಳನ್ನು ಸಮವಾಗಿ ಪ್ರೀತಿಸುತ್ತಿದ್ದ ಅವನಿಗೆ ಚಿಕ್ಕ ಮಗನ ಮೇಲೆ ಹೆಚ್ಚಿನ ಮಮತೆ ಇತ್ತು. ಒಟ್ಟಿಗೆ ಅವರಿಬ್ಬರು ಗಿಟಾರ್ ಬಾರಿಸುತ್ತಿದ್ದುದರಿಂದ, ಮತ್ತು ಸಮುದ್ರದ ಮೇಲಿದ್ದ ಪ್ರೀತಿಯಿಂದಾಗಿ ಅವರಿಬ್ಬರ ಮಧ್ಯೆ ಒಂದು ರೀತಿಯ ಆತ್ಮೀಯತೆಯೂ ಇತ್ತು.

ಕ್ರಿಸ್ಟೋಫರ್ ತೋರಿಸಿದ್ದ ಹಸಿರು ಒದ್ದೆ ಹುಲ್ಲಿನಿಂದಾವೃತವಾದ ನೂರು ಮೀಟರ್ ಬಂಡೆಯ ಬದಿಯ ದಾರಿ ಕ್ರಮಿಸುವಾಗ ತಾನು ಧರಿಸಿದ್ದ ಲೆದರ್ ಬೂಟುಗಳನ್ನ ನಿಕ್ ಶಪಿಸಿದ. ೬೦ಮೀ. ಕೆಳಗೆ ಅಪ್ಪಳಿಸುತ್ತಿದ್ದ ಸಾಗರದಲೆಗಳನ್ನು ಕಂಡಾಗ ನಿಕ್‌ನ ಹೊಟ್ಟೆ ಒಳಗೆ ಹೇಗೆ ಹೇಗೊ.... ಆಗಿತ್ತು.

ಜಾರುತ್ತಿದ್ದ ಬಂಡೆಗಳನ್ನೇರಿದ್ದ ಮತ್ತು ಅವುಗಳ ನಡುವೆ ಇದ್ದ ಕಂದಕಗಳನ್ನು ದಾಟಿದ್ದ. ಕೊನೆಗೆ ಜೇಮ್ಸ್ ಕೊಚ್ಚಿಹೋಗಿದ್ದ ಬಂಡೆಯನ್ನೇರುವಲ್ಲಿ ಸಫಲನಾಗಿದ್ದ ಕೂಡ.

ಹದಿಮೂರು ಮೀ. ಎತ್ತರ, ಎಂಟು ಮಿಾ. ಅಗಲ, ಇಪ್ಪತ್ತೈದು ಮಿಾ. ಉದ್ದವಿದ್ದ ರೈಲ್ವೆ ಸುರಂಗದಂತಿದ್ದ ಒಂದು ಗುಹೆ ಅಲ್ಲಿತ್ತು.

ತನ್ನ ಬಟ್ಟೆಗಳನ್ನು ಬಿಚ್ಚಿಡುತ್ತಾ ಮಗನ ತಲೆ ಎಲ್ಲಿಯಾದರೂ ಅಲೆಗಳ ಮಧ್ಯೆ ಕಂಡೀತೇನೊ.. ಎಂದು ಹುಡುಕಿದ ನಿಕ್. ಆದರೆ ನೀಲಿ ನೊರೆಗಳ ವಿನಹ ಅವನಿಗೇನೂ ಕಂಡಿರಲಿಲ್ಲ.

ತಂದೆಯಾದ ಅವನು ಇತರರ ಸಹಾಯ ಬರುವವರೆಗೂ ಕಾಯುವ ಹಾಗಿರಲಿಲ್ಲ. ಮಗನ ರಕ್ಷಣೆಗಾಗಿ ಏನಾದರೂ ಕೂಡಲೇ ಕ್ರಮ ಕೈಗೊಳ್ಳಬೇಕಿತ್ತು.

ಸಾಧಾರಣ ಮೈಕಟ್ಟು ನಿಕ್‌ನದಾಗಿತ್ತು. ಆದರೂ ಅವನು ಟೆನಿಸ್ ಆಟಗಾರನಾಗಿದ್ದು, ಆರೋಗ್ಯವಂತನಾಗಿದ್ದುದರಿಂದ ಐವತ್ತೆರಡು ವರ್ಷಗಳಾದ ಹಾಗೆ ಕಾಣಿಸುತ್ತಿರಲಿಲ್ಲ. ನಡುಕ ಹುಟ್ಟಿಸುವ ಸಮಯದಲ್ಲೂ ತನ್ನ ಪ್ರಯತ್ನದಲ್ಲಿ ಫಲ ದೊರಕಿಸಿಕೊಳ್ಳುವಷ್ಟು ಸಾಮರ್ಥ್ಯವೂ ಅವನಲ್ಲಿತ್ತು. ಸಹಾಯಕ್ಕಿರಲೆಂದು ಹಗ್ಗದಿಂದ ಕಬ್ಬಿಣದ ಕಂಬಕ್ಕೆ ಸಿಕ್ಕಿಸಲ್ಪಟ್ಟಿದ ತೇಲುವ ವಸ್ತು(ದೋಣಿ)ವನ್ನು-''ಇತ್ತ ತಳ್ಳು'' ಎಂದು ಕ್ರಿಸ್ಟೋಫರ್‌ನಿಗೆ ನಿಕ್ ಹೇಳಿದ. ಅದನ್ನು ಗಟ್ಟಿಯಾಗಿ ಹಿಡಿದುಕೊಂಡೇ ನೀರಿಗೆ ಧುಮುಕಿದ್ದ.

ಮಗನಂತೆ ಅವನೂ ಉತ್ತಮ ಈಜುಗಾರನಾಗಿದ್ದರೂ, ಅಲೆಗಳ ಅಪ್ಪಳಿಸುವಿಕೆಯಿಂದಾಗಿ ಅತ್ತಿತ್ತ ಎಸೆಯಲ್ಪಟ್ಟಿದ್ದ, ಕಾಲುಗಳಿಗೆ ಹಗ್ಗ ಸುತ್ತಿಕೊಂಡಂತಾಗಿ, ಕಾಲುಗಳು ಇದ್ದಕ್ಕಿದ್ದಂತೆ ಮರಗಟ್ಟಿದ್ದವು. ಒದ್ದಾಡಿ, ತನ್ನ ಕಾಲುಗಳನ್ನು ಹಗ್ಗದಿಂದ ಬಿಡಿಸಿಕೊಂಡಿದ್ದ.

ತಲೆಗೆ ಅಲೆಗಳು ಅಪ್ಪಳಿಸುತ್ತಿದ್ದುದರಿಂದ ನಿಕ್‌ನ ಶಕ್ತಿ ಕುಂದಿದಂತಾದರೂ ಅವನು, ಮಗನನ್ನುಳಿಸುವುದಕ್ಕಾಗಿ ಪ್ರಯತ್ನ ನಿಲ್ಲಿಸುವಂತಿರಲಿಲ್ಲ.

ಗುಹೆಯೊಳಗೆ ತಾನು ಹೇಗಾದರೂ ಮಾಡಿ ಸೇರಿಕೊಂಡು ಮಗನಿಗೆ ಧೈರ್ಯ

ಹೇಳುವಂತಾವರೆ ಎಂದುಕೊಂಡ. ಒಬ್ಬನೇ ಸಿಕ್ಕಿಹಾಕಿಕೊಂಡು ಹೆದರಿ ನಡುಗುವ ಮಗನಿಗಾಗಿ ಪರಿತಪಿಸಿದ.

ಮೂರು ಸಲ ಸಮುದ್ರ ನಿಕ್‌ನನ್ನು ಗುಹೆಯತ್ತ ತಳ್ಳಿತು. ಅಲ್ಲಿದ್ದ ಬಂಡೆಗಳನ್ನು ಅವನು ಹಿಡಿದುಕೊಳ್ಳಲು ಮೂರುಸಲವೂ ಪ್ರಯತ್ನಿಸಿದಾಗ, ಒದ್ದೆ ಸಾಬೂನನ್ನು ಹಿಡಿದಂತೆ ಆಯಿತೇ ವಿನಾ ಅಲ್ಲಿ ಉಳಿಯಲಾಗಲಿಲ್ಲ. ಉಸಿರು ಸಿಕ್ಕಿಕೊಂಡಂತಾಗಿ ಹೊರಬಂದಾಗ 'ಓ ದೇವರೇ ನನಗೆ ಸಹಾಯ ಮಾಡು' ಎಂದು ಪ್ರಾರ್ಥಿಸಿದ್ದ.

ಆಪತ್ಕಾಲದಲ್ಲಿ ಸಹಾಯಮಾಡುವವರಿಗೆ ಕರೆ ಕೊಟ್ಟು ಲಿಜ್‌ಳು ಬಂಡೆಗಳನ್ನಿಳಿದು ಬೀಚಿನತ್ತ ನಡೆದಿದ್ದಳು. ಕೋಪೋದ್ರಿಕ್ತವಾದ ನೀರಿನಲ್ಲಿ ಅತ್ತಿತ್ತ ಎಸೆಯಲ್ಪಡುತ್ತಿದ್ದ ಜೇಮ್ಸ್‌ನ ಬಟ್ಟೆ ಮತ್ತು ಚೀಲ ಕಂಡಳು . ಬಂಡೆಯ ಮೇಲೆ ಗಂಡನ ಒಂದು ಶೂ ಮತ್ತು ವಾಚೂ ಅವಳಿಗೆ ಕಾಣಿಸಿತ್ತು.

ಅವಳು ಗಟ್ಟಿ ಮನಸ್ಸಿನ ಆಶಾವಾದಿ ಮಹಿಳೆಯಾಗಿದ್ದರೂ ಆ ಸಮಯದಲ್ಲಿ ಧೈರ್ಯಗೆಟ್ಟಳು. ಆಗ ಅವಳನ್ನು ಎರಡು ತೋಳುಗಳು ಬಳಸಿದುವು. ಅವು ಮಗಳ ಕೇಟಳದ್ದಾಗಿದ್ದುವು. ಇಬ್ಬರೂ ಒಬ್ಬರನ್ನೊಬ್ಬರು ತಬ್ಬಿ ಅತ್ತರು.

ಇದ್ದಕ್ಕಿದ್ದಂತೆ ಒಂದು ಅಲೆ ನಿಕ್‌ನನ್ನು ಗುಹೆಯೊಳಗೆ ನೂಕಿತ್ತು. ಬಲ ಬದಿಯಲ್ಲೊಂದು ನುಣುಪಾದ ಬಂಡೆಯಿದ್ದುದರಿಂದ ಅವನು ಅದನ್ನೇ ಪ್ರಯಾಸದಿಂದ ಹಿಡಿದುಕೊಂಡಿದ್ದನು. ಪುನಃ ಅಲ್ಲಿಂದ ನೀರು, ಬೇರೆಡೆ ನೂಕುವುದನ್ನು ತಡೆದಿದ್ದವು. ಅಲ್ಲೇ ಉಳಿದನು.

ಕೊನೆಗೂ ಒಂದು ಹಿಡಿಯಲು ಸಿಕ್ಕಿತ್ತು. ಅವನಾಗಲೇ ಗುಹೆಯ ಅರ್ಧಕ್ಕಿಂತಲೂ ಹೆಚ್ಚು ಒಳಗೆ ಹೋಗಿಯಾಗಿತ್ತು. ಒಳಗೆ ಮತ್ತೊಂದು ಬಂಡೆ ಅಡ್ಡ ಇದ್ದು, ಒಳ ಕೋಣೆಯಂತೆ ಇಬ್ಭಾಗಿಸಿತ್ತು.

ಹೆಗಲಿನವರೆಗೆ ನೀರಿನಲ್ಲಿದ್ದ ನಿಕ್ ಗಾಳಿಗಾಗಿ ಪ್ರಯತ್ನಿಸಿ, ಉಸಿರಾಡುತ್ತ 'ಮುಂದೇನು?' ಎಂದು ಆಶ್ಚರ್ಯಪಟ್ಟಿದ್ದ.

ಆಗ ಅವನ ತಲೆಯ ಮೇಲಿದ್ದ ಜಾಗೆಯಿಂದ "ಡ್ಯಾಡಿ ನಾನು ನಿಮ್ಮನ್ನು ಪ್ರೀತಿಸುತ್ತೇನೆ ಡ್ಯಾಡಿ"-ಎಂದದ್ದು ಕೇಳಿಸಿತ್ತು.

ಕತ್ತಲಲ್ಲಿ ನಿಕ್ ಹುಡುಕಾಡಿದಾಗ ಗುಹೆಯ ಮೇಲ್ಛಾವಣಿಗೆಯಿಂದ ಜೇಮ್ಸ್ ಇತ್ತ ತಿರುಗಿ 'ಡ್ಯಾಡಿ' ಎಂದಿದ್ದ. ಜೋರಾಗಿ ಕಿರುಚಿದ್ದ.

ತಂದೆ ಇದ್ದ ಜಾಗೆಯಿಂದ ೬ಮೀ. ಎತ್ತರದಲ್ಲಿದ್ದ ಚಿಕ್ಕ ಕಿಂಡಿಯ ಬಳಿ ಅವನಿದ್ದ ತನ್ನ ಬೆರಳುಗಳ ತುದಿಯಿಂದ ಮೇಲ್ಛಾವಣಿಯನ್ನು ಹಿಡಿದು ಜೇಮ್ಸ್ ನೇತಾಡುತ್ತಿದ್ದ.

ಬರ್ಫಿನಷ್ಟು ನುಣುಪಾದ ಬಂಡೆಯೇರುವುದು ಸುಲಭವಾಗಿರಲಿಲ್ಲದಾಗಿದ್ದರೂ ನಿಕ್ ಜೇಮ್ಸ್ ಇದ್ದ ಕಿಂಡಿಯ ಕಡೆ ತೆವಳಿದ್ದ ಮತ್ತು ಜೇಮ್ಸ್‌ನ ಹಿಂದೆ ಸೇರಿಕೊಂಡಿದ್ದ.

ಮಗನನ್ನು ತೋಳುಗಳಿಂದ ಬಳಸಿ ಸಾಂತ್ವನ ಹೇಳುತ್ತ ಧೈರ್ಯ ತುಂಬಿದ್ದ.

ನಿಕ್‌ನ ಜೀವನದ ಅತಿ ಅಮೂಲ್ಯವಾದ ಹೊತ್ತು ಅದಾಗಿತ್ತು. "ನಾನೂ ನಿನ್ನನ್ನು ಪ್ರೀತಿಸುತ್ತೇನೆ" ಎಂದು ಅವನೆಂದಿದ್ದ. "ನಿನ್ನನ್ನು ಕಳೆದೇಕೊಂಡೆ ಎಂದು ನಾನು ತಿಳಿದಿದ್ದೆ" -ಎಂದು ಮಗನಿಗೆ ಹೇಳಿದ್ದ.

ಸಂಜೆ ಐದು ಕಾಲರ ಹೊತ್ತಿಗೆ ಅಂದರೆ ಜೇಮ್ಸ್ ಲೀಡ್ಸ್ ಸಾಗರದಲ್ಲಿ ಸಿಕ್ಕಿಹಾಕಿಕೊಂಡನಂತರ, ಕರಾವಳಿಯ ಕಾವಲು ಪಡೆಯವನಾದ ಕೆನ್‌ರಿಚಾರ್ಡ್ಸ್ ಬಂಡೆಯ

ಮೇಲೆ ನಿಂತಿದ್ದ ಲಿಜ್‌ಳನ್ನು ಸೇರಿಕೊಂಡಿದ್ದ.

''ಅವರು ಗುಹೆಯೊಳಿಗಿರಬಹುದು'' -ಲಿಜ್‌ಳೆಂದಿದ್ದಳು ಮತ್ತು ಹಾಗೇ ಆಗಿರಲಿ ಎಂದು ಪ್ರಾರ್ಥಿಸಿದ್ದಳು ಕೂಡ.

''ನಾವು ಅವರನ್ನು ಅಲ್ಲಿಂದ ಕಾಪಾಡುವ ಎಲ್ಲ ಪ್ರಯತ್ನಗಳನ್ನು ಮಾಡುತ್ತೇವೆ'' -ಎಂದವನು ಅವಳಿಗೆ ಧೈರ್ಯ ಹೇಳಿದ್ದ.

ಎರಡು ಹೆಲಿಕಾಪ್ಟರುಗಳು ಮತ್ತು ಎರಡು ಜೀವ ಉಳಿಸುವ ದೋಣಿಗಳಾಗಲೇ ಹೊರಟಾಗಿತ್ತು.

ಹೆಲಿಕಾಪ್ಟರಿನಿಂದಿಳಿಯುವ ಪ್ರಯತ್ನ ಮಾಡುತ್ತಿದ್ದವರು ಮತ್ತು ದೋಣಿಯಲ್ಲಿದ್ದ ಮೂರು ಗುಂಪಿನವರು ಹಗ್ಗಗಳನ್ನು ಮತ್ತು ಲೈಟುಗಳನ್ನು ಬಂಡೆಯ ಮೇಲಿಂದ ಕೆಳಗಿಳಿಸುತ್ತಿದ್ದರು.

ಮೂರು ವರ್ಷಗಳ ಹಿಂದೆ ಅಟ್ಲಾಂಟಿಕ್ ಸಾಗರವು ಇಬ್ಬರು ಸರ್ಫರ್‌ಗಳನ್ನು ನುಂಗಿತ್ತು. ೨೦೦ ಮೀ. ದೂರದಲ್ಲಿ, ಸುಮಾರು ಮರಳ ದಿಬ್ಬಗಳೂ ಇದ್ದುವು. ಅವುಗಳಿಂದಾಗುವ ಅಪಾಯವೆಂದರೆ, ಪ್ರತಿ ಸಲವೂ ನಾಲ್ಕರಿಂದ ಐದು ಮೀಟರ್ ಉದ್ದದಷ್ಟು ಅಲೆಗಳು ಆ ದಿಬ್ಬಗಳಿಗೆ ಬಡಿದಂತಾಗಿ ಮತ್ತೂ ಐದು ಮೀಟರ್ ಎತ್ತರವಾಗಿಬಿಡುತ್ತಿತ್ತು. ಆರು ನಿಮಿಷಗಳಿಗೊಂದಾವರ್ತಿ ದೊಡ್ಡ ಅಲೆಗಳು ಬಂದಪ್ಪಳಿಸುತ್ತಿದ್ದುವು. ಆರೂವರೆ ಹೊತ್ತಿಗೆ ಅತಿ ಭಯಂಕರವಾಗುವ ಸಾಧ್ಯತೆಯೂ ಇದ್ದಿತ್ತು.

''ಜೇಮ್ಸ್ ಅಲ್ಲಿ ಹೆಲಿಕಾಪ್ಟರ್'' ! ಎಂದು ನಿಕ್ ಖುಷಿಪಟ್ಟಿದ್ದ. ನಮ್ಮನ್ನು ಕರೆದೊಯ್ಯಲು ಅವರು ಬಂದಿದ್ದಾರೆ'' ಎಂದಿದ್ದ.

ಮಗನ ಹಿಂದಿದ್ದ ಜಾಗದಲ್ಲಿ ಹೇಗೋ ಮಾಡಿ ಸೇರಿದ್ದ ನಿಕ್. ಮಗನ ಅಧೈರ್ಯ ಹೋಗಲಾಡಿಸುವ ಪ್ರಯತ್ನ ಮಾಡುತ್ತಿದ್ದ.

''ಆದರೆ ಗುಹೆ ಪೂರ್ತಿ ನೀರಿನಿಂದ ತುಂಬಿ ಹೋದರೆ, ನಾವು , ನಮ್ಮನ್ನು ಕಾಪಾಡಲು ಯಾರಾದರೂ ಬರುವ ಮುನ್ನವೇ ಮುಳುಗಿ ಬಿಡುತ್ತೇವೆ''- ಎಂಬ ಕಟು ಸತ್ಯವನ್ನು ಮಗನಿಂದ ಮುಚ್ಚಿಟ್ಟಿದ್ದ. ನೀರೂ ಏರುತ್ತಿದ್ದಿತು.

ಬಂಡೆಯ ಮೇಲೆ ಚಿಮಿಣಿಯಂತಿದ್ದ ಕಂಡಿಯಿಂದ ಬೆಳಕಿನ ಬೆಳ್ಳಿಗೆರೆ ಕಾಣಿಸಿದಾಗ ಆ ಜಾಗೆಗೆ ಮಗನನ್ನು ಹತ್ತಿಸುವ ಬಗ್ಗೆ ಯೋಚಿಸಿದ್ದ ಅವರ ತಲೆಯ ಮೇಲಿಂದ ಎಂಜಿನ್‌ಗಳ ಸದ್ದೂ ಕೇಳಿಸುತ್ತಿತ್ತು.

ನಿಕ್ ಎಷ್ಟೇ ಪ್ರಯತ್ನಿಸಿದರೂ ಆ ಚಿಮಿಣಿ ಬಾಯಿಗೆ ಸಿಕ್ಕಿಹಾಕಿಕೊಂಡಿದ್ದ ತೇಲು ಗುಂಡನ್ನು ಕದಲಿಸಲಾಗಲೇ ಇಲ್ಲ.

ಗುಹೆ ಒಳಗೆ ನುಗ್ಗುತ್ತಿದ್ದ ಅಲೆಗಳ ಸದ್ದು ಮತ್ತು ಗಾಳಿ ಹೊಡೆತ ಬದಲಾದದ್ದು ಅವನ ಕಿವಿಗಳಿಗೆ ಗೊತ್ತಾಗಿ ಹೋಗಿತ್ತು. ಬಲಕ್ಕೆ ನೋಡಿದಾಗ, ಅವರನ್ನು ನುಂಗುವಷ್ಟು ದೊಡ್ಡ ಅಲೆ ಅವರತ್ತ ನುಗ್ಗಿ ಬರುವುದು ಕಂಡಿತು. ಮಗನನ್ನುಳಿಸಲಿಕ್ಕಾಗಿ ಆ ಜಾಗೆಯಲ್ಲಿ ಅಡ್ಡ ನಿಂತ . ಮೈಬಾಗಿಸುತ್ತ ಹೊಡೆತ ಮಗನಿಗಾಗದಂತೆ ತಡೆದ. ಉಸಿರೆಳೆದು ಕೊಂಡಿದ್ದ.ಕಿವಿ ಕಿವುಡಾಗುವಂತೆ ಸಪ್ಪಳ ಮಾಡಿದ್ದುವು ಆ ಅಲೆಗಳು ! ಅಲೆಗಳ ಹೊಡೆತ ನಿಕ್‌ನನ್ನು ನಿಷ್ಕ್ರಿಯನನ್ನಾಗಿಸಿತ್ತು. ಆದರೂ ಮಗನ ಬಳಿ ಸೇರಿಕೊಂಡಿದ್ದ. ಲೈಫ್ ಬೋಟ್ ಒಂದು ಗುಹೆಯ ದ್ವಾರದಲ್ಲಿದ್ದುದು ಅವನಿಗೆ ಕಂಡಿತು.

''ಕೈ ಬೀಸುತ್ತಾ ನಾವಿಲ್ಲಿದ್ದೇವೆ''-ಎಂದು ಕಿರುಚಿದ್ದ. ದೊಡ್ಡ ಅಲೆಯೊಂದು ಅಲ್ಲಿ ಎದ್ದಂತಾಗಿ ದೋಣಿಯೊಳಗಿದ್ದ ಇಬ್ಬರು ಕೆಳ ಬಿದ್ದಿದ್ದರು. ತಂದೆ-ಮಗನ ಆಶಾಕಿರಣವೇ ಅದನ್ನು ಕಂಡು ನಂದಿದಂತಾಗಿತ್ತು. ಇಂಜಿನ್

ನಡೆಸುವ ಪ್ರಯತ್ನವನ್ನು ಇತರರು ಮಾಡುತ್ತಲೇ ಇರುವುದೂ ಕಂಡಿತ್ತು.

ಕತ್ತಲಾಗುತ್ತಿತ್ತು. ಕಾಪಾಡುವವರೂ ಎಲ್ಲಿಯೋ ಸಿಕ್ಕಿಹಾಕಿಕೊಂಡಿದ್ದರು. ಹೊರಗಿಂದ ಮತ್ತೊಂದು ಲೈಫ್‌ಬೋಟ್ ಬರುವ ಸದ್ದೂ, ಅವರು ಹಾಕುತ್ತಿದ್ದ ಬೆಳಕೂ ಕಂಡಿತ್ತು. ಆದರೆ ಅಲೆಗಳ ಅಬ್ಬರ-ಉಬ್ಬರ ಇಳಿಯುವವರೆಗೆ ಏನೂ ಸಾಧ್ಯವಿರಲಿಲ್ಲ. ''ಯಾವಾಗ ಸಾಧ್ಯವಾದೀತೊ? ಹೇಗೆ ನಾವು ಹೊರ ಹೋಗುತ್ತೇವೊ?'' ಎಂದು ನಿಕ್ ಯೋಚಿಸಿದ್ದ.

★ ★ ★

ಕಡಿದಾದ ಬಂಡೆಯ ಮೇಲಿದ್ದ ಲಿಜ್‌ಳಿಗೆ ಗುಹೆಯೊಳಗೆ ಇಳಿಯಲು ಕಾವಲು ಪಡೆಯವರು ಹಗ್ಗದಲ್ಲಿ ಪ್ರಯತ್ನಿಸುವುದು ಕಂಡಿತ್ತು. ಒಬ್ಬ ಕೆಳಗಿದ್ದವನಿಗೆ, ತೋರು ಬೆರಳಿನ ಸನ್ನೆ ಮಾಡಿ ತಲೆ ಅಲ್ಲಾಡಿಸಿದಾಗ ನಡುಗಿ ಹೋಗಿದ್ದಳು.

ಕೆನ್ ರಿಚಾರ್ಡ್ಸ್-ಅವಳಿಗೆ ಮೇಲೆ ಹೋಗಿ ಅಪಾಯದಿಂದ ಪಾರಾಗುವಂತೆ ತಿಳಿಸಿದ್ದ. ಹೆಬ್ಬೆರಳು ತೋರಿ ಮಾಡಿದ್ದ ಸನ್ನೆಯ ಅರ್ಥ ತಪ್ಪು ತಿಳಿದ ಅವಳು ಅವರಿಬ್ಬರನ್ನು ತಾನೆಂದಿಗೂ ನೋಡುವುದು ಸಾಧ್ಯವಿಲ್ಲವೆಂದು ತಿಳಿದು ಕೊಂಡು ಹೊರಟು ಬಿಟ್ಟಿದ್ದಳು.

ಮಗುಚಿದ ದೋಣಿಗೆ ಬೆಂಕಿ ಹತ್ತಿ, ಎಣ್ಣೆ ಎಲ್ಲೆಡೆ ಹರಡಿ ಕೊಂಡಿತ್ತು. ವಾಸನೆ, ಉಸಿರು ಗಟ್ಟಿಸುತ್ತಿತ್ತು. ಅಲೆಗಳ ಸತತ ಹೊಡೆತವೂ ಸೇರಿ ಕೆಳ ಬಿದ್ದಿದ್ದ ಅಲ್ಲಿದ್ದ, ಕೊಚ್ಚಿ ಬಂದಿದ್ದ ಮರ, ಅವನಿಗೆ ತಗುಲಿ ಗಾಯಗಳಾದುವು. ಮೈ ಎಲ್ಲಾ ಪರಚಿಕೊಂಡಂತಾಗಿ ತತ್ತರಿಸಿದ್ದ.

''ನಾವಿಲ್ಲಿಂದ ಪಾರಾಗಲು ಸಾಧ್ಯವೇ ಡ್ಯಾಡಿ?''-ಎಂದಿದ್ದ ಜೇಮ್ಸ್.'' ಹೌದು, ನಾವಿಲ್ಲಿಂದ ಪಾರಾಗುತ್ತೇವೆ. ಗಟ್ಟಿಯಾಗಿ ಹಿಡಿದುಕೊ. ಕೈ ಬಿಡಬೇಡ''-ಎಂದು ನಿಕ್ ಮಗನಿಗೆ ಹೇಳಿದ್ದ.

ಪುನಃ ಕೆಳಗೆಸೆಯಲ್ಪಟ್ಟ ನಿಕ್‌ನ ಎಡ ತೋಳು ನೇತಾಡುತ್ತಿತ್ತು. ಹೆಗಲಿನ ಮೂಳೆ, ಪಿಂಗ್-ಪಾಂಗ್ ಚಂಡಿನಂತೆ ಪುಡಿಯಾಗಿತ್ತು ಮತ್ತು ಅವನ ಶಕ್ತಿಯೇ ಕುಂದಿಹೋಗಿತ್ತು.

''ಜೇಮ್ಸ್-ಇನ್ನು ನಿನ್ನನ್ನು ನೀನೇ ನೋಡಿಕೊಳ್ಳಬೇಕು'', ಎಂದು ಜೋರಾಗಿ ಹೇಳಿದ್ದ. ಹೆದರಿದ ಜೇಮ್ಸ್ ಕತ್ತಲಲ್ಲೆ ಸಹಾಯಕ್ಕಾಗಿ ಕಿರುಚಿದ್ದ-''ನನ್ನ ತಂದೆ ಸಾಯುತ್ತಿದ್ದಾರೆ. ನನ್ನ ತಂದೆ ಸಾಯುತ್ತಿದ್ದಾರೆ'' ಎಂದು.

ಇದ್ದಕ್ಕಿದ್ದಂತೆ ಸರ್ಫ್‌ನ ಗದ್ದಲದಲ್ಲಿಯೂ -ಸಹಾಯ ಬರುತ್ತಿದೆ ಹೆದರಬೇಡ'' ಎಂದು ಲೈಫ್ ಬೋಟ್‌ನ ಮೈಕ್ ಎಡ್‌ಕಿನ್ಸ್ ಕಿರುಚುತ್ತಾ ಹೇಳಿದ್ದ. ಇನ್ನೊಬ್ಬ ಕೆವಿನ್ ಡಿಂಗಲ್‌ನಂತೂ ಗುಹೆಯ ಚಿಕ್ಕ ಬಾಯಿಯೊಳ ನುಸುಳಿದ್ದ. ಅವರ ''ಕಡೆ ಬರುವ ಪ್ರಯತ್ನದಲ್ಲಿದ್ದ. ಅಷ್ಟರಲ್ಲೇ ದೈತ್ಯಾಕಾರದ ಅಲೆಯೊಂದು ಗುಹೆಯ ತೀರಾ ಒಳಕ್ಕೆ ಅವರನ್ನು ತಳ್ಳಿತ್ತು.

ಜೇಮ್ಸ್‌ನ ತಲೆಗೆ ಪೆಟ್ಟಾಗಿತ್ತು. ಜತೆಗೆ ಅವನ ಮೂಳೆ ಮುರಿದಿದ್ದರಿಂದ ನೋವು ಅಧಿಕವಾಗಿತ್ತು. ತಲೆ ಬಾತಿತ್ತು. ಆದರೂ ತಂದೆಗಿಂತ ಅವನ ಸ್ಥಿತಿ ಉತ್ತಮವಾಗಿತ್ತು. ನಿಷ್ಕ್ರಿಯವಾಗಿದ್ದ ತೋಳನ್ನು ನೇತಾಡಿಸುತ್ತ ನಡುಗುತ್ತ ನಿಕ್ ಚಿಂತಾಜನಕ ಸ್ಥಿತಿಯಲ್ಲಿದ್ದ.

ಕೂಡಲೇ ತಮ್ಮಿಬ್ಬರನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ತನ್ನ ಮೇಲಿರುವುದು ತಿಳಿದುಹೋಯಿತು.

''ಅವನನ್ನು ಬೆಚ್ಚಗಿಡು ಮತ್ತು ನಿದ್ರಿಸ

ದಂತೆ ನೋಡಿಕೊ-ಎಂದೊಂದು ಮಾತೂ ಹೊರಗಿಂದ ಕೇಳಿಸಿತ್ತು. ಮುಂದೆ ಒಂದು ಗಂಟೆಯವರೆಗೆ ಜೇಮ್ಸ್ ಧೀರ ತಂದೆಯನ್ನು ನೋಡಿಕೊಂಡಿದ್ದ.

ನಿಕ್‌ನನ್ನು ಎಚ್ಚರದಿಂದಿರಿಸಲು ತಾನು ಮಾತನಾಡಿಸುತ್ತ ಇರಬೇಕು. ಇಲ್ಲದಿದ್ದರೆ ಅವನ ಸಾವು ನಿಶ್ಚಿತ -ಎಂದು ಅವನಿಗೆ ತಿಳಿದಿತ್ತು.

''ನಾವು ಗುರಿ ಮುಟ್ಟುತ್ತೇವೆ''. ಡ್ಯಾಡ್ ಎಂದು ನಡುಗುತ್ತ, ಚಳಿಯಿಂದಾಗಿ ಹಲ್ಲು ಕಡಿಯುತ್ತ ಹೇಳಿದ್ಧ. ಅಲೆಗಳ ಅಬ್ಬರ ಇಳಿಯುವುದಕ್ಕಾಗಿ ಕಾದ.

ಪುನಃ ಹೊರಗಿಂದ ಬೆಳಕು ಕಂಡಾಗ ತಂದೆಯನ್ನು ಹುರಿದುಂಬಿಸುತ್ತ, ಜೋರು ಮಾಡುತ್ತ ಬೇಡುತ್ತಾ...''ಎಚ್ಚರದಿಂದಿರಿ ಡ್ಯಾಡ್. ನಿದ್ರಿಸಬೇಡಿ''-ಎಂದು ಹೇಳುತ್ತ ನೋಡಿಕೊಂಡಿದ್ದ. ರಾತ್ರೆ ಎಂಟೂ ಐವತ್ತು ಆದಾಗಲೂ ಅಲ್ಲಿಯ ಅಲೆಗಳ ಅಬ್ಬರದೊಡನೆ ಸೆಣಸುವುದು ಪ್ರಾಣಾಂತಿಕವಾಗಿತ್ತು.

ಕತ್ತಲಲ್ಲಿ ಕಾಣೆಯಾಗಿದ್ದ ಇಬ್ಬರು ದೋಣಿಯಲ್ಲಿದ್ದವರು ಕಾವಲು ಪಡೆಯ ಸಿಬ್ಬಂದಿಗಳೊಡನೆ ಹೊರ ಬಂದರು ಸ್ವಲ್ಪ ಹೊತ್ತಾದ ಬಳಿಕ ಒಂದು ಎತ್ತರದ, ಮತ್ತೊಂದು ಚಿಕ್ಕದಾದ ಆಕೃತಿಗಳು ಬಗ್ಗಿಕೊಂಡು ಸರ್ಚ್ ಲೈಟ್‌ಗಳ ಬೆಳಕಿನಲ್ಲಿ ಹೊರಬಂದುವು.

ಐದು ಗಂಟೆಗಳು ನೀರಿನಲ್ಲಿದ್ದ ನಿಕ್ ಮತ್ತು ಜೇಮ್ಸ್ ಲೀಡ್ಸ್ ಬಿಗಿಯಾಗಿ ಒಬ್ಬರನ್ನೊಬ್ಬರು ತಬ್ಬಿಕೊಂಡರು. ಅವರಿಬ್ಬರಿಗೂ ತಿಳಿದಿತ್ತು. ತಂದೆ, ಮಗನಿಗಾಗಿ ಮತ್ತು ಮಗ, ತಂದೆಗಾಗಿ ಇದಕ್ಕಿಂತ ಹೆಚ್ಚೇನನ್ನೂ ಮಾಡಲು ಸಾಧ್ಯವಿಲ್ಲ ಎಂದು ! ಅವರಿಬ್ಬರೂ ಒಬ್ಬರನ್ನೊಬ್ಬರು ಕಾಪಾಡಿಕೊಂಡಿದ್ದರು.

ಜೇಮ್ಸ್ ಬಹು ಬೇಗನೆ ಪೂರ್ಣ ಗುಣಮುಖನಾದ. ನಿಕ್ ಮಾತ್ರ ಇನ್ನೂ ಚೇತರಿಸಿಕೊಳ್ಳುತ್ತಿದ್ದಾನೆ.

ಪ್ರವಾದಿಗಳು ಪ್ರವರ್ತಿಸಿದ ಯಹೂದ್ಯ ಮತ ಮತ್ತು ಜೀಸಸ್ ಕ್ರೈಸ್ಟ್ ಬೋಧಿಸಿದ ಕ್ರಿಶ್ಚಿಯನ್ ಮತ ಇವುಗಳಿಂದ ತದನಂತರದ ಎಲ್ಲ ಪ್ರಕ್ಷಿಪ್ತಗಳನ್ನೂ-ವಿಶೇಷತಃ ಪುರೋಹಿತರು ಸೇರಿಸಿದಂಥವನ್ನು ತೊಡೆದು ಹಾಕಿದ್ದಾದರೆ ಉಳಿಯುವ ತಿರುಳು ಮಾನವ ಸಮುದಾಯದ ಸಕಲ ಸಾಮಾಜಿಕ ವ್ಯಾಧಿಗಳನ್ನೂ ಗುಣಪಡಿಸಬಲ್ಲದು.

-ಐನ್‌ಸ್ಟೈನ್

ಜ್ಞಾನವಂತರಷ್ಟೇ ಪಂಡಿತರೆನಿಸುವುದಿಲ್ಲ. ತಮ್ಮ ಜ್ಞಾನವನ್ನು ಕ್ರಿಯೆಯಲ್ಲಿ ತೊಡಗಿಸಬಲ್ಲ ಪೌರುಷವಂತರು ಮಾತ್ರ ಪಂಡಿತರೆನಿಸುವರು.

-ಮಹಾಭಾರತ

ಪುಸ್ತಕ ಪರಿಚಯ ಮತ್ತು ಪುಸ್ತಕ ವಿಮರ್ಶೆ

ಗಡಿಯಾರದ ಕಥೆ: ಎಂ.ಎಸ್. ಚಂದ್ರಶೇಖರ ಅಯ್ಯರ್; ಮೊದಲ ಆವೃತ್ತಿ ೨೦೦೦; ಪುಟಗಳು ೬೪, ಡೆಮಿ ೧/೮, ಬೆಲೆ - ರೂ.೨೦, ಪ್ರಕಾಶಕರು : ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧.

ನಮ್ಮ ನಿತ್ಯಜೀವನದಲ್ಲಿ ಭಾಷಾ ಮಾಧ್ಯಮದ ಮೂಲಕ ಬಳಸುವ ಈಗ, ಬಳಿಕ, ಮೊದಲು, ಅನಂತರ, ಹಿಂದು, ಮುಂದು ಮುಂತಾದ ಮಾತುಗಳು 'ಕಾಲ' ಎಂಬ ಪರಿಕಲ್ಪನೆಯನ್ನು ಆಧರಿಸಿರುವಂಥವು. ಎರಡು ಕ್ರಮಾಗತ ಘಟನೆಗಳ ನಡುವಿನ ಅವಧಿಯನ್ನು ಕಾಲ ಎಂದು ಹೇಳುವುದಿದೆ. ಮಾನವೇತಿಹಾಸದ ವಿವಿಧ ಮಜಲುಗಳಲ್ಲಿ ಕಾಲ ಸಂದ ಅವಧಿಯನ್ನು ಅಳೆಯಲು ಮಾನವ ಕಂಡು ಕೊಂಡ ಮತ್ತು ಉಪಜ್ಞಿಸಿದ ಹಲವಾರು ಸಾಧನಗಳ ಪೈಕಿ ಗಡಿಯಾರ ಎಂಬುದು ಮಹತ್ತ್ವದ ಸ್ಥಾನ ಪಡೆದು ಕೊಂಡಿದೆ. ಸಹಜ ನಿಸರ್ಗವಿದ್ಯಮಾನಗಳೆನಿಸುವ ಸೂರ್ಯೋದಯ-ಸೂರ್ಯಾಸ್ತಗಳು , ಚಂದ್ರೋದಯ-ಚಂದ್ರಾಸ್ತಗಳು, ಅವು ಆಕಾಶರಂಗಭೂಮಿಯ ಮೇಲೆ ಛಾಯಾಧಾರಿತವಾಗಿ ಘಟಿಸುವ ಸ್ಥಳಗಳು, ಇತ್ಯಾದಿಗಳು ಮಾನವನಿಗೆ ನಿಸರ್ಗಗಡಿಯಾರಗಳು ಎಂಬ ಅನುಭವವನ್ನು ತಂದುಕೊಟ್ಟವು. ಚಿಂತನೆ, ಆಲೋಚನಾ ಪ್ರವೃತ್ತಿಗಳನ್ನು ಮೈಗೂಡಿಸಿಕೊಂಡ ಮಾನವ ಕಾಲಮಾಪನ ಯಂತ್ರಗಳನ್ನು ಅರ್ಥಾತ್, ಗಡಿಯಾರಗಳ ನಿರ್ಮಾಣದಲ್ಲಿನ ವಿವಿಧ ಕಾಲಾನುಗುಣ ಪರಿಷ್ಕರಣೆಗಳನ್ನು ನಡೆಸಿ, ಗಡಿಯಾರಗಳು ತನ್ನ ಜೀವನದಲ್ಲಿ ಅತ್ಯಂತ ಅವಿಭಾಜ್ಯ ಭಾಗಗಳೆನಿಸುವಷ್ಟರ ಮಟ್ಟಿಗೆ ಅವುಗಳಿಗೆ ಶರಣು ಹೋಗಿದ್ದಾನೆ. ಅಂದಿನಿಂದ ಇಂದಿನ ತನಕದ ಗಡಿಯಾರದ ಉಗಮ, ಬೆಳವಣಿಗೆ, ಭವಿಷ್ಯ ಮೊದಲಾದವುಗಳನ್ನುಕುರಿತ ಸಂಕ್ಷಿಪ್ತ ನಿರೂಪಣೆಯೇ ಗಡಿಯಾರದ ಕತೆ.

ಲೇಖಕರು ಮೂಲತಃ ಗಡಿಯಾರ ತಂತ್ರಜ್ಞಾನ ಪ್ರವೀಣರು. ಇವರದು ಗಡಿಯಾರಗಳೊಂದಿಗಿನ ಸುದೀರ್ಘ ಸಂಬಂಧ. ಗಡಿಯಾರ ಕುರಿತಂತೆ ಅನೇಕ ಭಾಷಣಗಳನ್ನೂ ಮಾಡಿದ್ದಾರೆ ;ಲೇಖನಗಳನ್ನೂ ಬರೆದಿದ್ದಾರೆ. ಕಾಲ, ಕಾಲಗಣನೆ, ಪ್ರಾಚೀನ ಗಡಿಯಾರಗಳೆನಿಸುವ ನೆರಳು ಗಡಿಯಾರ, ಜಲಗಡಿಯಾರ ಮುಂತಾದವುಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ಅವುಗಳ ಇತಿಹಾಸವನ್ನೂ.ಕೊಂಚಮಟ್ಟಿಗೆ ಪ್ರಸ್ತಾಪಿಸಿದ್ದಾರೆ. ಗಡಿಯಾರದ ಕಥೆ ಎಂಬುದು ವಿಜ್ಞಾನ-ತಂತ್ರಜ್ಞಾನ ಸಂಬಂಧಿ ಪುಸ್ತಕವಾದ್ದರಿಂದ ಅಲ್ಲಿ ಬರುವ ಶಬ್ದಗಳು ಕೇವಲ ಸಾಮಾನ್ಯ ಶಬ್ದಗಳಾಗಿರದೆ ಅವುಗಳ ನಿರ್ದಿಷ್ಟ ಪಾರಿಭಾಷಿಕ ಶಬ್ದಗಳಾಗಿರಬೇಕಾದ್ದು ಅಪೇಕ್ಷಣೀಯ. ಭೂಮಿಯ ತಿರುಗುವಿಕೆ (ಪುಟ೭) ಎಂಬ ಶಬ್ದಗಳು ಭೂಮಿಯ ಯಾವ ಚಲನೆಯನ್ನು(ಆವರ್ತನೆಯನ್ನೇ ಪ್ರರಿಭ್ರಮಣೆಯನ್ನೇ?) ಕುರಿತು ನಿರ್ದಿಷ್ಟವಾಗಿ ಹೇಳುತ್ತವೆ ಎಂಬುದು ಸಾಮಾನ್ಯ ಓದುಗರಿಗೆ ಅರ್ಥವಾಗುವುದಿಲ್ಲ. ನೆರಳು ಗಡಿಯಾರಕ್ಕೆ ಸಂಬಂಧಿಸಿದಂತೆ ಚಿತ್ರಗಳನ್ನು ಅಳವಡಿಸಿರಬೇಕಾದರೆ, ಸೌರ ಗಡಿಯಾರದ ಬಗ್ಗೆಯೂ (ಇದನ್ನು ಕುರಿತು ಅಸ್ಪಷ್ಟ ಗಣಿತೀಯ ವಿಚಾರಗಳನ್ನು 'ತಯಾರಿಸುವ ವಿಧಾನ' ಎಂಬ ಅಡಿಯಲ್ಲಿ ನೀಡಲಾಗಿದೆ.) ರೇಖಾಚಿತ್ರವನ್ನಾದರೂ ನೀಡಬಹುದಿತ್ತಲ್ಲವೆ ? ಇಲ್ಲಿ ಬಳಕೆಯಾಗಿರುವ ತ್ರಿಕೋನಮಿತಿಯ ಪರಿಕಲ್ಪನೆಗಳಾದ Tan (tangent) Sin(Sine)ಗಳು (ಪುಟ೧೦) ಸಾಮಾನ್ಯ ಓದುಗನಿಗೆ ಒಮ್ಮೆಲೇ ಅರ್ಥವಾಗುವುದಿಲ್ಲ. ಇದನ್ನು ಮತ್ತಷ್ಟು ಸರಳವಾದ ವಾಕ್ಯಗಳಲ್ಲಿ ಹೇಳಬಹುದಿತ್ತು. ಸೌರಗಡಿಯಾರ ಮತ್ತು ಆಧುನಿಕ ಗಡಿಯಾರದ ಸಮತೋಲನ

ಪಟ್ಟಿ ಕೂಡ ಸಾಮಾನ್ಯ ಓದುಗನಿಗೆ ಒಮ್ಮೆಲೇ ಗ್ರಹಿಸಲು ಕಷ್ಟವಾಗುತ್ತದೆ. ಧನಸಂಖ್ಯೆಗಳು ಮತ್ತು ಋಣಸಂಖ್ಯೆಗಳು ಏನನ್ನು ಸೂಚಿಸುತ್ತವೆ ಎಂಬುದನ್ನು ಲೇಖಕರು ಹೇಳಬಹುದಿತ್ತು. ಸುಧಾರಿತ ಜಲಗಡಿಯಾರದ ಚಿತ್ರದ ವಿವಿಧ ಭಾಗಗಳಿಗೆ ಅಂಕಿಗಳನ್ನು ನೀಡಿದೆಯಾದರೂ (ಪುಟ.೧೪) ಅವುಗಳ ವಿವರ ಕೊಟ್ಟಿಲ್ಲ. ಇದೇ ತೆರನ ಚಿತ್ರಗಳನ್ನು ಪುಟ ೨೩,೩೧,೩೯, ೫೨ರಲ್ಲಿ ಕಾಣಬಹುದು.

ಯಾಂತ್ರಿಕ ಮಾಧ್ಯಮದ ಗಡಿಯಾರಗಳು ಎಂಬ ಶೀರ್ಷಿಕೆಯ ಅಡಿಯಲ್ಲಿ ಹಲಬಗೆಯ ಗಡಿಯಾರಗಳ ಪ್ರಸ್ತಾಪ ಇದೆ. ಅಂತೆಯೇ ಕೆಲವೊಂದು ವಿಶೇಷ ಬಗೆಯ ಗಡಿಯಾರಗಳ ಸ್ವಾರಸ್ಯಪೂರ್ಣ ವಿವರಗಳೂ ಇವೆ. ಆಧುನಿಕ ಗಡಿಯಾರಗಳು ಶೀರ್ಷಿಕೆಯ ಅಡಿಯಲ್ಲಿ ಕೆಲವು ವಿಜ್ಞಾನಿಗಳ , ತಂತ್ರವಿದರ ಹೆಸರುಗಳ ಪ್ರಸ್ತಾಪ ಬರುತ್ತದೆ. ಒಬ್ಬ ವಿಜ್ಞಾನಿಯ ಹೆಸರನ್ನು ಎರಡು ಮೂರು ತರದಲ್ಲಿ (ಹುಯ್ಗನ್ಸ್(ಪುಟ.೨೪), ಕ್ರಿಶ್ಚಿನ್ ಹೈಗೇನ್ಸ್ -ಪುಟ ೨೭, ಕ್ರಿಶ್ಚಿನ್ ಹೆಗೆನ್ಸ್- ಪುಟ.೨೮, ಕ್ರಿಶ್ಚಿಯನ್ ಹ್ಯೂಗನ್ಸ್-ಪುಟ.೩೭) ಬಳಸಲಾಗಿದೆ. ಉಚ್ಚಾರಣೆಯಲ್ಲಿ ಏಕರೂಪತೆಯನ್ನು ಕಾಯ್ದುಕೊಳ್ಳುವುದು ಅತ್ಯಗತ್ಯ. ಹೆಸರುಗಳ ಅಸಾಧುರೂಪಗಳನ್ನು (ಉದಾ: ಸೆಂಥ್ ಥಾಮಸ್ ಕ್ಲಾರ್ಕ್, ರಾಬರ್ಟ್ ಹೋಕ್, ನಿಕಲೋಸ್ ಫೇಸಿಯೋ, ಥಾಮಸ್ ಥಾಂಪಿಯನ್) ಸಾಧುರೂಪದಲ್ಲಿ ಬರೆಯಬಹುದಿತ್ತು.

ಲೇಖಕರು ವಿವಿಧ ಬಗೆಯ ಗಡಿಯಾರಗಳ ವಿವರಗಳನ್ನು ನೀಡಲು ಶ್ರಮವಹಿಸಿರುವುದು ಶ್ಲಾಘನೀಯ. ಕ್ವಾರ್ಟ್ಸ್ ಗಡಿಯಾರಗಳ ವಿಚಾರ ಪುಟ.೩೨ರಲ್ಲಿ ಬರುತ್ತದೆ. ಕ್ವಾರ್ಟ್ಸ್ ಹರಳಿನ ವಿಚಾರವಾಗಿ ಅದಕ್ಕೆ ಇರುವ ಸಹಜ ಆವರ್ತಾಂಕದ ಬಗ್ಗೆ ಸ್ವಲ್ಪ ವಿವರ ನೀಡಿ, ಈ ಆವರ್ತಾಂಕಗಳನ್ನು ಉದ್ದೀಪಿಸಿಕೊಂಡು ಗಡಿಯಾರಗಳ ಚಾಲನೆಗೆ ಬಳಸಿಕೊಳ್ಳುವ ವಿಚಾರವನ್ನು ಮತ್ತಷ್ಟು ವಿಶದೀಕರಿಸಬಹುದಿತ್ತು. ಈ ಪುಟದಲ್ಲಿ ಕಾಣಬರುವ ''ಸೆಕೆಂಡಿಗೆ ೩೨೭೬೮ ಊ ಇರುತ್ತದೆ'' ಎಂಬುದು ಅರ್ಥವಾಗುವುದಿಲ್ಲ. ಅಂತೆಯೇ ಪುಟ.೪೭ರಲ್ಲಿ ಬರುವ ''..... ೪೨೩ ಸಾವಿರ ಬಾರಿ(5Hy frequency) ಎಂಬುದು ಕೂಡ. ಸವೆತದ ನಿಯಂತ್ರಣಕ್ಕಾಗಿ ಗಡಿಯಾರಗಳಲ್ಲಿ ರತ್ನಕಲ್ಲುಗಳನ್ನು ಅಳವಡಿಸುವುದಿದೆ ಎಂಬ ವಿಚಾರ ಪುಟ.೪೭, ೪೮ರಲ್ಲಿ ಬರುತ್ತದೆ. ಯಾವ ಕಾರಣಕ್ಕಾಗಿ ಗಡಿಯಾರಗಳಲ್ಲಿ ಕೆಂಪು ರತ್ನವನ್ನು ಉಪಯೋಗಿಸುತ್ತಾರೆ, ಈ ರತ್ನದ ಭೌತಲಕ್ಷಣ ವೇನು ಎಂಬುದನ್ನು ಲೇಖಕರು ಸ್ಪಷ್ಟಪಡಿಸಿದ್ದರೆ ಹೆಚ್ಚಿನ ಮಾಹಿತಿ ಲಭ್ಯವಾಗುತ್ತಿತ್ತು. ಪುಟ.೪೪ರಲ್ಲಿ ಬ್ಯಾಲೆನ್ಸ್ ಸ್ಪ್ರಿಂಗ್ ಪ್ರಸ್ತಾಪ ಬರುತ್ತದೆ. ಅಲ್ಲಿ ಒಂದು ವಾಕ್ಯ ಹೀಗಿದೆ: ''ಈ ಉಕ್ಕಿನ ಸ್ಪ್ರಿಂಗ್‌ಗಳಿಗೆ ಮ್ಯಾಗ್ನೆಟ್ ಹತ್ತಿರ ತಂದರೆ ಇದಕ್ಕೆ ಮ್ಯಾಗ್ನೆಟ್ ತಗಲುತ್ತದೆ... ಡೀಮ್ಯಾಗ್ನಟ್ಶೈಜೇಶನ್ ಸಹಾಯದಿಂದ ಹೇರ್ ಸ್ಪ್ರಿಂಗ್‌ನಲ್ಲಿರುವ ಮ್ಯಾಗ್ನೇಟನ್ನು ತೆಗೆಯಬಹುದು''. ಇದು ಯಾವ ಪರಿಯ ವಿಜ್ಞಾನ ಬರೆವಣಿಗೆ? ಇಂಥ ವಾಕ್ಯಗಳ ಬದಲಿಗೆ ಅರ್ಥಸ್ಪಷ್ಟತೆ ಇರುವ, ಕ್ರಿಯಾತಂತ್ರಗಳನ್ನು ತಿಳಿಸುವ ಸರಳವಾಕ್ಯಗಳನ್ನು ಬಳಸಬಹುದಿತ್ತು ಲೇಖಕರು. ಗಡಿಯಾರದ ಆಯಿಲ್ (ಪುಟ.೪೯) ವಿಚಾರ ಪ್ರಸ್ತಾಪಿಸುತ್ತ ''ಒಂದು ತೊಟ್ಟು ಆಯಿಲ್‌ನಿಂದ ಸುಮಾರು ೧೦೦೦೦ ಗಡಿಯಾರಗಳಿಗೆ ಆಯಿಲ್‌ನ್ನು ಹಾಕಬಹುದು'' ಎಂದಿದ್ದಾರೆ. ಒಂದು ಸೂಜಿಮೊನೆಯನ್ನು ಒಂದು ತೊಟ್ಟು ಎಣ್ಣೆ(ತೈಲ) ಇರುವ ಮುಚ್ಚಳದಲ್ಲಿ ಅದ್ದಿ, ಆ ಮೊನೆಯನ್ನು ಗಡಿಯಾರದ ಪಿನೆಟ್‌ಗಳಿಗೆ, ಚಕ್ರಗಳಿಗೆ ತಗಲಿಸುವುದನ್ನು ಸಾಮಾನ್ಯವಾಗಿ ಜನ ನೋಡಿರುತ್ತಾರೆ. ಈ ವಿವರಣೆಯನ್ನು ಲೇಖಕರು ಪುಸ್ತಕದಲ್ಲಿ ಸ್ಪಷ್ಟಪಡಿಸಬಹುದಿತ್ತು. ಆಯಿಲ್ ಎಂಬ ಶಬ್ದಕ್ಕೆ ಎಣ್ಣೆ

ಇಲ್ಲವೆ ತೈಲ ಎನ್ನಲೂ ಬಹುದಿತ್ತು.

ಗಡಿಯಾರಗಳ ಕಥೆಯನ್ನು ನಿರೂಪಿಸುವಲ್ಲಿ ಲೇಖಕರು ಬಲು ಶ್ರಮವಹಿಸಿದ್ದಾರೆ. ಪ್ರಾಚೀನ ಗಡಿಯಾರಗಳ ಪ್ರಾರಂಭದಿಂದ ಆಧುನಿಕ ಪರಮಾಣು ಗಡಿಯಾರಗಳ ವರೆಗಿನ ದೀರ್ಘ ಇತಿಹಾಸವನ್ನು ಹ್ರಸ್ವಗೊಳಿಸಿ ಓದುಗರ ಮುಂದೆ ಇಟ್ಟು ಟಿಕ್ ಟಿಕ್ ಗೆಳೆಯನ ಒಳಗುಟ್ಟನ್ನು ರಟ್ಟು ಮಾಡಿದ್ದಾರೆ. ಪುಸ್ತಕದ ಕಡೆಯಲ್ಲಿ ನೀಡಿರುವ ವಿಶೇಷ ಮಾಹಿತಿಗಳು ಓದುಗರ ಕುತೂಹಲವನ್ನು ಹೆಚ್ಚಿಸುತ್ತವೆ. ಕಾಲನಿರ್ಣಯ ಉಪಶೀರ್ಷಿಕೆ ಉಪಯುಕ್ತವೆನಿಸಿದೆ. ದಿನ (ಹಗಲಿನ ಅವಧಿ) , ರಾತ್ರಿ (ಇರುಳಿನ ಅವಧಿ) ಎರಡೂ ಸೇರಿ ದಿವಸ ಎಂದಾಗುತ್ತದೆ ಎಂಬುದನ್ನು ಲೇಖಕರು ಗಮನಿಸಿದ್ದರೆ ಚೆನ್ನಾಗಿರುತ್ತಿತ್ತು. ಗಡಿಯಾರ ಶಾಸ್ತ್ರ ಕಾಲದ ಮಹತ್ವ, ಹೈಟೆಕ್ ಗಡಿಯಾರಗಳು ಮುಂತಾದವೆಲ್ಲ ಓದುಗರ ಗಮನ ಸೆಳೆಯುತ್ತವೆ. ಸಾಮಾನ್ಯರು ತಮ್ಮ ಗಡಿಯಾರಗಳ ಬಗ್ಗೆ ವಹಿಸಬೇಕಾದ ಎಚ್ಚರ, ಜಾಗ್ರತೆಗಳ ಬಗ್ಗೆ ಇರುವ ಮಾಹಿತಿ ಬಲು ಉಪಯುಕ್ತವೆನಿಸಿದೆ. ಹಾಲು ಬಿಳುಪು ಕಾಗದದ ಮೇಲೆ ಉತ್ತಮಗುಣಮಟ್ಟದ ಚಿತ್ರಗಳು ಅಚ್ಚಾಗಿರುವುದು, ಆಕರ್ಷಕ ಮುಖಪುಟ ವಿನ್ಯಾಸಗಳು ಪುಸ್ತಕವನ್ನು ಆಕರ್ಷಕವಾಗಿಸಿವೆ. ಕನ್ನಡದ ಜಾಯಮಾನಕ್ಕೆ ತಕ್ಕಂತೆ ಇರುವ ವಾಕ್ಯಗಳ ರಚನೆಯಲ್ಲಿ ಲೇಖಕರು ಮತ್ತಷ್ಟು ಹೆಚ್ಚಿನ ಪರಿಶ್ರಮ ಪಡೆಯುವುದು ಅಪೇಕ್ಷಣೀಯ. ಪುಸ್ತಕದ ರಚನೆಗೆ ನೆರವಾದ ಇತರ ಗ್ರಂಥಗಳ ಹೆಸರುಗಳನ್ನು ಲೇಖಕರು 'ಗ್ರಂಥಋಣ'ದಲ್ಲಿ ನೀಡಬಹುದಿತ್ತು. ಇದರಿಂದ ಓದುಗರಿಗೂ ಹೆಚ್ಚು ಮಾಹಿತಿ ಲಭ್ಯವಾಗುತ್ತಿತ್ತು. ಗಡಿಯಾರಗಳ ಬಗ್ಗೆ ಕೊಂಚ ಮಟ್ಟಿನ ಮಾಹಿತಿ ತಿಳಿದುಕೊಳ್ಳುವುದಕ್ಕೆ ಈ ಕಿರುಪುಸ್ತಕ ಉಪಯುಕ್ತವೂ ಸಂಗ್ರಹ ಯೋಗ್ಯವೂ ಆಗಿದೆ.

ಎಸ್. ರಾಮಪ್ರಸಾದ್
೭೫೫, ಕಾಶೀಪತಿ ಅಗ್ರಹಾರ
ಚಾಮರಾಜ ಜೋಡಿ ರಸ್ತೆ
ಮೈಸೂರು-೫೭೦ ೦೨೪

ಸ್ವಾಸ್ಥ್ಯ ಸಂಗಾತಿ; ಲೇಖಕರು: ಡಾ.ಸ.ಜ. ನಾಗಲೋಟಿಮಠ ;ಪುಟಗಳು: ೮೦, ಬೆಲೆ : ೨೫ರೂಗಳು, ಪ್ರಕಾಶಕರು: ನವಕರ್ನಾಟಕ ಪ್ರಕಾಶನ ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧

ವೈದ್ಯಕೀಯ ಪರಿಭಾಷೆಯನ್ನು ಕನ್ನಡದಲ್ಲಿ ಸರಳವಾಗಿ ಹೇಳುವ ವೈದ್ಯಸಾಹಿತಿ ನಾಗಲೋಟಿಮಠರವರ ಲೇಖನಗಳು ಕಾಂತಾಸಂಹಿತ. ಸ್ವಾರಸ್ಯವಾದ ವೈಚಾರಿಕ ಕತೆಗಳನ್ನು ಹಾಸ್ಯ ಲೇಪನದೊಡನೆ ಓದುವ ಅನುಭವ ಈ ಪುಸ್ತಕ ಓದಿದಾಗ ಆಗುತ್ತದೆ. ನಾಗಲೋಟಿಮಠರವರ ಸರಳ, ನೇರ, ಖಚಿತ, ಪ್ರಾಮಾಣಿಕ ಭಾಷೆ ಸಾಮಾನ್ಯ ಓದುಗನಿಗೂ ಅರ್ಥವೂ, ಪ್ರಿಯವೂ ಆಗುವಂತೆ ವೈದ್ಯಕೀಯ ವಿದ್ಯಾರ್ಥಿಗಳನ್ನು ಆಲೋಚನೆಗೆ, ಸಂಶೋಧನೆ ಹಚ್ಚುವುದು, ಲೇಖಕರ ಸ್ಫೂರ್ತಿದಾಯಕ ಮಾತುಗಳು.

'ಸ್ವಾಥ್ಯ ಸಂಗಾತಿ' ಗ್ರಂಥದಲ್ಲಿ ೧೩ ಲೇಖನಗಳು ಇದ್ದು ಒಂದಕ್ಕಿಂತ ಒಂದು ಸ್ವಾರಸ್ಯಕರವಾಗಿದೆ.

ಸೆಡಿಮೆಂಟ್ ಸೈಟೊಲೊಜಿ ಬಗ್ಗೆ ಸಂಶೋಧನೆ ನಡೆಸುವ ಮಠರವರು ಗುರುವಿನ ಮುಂದೆ ತಬ್ಬಿಬ್ಬಾಗಿ ಸೆಡಿಮೆಂಟ್ ಸೈಟೊಲಜಿ ಫಲಿತಾಂಶ

ವನ್ನು ಗುರುಗಳಿಗೆ ಹೇಳಿ ತಾವೇ ಅಚ್ಚರಿಪಡುತ್ತಾರೆ. ತಳಶೇಖರಣ್ಣ ಜೀವಕೋಶ ವಿಜ್ಞಾನ ಕ್ಷೇತ್ರದಲ್ಲಿ ಹಲವಾರು ಮಂದಿ ಸಂಶೋಧನೆ ಕೈಗೊಂಡು ಪ್ರಸಿದ್ಧಿ ಪಡೆದ ಸ್ಫೂರ್ತಿಯ ಕಥೆ ಈ ಲೇಖನದಲ್ಲಿದೆ.

ಸತ್ತ ಮೇಲೆ ಸಮಾಜ ಸೇವೆ, ಲೇಖನ ದೇಹದಾನದ ಮಹತ್ವ, ದೇಹದಾನಿಗಳು ಅರ್ಥಾತ್ ಅವರ ಸಂಬಂಧಿಗಳು ಪಟ್ಟ ತೊಂದರೆ ವಿವರವಾಗಿ 'ಯತ್ಪರಾರ್ಥಂ ಇದಂ ಶರೀರಂ' ಎಂಬ ತತ್ವವನ್ನು ಚೆನ್ನಾಗಿ ಮನದಟ್ಟುಮಾಡಿದೆ. ರಕ್ತದ ಕ್ಯಾನ್ಸರ್ ಮತ್ತು ಅದರ ಉಪಚಾರದ ಬಗ್ಗೆ ಆಧುನಿಕ ಆಲೋಚನೆಗಳು ರೋಗಿಗೆ ಸಮಾಧಾನ ತಂದುಕೊಂಡುವ, ಭೀಕರತೆಯನ್ನು ಕಡಿಮೆ ಮಾಡುವ ಆಶಾ ಭಾವನೆಯನ್ನು ಈ ಲೇಖನದಲ್ಲಿ ಮನ ಮುಟ್ಟುವಂತೆ ತಿಳಿಸಿದ್ದಾರೆ.

'ರಕ್ತದಾನಿ ದೀರ್ಘಾಯುಷೆಯಲ್ಲಿ ರಕ್ತದಾನದ ಮಹತ್ವ ಓದಿದ ಪ್ರತಿಯೊಬ್ಬರು ರಕ್ತದಾನ ಮಾಡಲು ತಾ ಮುಂದು, ನಾ ಮುಂದು ಎಂಬುವಂತೆ ಮಾಡಿಸುತ್ತದೆ.

'ಜಾಣತನ ಹೆಚ್ಚಿಸುವ ಮದ್ದು' ಲೇಖನದಲ್ಲಿ 'ಬಿ' ಜೀವಸತ್ವದಲ್ಲಿರುವ ಅಸಿಟೈಲ್ ಕೋಲಿಂಗ್ ಮೇಲಿನ ಸಂಶೋಧನೆ ಜಾಣರ ಜನಾಂಗವನ್ನು ಸೃಷ್ಟಿಸುವ ಪ್ರಯತ್ನವಾಗಿದೆ.

''ಗರ್ಭಸ್ಥ ಶಿಶುವಿಗೆ ಕಿವಿ ಕೇಳುವುದೇ'' ಲೇಖನ ಕೃಷ್ಣ ಸುಭದ್ರೆಗೆ ಹೇಳುವ ಅಭಿಮನ್ಯು ಆಖ್ಯಾನದೊಡನೆ ಪ್ರಾರಂಭವಾಗಿ ವಿಜ್ಞಾನಿಗಳು ಸಂಗೀತದ ಕ್ಯಾಸೆಟ್ ಕೇಳಿಸಿ ಮಾಡುವ ಸಂಶೋಧನೆಯ ಫಲಿತಾಂಶ ಸ್ವಾರಸ್ಯಕರವಾಗಿರುವುದನ್ನು ತುಂಬಾ ಸ್ವಾರಸ್ಯವಾಗಿ ಬರೆದಿದ್ದಾರೆ.

''ಡೈಯಟಿಂಗ್ ಮತ್ತು ಮನೋಸ್ವಾಸ್ಥ್ಯ'' ತಿನ್ನುವುದರ ಬಗ್ಗೆ ಸ್ನಿಗ್ಧ ಪದಾರ್ಥಗಳ ಬಗ್ಗೆ ತಪ್ಪು ಭಾವನೆಯನ್ನು ಹೋಗಲಾಡಿಸುವ ಆಹಾರದ ಮಿತಿಯನ್ನು ವರ್ಣಿಸುವ ಉತ್ತಮ ಲೇಖನವಾಗಿದೆ. ರಕ್ತದಲ್ಲಿ ಇರುವ ನೆಣ ಪದಾರ್ಥಗಳ ಅವಶ್ಯಕತೆಯನ್ನು ವರ್ಣಿಸುವ ಪರಿ ತುಂಬಾ ಚೆನ್ನಾಗಿದೆ. ಅತಿಯನ್ನು ವರ್ಜಿಸಬೇಕು, ಜೀವಸತ್ವ 'ಸಿ' ರೋಗನಿರೋಧಕ ಶಕ್ತಿಯನ್ನು ಬಲಪಡಿಸುವ, ನೆಗಡಿಯನ್ನು ದೂರವಿಡುವ ಬಗೆಗಿನ ಲೇಖನ.

''ನಾರು ಹುಳುಗಳ ಸಂತೆಯಲ್ಲಿ ನಾನು'' ನಿಜವಾಗಿಯೂ ಒಂದು ಅದ್ಭುತ ಪ್ರಪಂಚವನ್ನು ಅಳವಂಡಿಯಲ್ಲಿ ನಮಗೆ ತೋರಿಸುತ್ತಾರೆ. ಭಾಷೆ ಹಾಸ್ಯ ಲೇಪನದೊಡನೆ ರೋಚಕ ವಾಗುತ್ತ ನಗುವಿನ ಮಧ್ಯೆ ತಿಳಿವನ್ನು ಮೂಡಿಸು ತ್ತದೆ.

ಜಿಗಣೆ ಮಲೆನಾಡಿನಲ್ಲಿ ಒಂದು ಶಾಪವಾದರೆ ವೈದ್ಯಕೀಯರಂಗದಲ್ಲಿ ಒಂದು ವರ. ಈ ಜಿಗಣೆಯಿಂದ ಹುಣ್ಣನ್ನು ವಾಸಿಮಾಡುವ ಕಲೆ ಆಯುರ್ವೇದ ಉಪಚಾರದಲ್ಲಿಯೂ ವಿವರಿಸಲ್ಪಟ್ಟಿದೆ. ಜಿಗಣೆಯನ್ನು ಬಳಸಿ ಕ್ಯಾನ್ಸರ್ ಹುಣ್ಣಿಗೆ ಕೊಡುವ ಕುಶಲತೆ ಆಶ್ಚರ್ಯವನ್ನು ಉಂಟುಮಾಡುತ್ತದೆ. ಜಿಗಣೆ ಜೆಲ್ಲಿನಲ್ಲಿರುವ ಔಷಧಿಯ ಗುಣ ಸಂಶೋಧನೆ ಮೂಲಕ ವಿವರಿಸಿರುವುದು ಸಾಮಾನ್ಯರಿಗೂ ಅರ್ಥವಾಗುವಂತೆ ಲೇಖನ ಉಪಯುಕ್ತವಾಗಿದೆ.

ಜಠರ ಹುಣ್ಣಿನ ಬಗ್ಗೆ ''ಹೆಲಿತೋ ಬ್ಯಾಕ್ಟಿರಿಯಾ ಪೈಲೋರಿ'' ಎಂಬ ಜೀವಿಕಾರಣ ಎಂಬುದು ಗೊತ್ತಾದ ಮೇಲೆ ಜಠರ ಹುಣ್ಣು ಜಠರಾಮ್ಲದ ಇದ್ದ ತಿಳಿವಳಿಕೆಗೆ ಒಂದು ಹೊಸ ಆಯಾಮ ದೊರಕಿತು.

ಜಠರ ಹುಣ್ಣು ಹೇಗೆ ಬರುತ್ತದೆ ಎಂದು ಉದಾಹರಣೆಯೊಡನೆ ವಿವಹರಿಸಿ ಆಹಾರ,

ಮಲಕಶ್ಮಲವಾಗುವ ವಿಧಾನದಿಂದ ಜಠರ ಹುಣ್ಣು ಉಂಟಾಗುವುದನ್ನು ಮನಮುಟ್ಟುವಂತೆ ತಿಳಿಸಿದ್ದಾರೆ. ಗಾಯದಲ್ಲಿ ಹುಳು ಬೀಳುವುದು ಭಯಂತರವಾದ ಅನುಭವವಾದರೂ ಹುಳು ಬೀಳುವುದು ಗಾಯಕ್ಕೆ ಪರಿಹಾರ ಎಂಬುದನ್ನು ಅವರು ವಿವರಿಸಿದಾಗ ಎಂತಹ ವಿಚಿತ್ರ ಸಂಗತಿಗಳು ನಿಸರ್ಗದಲ್ಲಿ ರಹಸ್ಯವಾಗಿ ತಮ್ಮ ಕೆಲಸ ಮಾಡುವುದನ್ನು ಸ್ವಾರಸ್ಯವಾಗಿ ತಿಳಿಸಿದ್ದಾರೆ.

ಲಸಿಕೆಗೊಳಡನೆ ಜೀವಸತ್ವ 'ಎ' ಕೊಡುವ ವಿಧಾನದ ಅಪಾಯಕಾರಿ ವಿಧಾನವನ್ನು ವಿವರಿಸಿದ್ದಾರೆ. ಬೃಹತ್ ಪ್ರಮಾಣದ ಜೀವಸತ್ವ 'ಎ' ಕೊಡುವುದು ಮಕ್ಕಳಿಗೆ ಹಾನಿಕಾರ ಎಂಬುದನ್ನು ಮನವರಿಕೆ ಮಾಡಿದ್ದಾರೆ.

ಒಟ್ಟಿನಲ್ಲಿ ಕವಿ ಹೃದಯದ ನಾಗಲೋಟಮಠದ "ಸ್ವಾಸ್ಥ್ಯ ಸಂಗಾತಿ" ವೈದ್ಯಸಾಹಿತ್ಯದಲ್ಲಿ ಸಾರ್ಥಕ ಕೃತಿ.

ಡೋ.ಕಿ. ಲಿಂಗಣ್ಣ
ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ಪ್ರೌಢಶಾಲೆ
ಚಾಮುಂಡಿ ಬೆಟ್ಟ

ಕಲಿಕೆಯ ತೊಂದರೆಗಳು: ಲೇಖಕರು : ಡಾ. ಜಿ. ಪುರುಷೋತ್ತಮ; ೧೩೬ ಪುಟಗಳು, ಬೆಲೆ : ರೂ ೪೦.೦೦, ನವಕರ್ನಾಟಕ ಪ್ರಕಾಶನ ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧.

"ಕಲಕೆಯ ತೊಂದರೆಗಳು" ಕೃತಿಯ ಓದುವ ಮುನ್ನ ಲೇಖಕರೇ ಅಭಿಪ್ರಾಯಪಟ್ಟಿರುವಂತೆ ಓದು-ಬರಹ ಎಲ್ಲರೂ ತಿಳಿದಿರುವಂತೆ ಸಹಜವಾದ ಪ್ರಕ್ರಿಯೆಯಲ್ಲ. ಇದಕ್ಕೆ ಪರಿಸರ, ಮಾರ್ಗದರ್ಶನ ಅತ್ಯಗತ್ಯ. ನಾವು ಮಕ್ಕಳಿಗೆ ಸರಿಯಾದ ಪರಿಸರವನ್ನು ನಿರ್ಮಾಣಮಾಡಿ ಅವರ ಬೌದ್ಧಿಕ ಬೆಳವಣಿಗೆಯನ್ನು ಉದ್ದೀಪನಗೊಳಿಸಬೇಕು.ಈ ದಿಸೆಯಲ್ಲಿ ಕೇವಲ ಹೆತ್ತ ತಂದೆ-ತಾಯಿಗಳಿಗಷ್ಟೆ ಅಲ್ಲ, ಅದರಲ್ಲಿ ಸಮಾಜವು ಪ್ರಮುಖ ಪಾತ್ರ ವಹಿಸುತ್ತದೆ. ಪ್ರಸ್ತುತ ಸಮಾಜ ಎಂದರೆ ಶಾಲೆಯ ಪರಿಸರದಲ್ಲಿ ಬರುವ ಶಿಕ್ಷಕವರ್ಗ, ಸಹಪಾಠಿಗಳೂ ಸೇರುತ್ತಾರೆ. ಇತ್ತೀಚೆಗೆ ಮಕ್ಕಳ ಮನಸ್ಸನ್ನು ದೂರದರ್ಶನ ತನ್ನತ್ತ ಸೆಳೆದು ಮಕ್ಕಳ ಮನೋಲಯವನ್ನು ಅಲ್ಲೋಲ ಕಲ್ಲೋಲ ಮಾಡಿದೆ ಜೊತೆಗೆ ಅವರಿಗೆ ಕಲಿಯುವಿಕೆಗೆ ಪೂರಕವಾದ ನಿಯೋಜಿಸಿದ ಪಾಠ ಪ್ರವಚನ ಗಳತ್ತ ಆಸಕ್ತಿ ಕುಂದುವಂತೆ ಮಾಡಿದೆ. ಅದೇನೇ ಇರಲಿ ಲೇಖಕರು 'ಕಲಿಕೆಯ ತೊಂದರೆ' ಭಾಗದಲ್ಲಿ ಮಕ್ಕಳನ್ನು ಕಲಿಕೆಗೆ ಆಕರ್ಷಿಸಲು ಶಾಲೆಯಲ್ಲಿ ಯಾವುದೇ ರೀತಿಯ ಶಿಕ್ಷೆಗಳನ್ನು ನೀಡದೆ, ಆಕರ್ಷಣೀಯವಾದ ವಾತಾವರಣವನ್ನು ಸೃಷ್ಟಿಸಬೇಕೆಂದು ಸೂಚಿಸಿದ್ದಾರೆ. ಈ ಬಗ್ಗೆ ಅನೇಕ ನಿದರ್ಶನಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಕಲಿಯುವ ಮಕ್ಕಳಲ್ಲಿ ಶ್ರವಣದೋಷವಾಗಲೀ, ಬೌದ್ಧಿಕ ತೊಂದರೆ ಆಗಲೀ, ನರದೋಷಗಳಾಗಲಿ, ಮಾತಿನ ತೊಂದರೆಯಾಗಲಿ ಇರಬಾರದು ಎಂಬ ಅಂಶವನ್ನು ವಿಷದವಾಗಿ ನಿರೂಪಿಸಿದ್ದಾರೆ.

'ಭಾಷೆಯ ತೊಂದರೆ' ಎಂಬ ಭಾಗದಲ್ಲಿ ಚಿಕ್ಕಂದಿನಲ್ಲಿ ಶಬ್ದಗಳನ್ನು ಸರಿಯಾಗಿ ಉಚ್ಚರಿಸಲು ಬಾರದ ಮಗು ಓದುವಿನಲ್ಲಿ ಕುಂಟಿತಗೊಳ್ಳುತ್ತಾನೆ ಎಂಬ ಸತ್ಯಸಂಗತಿಯನ್ನು

ವಿವರಣಾತ್ಮಕವಾಗಿ ನಿರೂಪಿಸಿದ್ದಾರೆ. ಆರನೇ ಅಧ್ಯಾಯದಲ್ಲಿ ಕಲಿಕೆಯ ತೊಂದರೆಯ ಮಗುವಿನ ಕೆಲವು ರೂಪ-ರೇಷೆಗಳನ್ನು ಗುರ್ತಿಸಿದ್ದಾರೆ. ಇಲ್ಲಿ ಮಗು ತನ್ನ ದೈನಿಕ ಚಟುವಟಿಕೆಗಳಲ್ಲಿ ನಿಧಾನಗತಿಯನ್ನು ಅನುಸರಿಸುತ್ತಾನೆ ಎಂಬ ಕೆಲವು ವಿಚಾರಗಳನ್ನು ವಿಶ್ಲೇಷಿಸಿದ್ದಾರೆ.

''ಸಾಮಾನ್ಯ ಓದು'' ಎಂಬ ಏಳನೇ ಭಾಗದಲ್ಲಿ ಗಮನ ಮತ್ತು ಅಭ್ಯಾಸಬಲದಿಂದ ತನ್ನಷ್ಟಕ್ಕೆ ತಾನೆ ಆಗುವ ಕಾರ್ಯ ಈ ಓದು ಎಂದು ಸೂಚಿಸುತ್ತಾರೆ.

ಮಕ್ಕಳು ಓದುವ ಸಂದರ್ಭದಲ್ಲಿ ಪದಗಳನ್ನು ಸೂಕ್ಷ್ಮವಾಗಿ ಗಮನಿಸದೆ ತಪ್ಪಾಗಿ ಓದುವಂತಹ ಸನ್ನಿವೇಶವನ್ನು, ಅದನ್ನು ನೇರ್ಪುಗೊಳಿಸುವ ವಿಚಾರಗಳ ಕಡೆಗೆ ಸಂಬಂಧಿಸಿದವರು ಆದ್ಯ ಗಮನಹರಿಸಬೇಕೆಂಬ ಅಂಶವನ್ನು ಪ್ರಸ್ತಾಪಿಸಿದ್ದಾರೆ. ಅಂತಹ ಸಂದರ್ಭಗಳಲ್ಲಿ ಶಿಕ್ಷಕರು ಈ ರೀತಿಯ ಲೋಪದೋಷಗಳನ್ನು ಸರಿಪಡಿಸುವತ್ತ ಗಮನವೀಯಬೇಕು. ಮಕ್ಕಳಿಗೆ ಕಲಿಸುವ ಸಂದರ್ಭದಲ್ಲಿ ಮಕ್ಕಳ ಮನೋಭಿಪ್ರಾಯವನ್ನು ಜೀರ್ಣಿಸಿ ಕಲಿಕೆಯ ಪ್ರಕ್ರಿಯೆಗೆ ಸಿದ್ಧತೆ ಮಾಡಿಕೊಂಡು ಕಾರ್ಯಪ್ರವೃತ್ತರಾಗಬೇಕೆಂಬ ಸತ್ಯ ಸಂಗತಿಯನ್ನು ಮುಂದಿಡುತ್ತಾರೆ.

ಮನಸ್ಸಿನ ಬೆಳವಣಿಗೆ ಅನಂತವಾದದ್ದು. ಮಗು ೧೨ ನೇ ವಯಸ್ಸಿನ ನಂತರ ವೈಶಾಲ ಪ್ರಜ್ಞೆಯನ್ನು ಹೊಂದಿ, ಹಾಗೆಯೇ ಪ್ರಪಂಚವನ್ನು ಓದುತ್ತಾ ಸಾಗುತ್ತಾನೆ. ಶಾಲೆಯಲ್ಲಿ ಪರಿಸರದಲ್ಲಿ ತನ್ನನ್ನು ಗುರುತಿಸುತ್ತಾ ಸಾಗುತ್ತಾನೆ. ಜೀವನದ ಬಗ್ಗೆ ಆತನಿಗೆ ಹೆಚ್ಚಿನ ತಿಳುವಳಿಕೆ ಉಂಟಾಗುತ್ತದೆ. ಮಾನಸಿಕ ಬೆಳವಣಿಗೆಯಲ್ಲಿ ಏರು-ಪೇರುಗಳಾಗಬಹುದೆಂಬ ವಿಚಾರವನ್ನು ಇಲ್ಲಿ ಸಾದರಪಡಿಸುತ್ತಾರೆ.

ಲೆಕ್ಕದ ಕಲಿಕೆಯಲ್ಲಿರುವ ತೊಂದರೆಯ ಬಗ್ಗೆ ಸವಿಸ್ತಾರವಾಗಿ ಪರಿಚಯಿಸುತ್ತಾರೆ. ಲೆಕ್ಕ ಬಲ್ಲವರೆಲ್ಲ ಬುದ್ಧಿವಂತರಾದರೂ, ಬುದ್ಧಿವಂತರಾದವರಿಗೆ ಲೆಕ್ಕದ ಪೂರ್ಣಾನುಭವವಿದೆಯೆಂದು ಹೇಳಲು ಸಾಧ್ಯವಿಲ್ಲ. ಸಾಂಸ್ಕೃತಿಕವಾಗಿ ಮುಂದುವರಿದ ಹೆಚ್ಚಿನ ಮಕ್ಕಳಲ್ಲಿ ಲೆಕ್ಕದ ಬಗ್ಗೆ ಆಸ್ತೆ ವಹಿಸುವುದು ಕಡಿಮೆ ಎಂಬ ಅಭಿಪ್ರಾಯವನ್ನು ಲೇಖಕರು ಹೇಳುತ್ತಾರೆ. ಓದುಕಲಿಕೆಯ ತೊಂದರೆಯ ಹಾಗೆ ಲೆಕ್ಕದ ತೊಂದರೆಯೂ ಇದೆ ಎಂಬ ಅಭಿಪ್ರಾಯವನ್ನು ಬಿಚ್ಚಿಡುತ್ತಾರೆ.

ಬರವಣಿಗೆಯ ವಿಚಾರವನ್ನು ಇಲ್ಲಿ ವೈಜ್ಞಾನಿಕ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ಓದುವುದರಲ್ಲಿ ಮಾತಿನ ಶಬ್ದಗಳು ಮಾತಿನ ಮೂಲ ಶಬ್ದವನ್ನು ಕಲಿಯಲು ಅಸಾಧ್ಯವಾದ ಮಗು ಅವುಗಳನ್ನು ಅಕ್ಷರರೂಪದಲ್ಲಿ ಬರೆಯಲಾರ ಎಂಬ ಅಂಶವನ್ನು ಸೂಚಿಸಿದ್ದಾರೆ. ಹೀಗೆ ಹತ್ತು ಹಲವಾರು ಬರವಣಿಗೆಯ ಬಗ್ಗೆ ವೈಜ್ಞಾನಿಕ ಚಿಂತನೆಯನ್ನು ಇಲ್ಲಿ ವಿಶ್ಲೇಷಿಸಿದ್ದಾರೆ.

APPENDIX-A ಎಂಬ ಭಾಗದಲ್ಲಿ ಓದು ಬರಹ ಕಲಿಕೆಯ ಶಕ್ತಿ ಮಾಪನಗಳಾದ ಭಾಷೆ -ಮಾತು- ಕಲಿಕೆ ಮತ್ತು ಉಪಯೋಗ ಇವುಗಳ ಬಗ್ಗೆ ಸಾದರಪಡಿಸಿದ್ದಾರೆ. ಅಕ್ಷರಗಳನ್ನು ಕಂಡು ಹೇಳುವ ಅನುಭವ, ಅಕ್ಷರಗಳ ಗುಂಪನ್ನು ಕಂಡು ಹೇಳುವ ಅಭ್ಯಾಸ, ತಾನೇ ಓದಿದ್ದನ್ನು ತಿಳಿದು ಹೇಳುವ ಸಾಮರ್ಥ್ಯ, ಓದಿದ್ದನ್ನು ನೆನಪಿನಲ್ಲಿಡುವ ಸಾಧ್ಯತೆ, ಅಕ್ಷರಗಳನ್ನು ಬರೆಯುವ ಅನುಭವ, ಅಕ್ಷರಗಳ ಗುಣಿತಾಕ್ಷರಗಳನ್ನು ಬೇಗನೆ ಬರೆಯುವುದು, ಓದುವಂತೆ ಬರೆಯುವ ಭಾಷೆಯ ಅಭ್ಯಾಸ, ಕೈಬರಹದ ವಿಶೇಷ ತೊಂದರೆಗಳು, ಹಲವು ಅಂಕಿಗಳ ವಿಶೇಷ ತೊಂದರೆಗಳು ಲೆಕ್ಕದ ಸಂಬಂಧತೆಯನ್ನು ಅರ್ಥಮಾಡಿಕೊಳ್ಳುವ ತೊಂದರೆ-

ಹೀಗೆ ಹತ್ತು ಹಲವಾರು ವಿಚಾರಗಳನ್ನು ಅನುಭವ ಪೂರ್ವಕವಾಗಿ ವಿಶ್ಲೇಷಣೆ ಮಾಡಿದ್ದಾರೆ.

ಕೃತಿಯು ಕೊನೆಯಲ್ಲಿ ಓದು-ಬರಹ ಕಲಿಕೆಯ ತೊಂದರೆಯ ನಿವಾರಣೆಯಲ್ಲಿ ಶಿಕ್ಷಕರು, ಪೋಷಕರು ಅನುಸರಿಸಬೇಕಾದ ಕ್ರಮಗಳನ್ನು ಪರಿಚಯಿಸುತ್ತಾರೆ. ಕೃತಿಯ ನಡುನಡುವೆ ಸೂಕ್ತವಾದ ಕಡೆ ಚಿತ್ರಗಳು, ರೇಖಾಚಿತ್ರಗಳು ಔಚಿತ್ಯ ಪೂರ್ಣವಾಗಿ ಮೂಡಿ ಬಂದಿವೆ. ಕೃತಿಯು ಅಂದವಾದ ಮುದ್ರಣದಿಂದ ಕೂಡಿದ್ದು ಕೇವಲ ೧೩೬ ಪುಟಗಳಲ್ಲಿ ಹೇಳಬಹುದಾದಷ್ಟು ವಿಚಾರಗಳನ್ನು ಕೆಲವು ಕಡೆ ವಿವರಣಾತ್ಮಕವಾಗಿ ಮತ್ತೆ ಕೆಲವು ಕಡೆ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿದ್ದಾರೆ. ಈ ಕೃತಿಯು ಶೈಕ್ಷಣಿಕ ತರಬೇತಿ ಶಿಕ್ಷಣಾರ್ಥಿಗಳಿಗೂ ಉಪಯುಕ್ತವಾಗಿದೆ ಎಂದು ಹೇಳಬಹುದು. ಬೆಲೆ ೪೦ರೂಗಳಾದರೂ ದುಬಾರಿಯೇನಲ್ಲ, ಇದು ಒಂದು ಸಂಗ್ರಹ ಯೋಗ್ಯವಾದ ಅಮೂಲ್ಯ ಕೃತಿಯೆಂದು ಹೇಳಬಹುದಷ್ಟೆ. ಡಾ. ಜಿ. ಪುರುಷೋತ್ತಮ ಅವರು ಶೈಕ್ಷಣಿಕ ಕ್ಷೇತ್ರಕ್ಕೆ ಈ ಅಮೂಲ್ಯ ಕೃತಿಯನ್ನು ನೀಡಿ ಉಪಕರಿಸಿದ್ದಾರೆ.

ಕೆ. ಎಂ. ಪಂಚಾಕ್ಷರಪ್ಪ
ಟಿ. ಎಸ್. ಸುಬ್ಬಣ್ಣ ಸಾರ್ವಜನಿಕ ಪೌಢಶಾಲೆ
ತಾಯೂರು

ಧೂಮಪಾನ ನಿಲ್ಲಿಸಿ; ಮೂಲ: ಡಾ. ಎಂ. ಹಾಲಯ್ಯ, ಅನುವಾದ: ಡಾ. ಸಿ. ಆರ್. ಚಂದ್ರಶೇಖರ್, ಮೊದಲ ಮುದ್ರಣ: ೧೯೯೯, ಪುಟ: ೧೩೬, ಬೆಲೆ: ೪೫. ಪ್ರಕಾಶಕರು: ನವಕರ್ನಾಟಕ ಪ್ರಕಾಶನ ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦ ೦೦೧

ಡಾ. ಎಂ. ಹಾಲಯ್ಯನವರು ಇಂಗ್ಲಿಷಿನಲ್ಲಿ ಬರೆದಿರುವ Stop Smoking ಎಂಬ ಕೃತಿಯನ್ನು ಡಾ. ಸಿ. ಆರ್. ಚಂದ್ರಶೇಖರ್ ಅವರು ಕನ್ನಡಕ್ಕೆ ''ಧೂಮಪಾನ ನಿಲ್ಲಿಸಿ'' ಎಂಬ ಹೆಸರಿನಿಂದ ಅನುವಾದಿಸಿದ್ದಾರೆ. ಈ ಕೃತಿಯಲ್ಲಿ ಒಟ್ಟು ಹದಿನಾರು ಅಧ್ಯಾಯಗಳಿವೆ. ಪ್ರತಿಯೊಂದು ಅಧ್ಯಾಯದ ಉದ್ದೇಶ ಕೂಡ ''ಧೂಮಪಾನ ನಿಲ್ಲಿಸಿ'' ಎಂಬ ಸಂದೇಶವನ್ನು ಸಾರುವುದೇ ಆಗಿದೆ. ಇದರಲ್ಲಿ ಹೊಗೆಸೊಪ್ಪಿನ ಇತಿಹಾಸದಿಂದ ಹಿಡಿದು, ಮುಂದೆ ಅದು ಚುಟ್ಟಾ, ಸಿಗರೇಟ್, ತಂಬಾಕು, ನಶ್ಯ, ಬೀಡಿ-ಮುಂತಾದ ರೂಪಗಳಲ್ಲಿ ಮನುಷ್ಯನ ಶರೀರದ ಮೇಲೆ-ಉಂಟು ಮಾಡುವ ಅಪಾಯಗಳ ಬಗ್ಗೆ ತುಂಬಾ ವೈಜ್ಞಾನಿಕವಾಗಿ ನಿರೂಪಿಸಲಾಗಿದೆ.

ಇಂದು ಯಾವುದೇ ಸಾಂಕ್ರಾಮಿಕ ವ್ಯಾಧಿಗಿಂತ-ಕಡಮೆ ಅಪಾಯಕಾರಿಯಲ್ಲದ್ದು ಈ ಧೂಮಪಾನ ಚಟ. ಇದರಿಂದ ಶರೀರಕ್ಕೆ ಅಪಾಯ ಬಹಳ ನಿಧಾನವಾಗಿ ಆಗುತ್ತದೆ. ಧೂಮಪಾನ ಮಾಡುವುದರಿಂದ ಕ್ಯಾನ್ಸರ್ ಉಂಟಾಗುತ್ತದೆ ಎಂದೂ ತಜ್ಞರು ಎಚ್ಚರಿಕೆ ನೀಡುತ್ತಲೇ ಬಂದಿದ್ದಾರೆ. ಅದೇ ಏಕೇ ಸಿಗರೇಟು ಪ್ಯಾಕ್ ಮೇಲೆ 'ಧೂಮಪಾನ ಆರೋಗ್ಯಕ್ಕೆ ಹಾನಿಕಾರಕ' ಎಂಬ ಎಚ್ಚರಿಕೆಯ ಸೂಚನೆಯಿದ್ದರೂ ಕೂಡ ಅಪಾರವಾಗಿ ಸಿಗರೇಟು ಮಾರಾಟವಾಗುತ್ತಿದೆ. ಇತ್ತೀಚೇಗೆ

ಧೂಮಪಾನ ಮಧುಮೇಹ ಮತ್ತು ಹೃದ್ರೋಗವನ್ನು ಉಲ್ಬಣಗೊಳಿಸುತ್ತದೆ ಎಂಬುದಾಗಿ ತಿಳಿದು ಬಂದಿದೆ. ಆದರೂ ಜನ ಧೂಮಪಾನ ಮಾಡುತ್ತಲೇ ಬಂದಿರುವುದಕ್ಕೆ ಲೇಖಕರು ವಿಷಾದ ವ್ಯಕ್ತಪಡಿಸಿದ್ದಾರೆ. ಈ ಕೃತಿಯಲ್ಲಿ ಲೇಖಕರು ಧೂಮಪಾನದಿಂದ ಆಗುವ ಅಪಾಯಗಳನ್ನು ತಿಳಿಸುವುದರ ಜೊತೆಗೆ ಧೂಮಪಾನವನ್ನು ತ್ಯಜಿಸುವ ಉಪಯುಕ್ತ ಸಲಹೆಗಳನ್ನು ಸೂಚಿಸಿದ್ದಾರೆ.

ಮೊದಲನೆಯ ಅಧ್ಯಾಯದಲ್ಲಿ ಸಿಗರೇಟಿನ ಚರಿತ್ರೆಯನ್ನು ವಿವರಿಸಿದ್ದಾರೆ. 'ಸಿಗಾರ್' ಎಂಬುದು ಸ್ಪ್ಯಾನಿಸ್ ಮೂಲದ ಪದ. ಇದೇ ಅಲ್ಲದೆ ಸಿಗಾರ್‌ನ್ನು ಹೇಗೆ ಸೃಷ್ಟಿಸಲಾಯಿತು. ಅದರ ಉತ್ಪಾದನೆಯನ್ನು ಯಾವರೀತಿ ಪ್ರಾರಂಭಿಸಿದರು ಎಂಬೆಲ್ಲ ಅಂಶಗಳನ್ನು ಸ್ಪಷ್ಟಪಡಿಸಿದ್ದಾರೆ. ಸಿಗಾರಿನ ಉತ್ಪಾದನೆಯನ್ನು ದ್ವಿಗುಣಗೊಳಿಸಿದ ಆವಿಷ್ಕಾರ ಮರದ ಅಚ್ಚು ೧೯೫೦ರ ಸುಮಾರಿಗೆ ಬ್ರಿಟಿಷರಿಂದ ನಿರ್ಮಾಣವಾಯಿತು. ಈ ಯಂತ್ರದಿಂದ ಹೇಗೆ ಸಿಗಾರ್‌ಗಳನ್ನು ತಯಾರಿಸಿದರು? ಹಾಗೂ ಸಿಗರೇಟಿನ ವಿವಿಧ ಬಗೆ ಯಾವುವು? ಎಂಬುದನ್ನು ತಿಳಿಸುತ್ತಾರೆ. ನಮ್ಮ ದೇಶದ ಧೂಮಪಾನದ ಬಗ್ಗೆ ಪ್ರಸ್ತಾಪಿಸುತ್ತಾ ನಮ್ಮಲ್ಲಿ ಹೆಚ್ಚಾಗಿ ಜನಸಾಮಾನ್ಯರು , ಕೂಲಿಕಾರರು ಸಿಗಾರ್‌ಗಳನ್ನು ಸೇದುತ್ತಾರೆ. ಅವರು ಸೇದುವ ಸಿಗಾರ್‌ಗಳು ಅತಿ ಕಡಿಮೆ ಗುಣಮಟ್ಟದವು, ಅದರಲ್ಲೂ ಆಂಧ್ರಪ್ರದೇಶದ ದುಡಿಮೆಗಾರ ಮಹಿಳೆಯರಲ್ಲಿ ಈ ಅಭ್ಯಾಸ ಹೆಚ್ಚು ಎನ್ನುತ್ತಾರೆ. ಭಾರತದ ಸಿಗಾರ್ ಉದ್ಯಮ ಕೇಂದ್ರಗಳ ಬಗ್ಗೆ ತಿಳಿಸುತ್ತಾ ಇತ್ತೀಚಿನ ದಿನಗಳಲ್ಲಿ ಸಣ್ಣ ಉದ್ಯಮವಲಯದಲ್ಲಿ ಬರುವ ಸಿಗಾರ್ ಕೇಂದ್ರಗಳು ಅಪಾರ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಸ್ಪಷ್ಟಪಡಿಸಿದ್ದಾರೆ. ಭಾರತದಲ್ಲಿ ಪ್ರಮುಖವಾಗಿ ಆರು ದೊಡ್ಡ ಬ್ರ್ಯಾಂಡ್‌ಗಳು ಮತ್ತು ಕಂಪನಿ ಸಿಗಾರ್‌ಗಳ ಮಾರಾಟ ಶೇ.೭೫ರಷ್ಟು ತಗ್ಗಿದೆ. ಇದು ವ್ಯಕ್ತಿ ಮತ್ತು ಸಮಾಜದ ದೃಷ್ಟಿಯಿಂದ ಒಳ್ಳೆಯ ಸ್ವಾಗತಾರ್ಹ ಬೆಳವಣಿಗೆ ಎಂದಿದ್ದಾರೆ.

ಎರಡನೆಯ ಅಧ್ಯಾಯದಲ್ಲಿ ಹೊಗೆಸೊಪ್ಪಿನಲ್ಲಿರುವ ರಾಸಾಯನಿಕ ವಸ್ತುಗಳ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಹೊಗೆ ಸೊಪ್ಪಿನ ಎಲೆಯಲ್ಲಿ ನೂರಾರು ಬಗೆಯ ರಾಸಾಯನಿಕ ವಸ್ತುಗಳ ಮಿಶ್ರಣವಿದೆ. ಇವುಗಳಲ್ಲಿ ಅನೇಕವು ಇತರ ಸಸ್ಯಗಳಲ್ಲೂ ಕಂಡುಬಂದರೂ, ಅವುಗಳಲ್ಲಿ ಕಂಡುಬರದ ಎರಡು ಮುಖ್ಯ ರಾಸಾಯನಿಕ ವಸ್ತುಗಳನ್ನು ತಿಳಿಸುತ್ತಾರೆ. ಅವುಗಳೆಂದರೆ ನಿಕೋಟಿನ್-ಮತ್ತು ಐಸೋಪ್ರಿನಾಯಿಡ್‌ಗಳು. ವ್ಯಕ್ತಿ ಸಿಗರೇಟನ್ನು ಸೇದುವಾಗ ಅದರ ಅಂದರೆ ಉರಿಯುವ ಸಿಗರೇಟಿನ ಉಷ್ಣತೆ 1616°F (88 °C) ಈ ಹೊಗೆಯಲ್ಲಿ ವಿವಿಧ ಅನಿಲಗಳು, ಸಾಂದ್ರತೆಗೊಳ್ಳದ ಆವಿಗಳು, ಸೂಕ್ಷ್ಮ ಕಣಗಳಿರುತ್ತವೆ ಎಂಬುದಾಗಿ ವಿವರಿಸಿದ್ದಾರೆ. ಸಿಗರೇಟಿನ ಒಟ್ಟು ಶೇ.೯೦ ಭಾಗ ಹೊಗೆ ಅನಿಲ ಅಂಶವಾಗಿರುತ್ತದೆ. ಈ ಅನಿಲಗಳಲ್ಲಿ ಕನಿಷ್ಠ ಒಂಭತ್ತು ಅಂಶಗಳು ಶ್ವಾಸಕೋಶಗಳಿಗೆ ಅಪಾಯವನ್ನುಂಟು ಮಾಡುತ್ತವೆ. ಕಣಗಳ ಅಂಶದಲ್ಲಿ ೨೫೦ಕ್ಕೂ ಹೆಚ್ಚಿನ ಸಂಯುಕ್ತವಸ್ತುಗಳನ್ನು ಗುರುತಿಸುತ್ತಾರೆ. ಅವುಗಳಲ್ಲಿ ಅನೇಕ ವಸ್ತುಗಳು ಕ್ಯಾನ್ಸರ್ ಕಾರಕ ಎಂಬುದಾಗಿ ತಿಳಿಸುತ್ತಾರೆ. ಅಷ್ಟೇ ಅಲ್ಲದೆ ಅದರಲ್ಲಿ ಬರುವ ಹೊಗೆ ಶ್ವಾಸನಾಳಗಳನ್ನು ಪ್ರವೇಶಿಸಿ, ಅಲ್ಲಿರುವ ಜೀವಕೋಶಗಳ ಮೇಲೆ ಯಾವ ರೀತಿಯ ದುಷ್ಪಭಾವ ಬೀರುತ್ತದೆ ಎಂಬುದನ್ನು ತುಂಬಾ ಸೊಗಸಾಗಿ ನಿರೂಪಿಸಿದ್ದಾರೆ.

ಮೂರನೆಯ ಅಧ್ಯಾಯದಲ್ಲಿ ಜನರು ಏಕೆ

ಧೂಮಪಾನ ಮಾಡುತ್ತಾರೆ ಎಂಬುದನ್ನು ವಿವರಿಸುತ್ತಾರೆ. ಮಾನಸಿಕ ಮತ್ತು ಸಾಮಾಜಿಕ ಒತ್ತಡಗಳಿಂದ ಧೂಮಪಾನ ಒಂದು ಅಭ್ಯಾಸ ವಾಗುತ್ತದೆ. ಆದರೆ ಇದೇ ಒಂದು ಕಾರಣ ದಿಂದ ಸಿಗರೇಟು ಸೇವನೆ ಶುರುವಾಗುತ್ತದೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಜಾಹಿರಾತು, ಪಾಶ್ಚಿಮಾತ್ಯ ಜೀವನಶೈಲಿಯ ಅನುಕರಣೆ, ಮಾಧ್ಯಮಗಳ ಪ್ರಭಾವ ಮುಂತಾದ ಅಂಶಗಳು ಕಾರಣವಾಗುತ್ತವೆ ಎಂಬ ಅಂಶ ವನ್ನು ಸ್ಪಷ್ಟಪಡಿಸುತ್ತಾರೆ. ಮಹಿಳೆಯರ ಧೂಮಪಾನದ ಬಗ್ಗೆ ವಿವರಿಸುತ್ತಾ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ೧೯೨೦ರ ನಂತರ ಮಹಿಳೆಯರಲ್ಲೂ ಧೂಮಪಾನ ಹೆಚ್ಚಾಯಿತು ಎಂಬ ಅಂಶವನ್ನು ತಿಳಿಸುತ್ತಾರೆ. ಇದರಿಂದ ಸಾವಿರಾರು ಶಿಶುಗಳು ಅಮೆರಿಕಾದಲ್ಲಿ ಸತ್ತವು ಎಂಬುದನ್ನು ನಿದರ್ಶನ ಸಹಿತ ವಿವರಿಸಿದ್ದಾರೆ.

ನಾಲ್ಕನೆಯ ಅಧ್ಯಾಯದಲ್ಲಿ ಧೂಮಪಾನದಿಂದ ದೀರ್ಘಕಾಲದ ಶ್ವಾಸಕೋಶದ ಕಾಯಿಲೆ ಹೇಗೆ ಉಂಟಾಗುತ್ತೆ ಎಂಬುದನ್ನು ವೈಜ್ಞಾನಿಕವಾಗಿ ನಿರೂಪಿಸಿದ್ದಾರೆ. ಇದರಿಂದ ಉಸಿರಿನ ಮಾರ್ಗಗಳು ಕಟ್ಟಿಕೊಂಡು ತೊಂದರೆಯನ್ನುಂಟುಮಾಡುತ್ತವೆ. ಇಂಥ ದೀರ್ಘಕಾಲ ತೊಂದರೆ ಕೊಡುವ ಕಾಯಿಲೆಯನ್ನು 'ಉಸಿರಾಟಕ್ಕೆ ಧಕ್ಕೆಯಾಗುವ ದೀರ್ಘಕಾಲದ ಶ್ವಾಸಕೋಶದ ಕಾಯಿಲೆ' ಎಂದು ಕರೆಯುತ್ತಾರೆ. ಇವುಗಳನ್ನು ಎರಡು ಎಧಗಳಾಗಿ ವಿಂಗಡಿಸಿ ಒಂದನ್ನು ಸರಿಪಡಿಸ ಬಹುದಾದಂಥ ಶ್ವಾಸಕೋಶದ ಕಾಯಿಲೆ ಮತ್ತೊಂದು ಸರಿಪಡಿಸಲಾಗದ ಶ್ವಾಸ ಕೋಶದ ಕಾಯಿಲೆ ಎಂದು ಕರೆಯುತ್ತಾರೆ. ಈ ಕಾಯಿಲೆ ಹೆಚ್ಚಾಗಿ ಅಮೆರಿಕಾ, ಬ್ರಿಟನ್, ಭಾರತದಲ್ಲಿ ಯಾವ ಪ್ರಮಾಣದಲ್ಲಿ ಇತ್ತು ಎಂಬುದಕ್ಕೆ ಉದಾಹರಣೆ ಸಹಿತ ವಿವರಿಸಿದ್ದಾರೆ.

ಐದನೆಯ ಅಧ್ಯಾಯದಲ್ಲಿ ಹೊಗೆಸೊಪ್ಪು ಸೇವನೆಯಿಂದ ಮಾನವನ ದೇಹಕ್ಕೆ ಕ್ಯಾನ್ಸರ್ ಹೇಗೆ ಉಂಟಾಗುತ್ತದೆ ಎಂಬುದನ್ನು ಪ್ರಸ್ತಾಪಿಸುತ್ತಾರೆ. ಸಿಗರೇಟು, ಬೀಡಿಗಳಲ್ಲಿರುವ ಪರಿಮಳ ರುಚಿಗೆ ಕಾರಣ ಅವುಗಳಲ್ಲಿರುವ ಕೋಟಿ ಕೋಟಿ ಕಣಗಳು. ಈ ಹೊಗೆಯ ಕಣಗಳಲ್ಲಿ ಅಂಟುಅಂಟಾದ ಕೆಟ್ಟವಾಸನೆಯ 'ಟಾರ್' ಎಂಬ ರಾಸಾಯನಿಕ ವಸ್ತು ಇರುತ್ತದೆ. ಈ ಟಾರ್‌ನಲ್ಲಿ ಕ್ಯಾನ್ಸರನ್ನು ಉಂಟುಮಾಡುವ ಸುಮಾರು ೩೦ ರಾಸಾಯನಿಕ ವಸ್ತುಗಳಿವೆ ಎಂಬುದಾಗಿ ಸ್ಪಷ್ಟಪಡಿಸಿದ್ದಾರೆ. ಇದರಿಂದ ಶ್ವಾಸನಾಳ ಕೋಶಗಳ ರೋಗ , ಕ್ರಾನಿಕ್ ಬ್ರಾಂಕೈಟಿಸ್, ಎಂಫೈಸೀಮಾ ಮತ್ತು ಶ್ವಾಸ ಕೋಶಗಳ ಕ್ಯಾನ್ಸರ್: ಅಷ್ಟೇ ಅಲ್ಲದೆ ಹೃದಯ ಮತ್ತು ರಕ್ತನಾಳಗಳ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಕೂಲಂಕಷವಾಗಿ ವಿವರಿಸುತ್ತಾರೆ. ಈ ದುಷ್ಪ್ರಭಾವದಿಂದ ಅಮೆರಿಕಾ, ಬ್ರಿಟನ್, ಭಾರತದಲ್ಲೂ ಈ ಕಾಯಿಲೆಗಳಿಗೆ ತುತ್ತಾಗಿ ಸಾವನ್ನಪ್ಪುತ್ತಿರುವುದನ್ನು ಉದಾಹರಣೆ ಸಹಿತ ವಿಶದಪಡಿಸಿದ್ದಾರೆ.

ಧೂಮಪಾನವು ಒಬ್ಬನ ಲೈಂಗಿಕ ಜೀವನದ ಮೇಲೆ ದುಷ್ಪರಿಣಾಮವನ್ನು ಬೀರಬಲ್ಲದೆ? ಬೀರಬಲ್ಲುದಾದರೆ ಹೇಗೆ ಮತ್ತು ಎಷ್ಟು ಎಂಬುದನ್ನು ಕುರಿತು ಏಳನೆಯ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಇಲ್ಲಿ ಲೈಂಗಿಕ ದುರ್ಬಲತೆಯಿಂದ ಬಳಲಿದವರ ನಾಲ್ಕು ಪ್ರಕರಣಗಳನ್ನು ಕೊಟ್ಟು ವಿವರಿಸುತ್ತಾರೆ. ಆದ್ದರಿಂದ ಈ ರೋಗಿಗಳು ಆರೋಗ್ಯವಂತ ಮಕ್ಕಳನ್ನು ಪಡೆಯಲಾಗಲಿಲ್ಲ.

ಸಿಗರೇಟು ಸೇವನೆಯಿಂದ ಮಿದುಳಿನ ಮೇಲೆ ಯಾವ ರೀತಿಯ ಪರಿಣಾಮ ಉಂಟಾಗುತ್ತದೆ ಎಂಬುದನ್ನು ಎಂಟನೆಯ ಅಧ್ಯಾಯ ದಲ್ಲಿ ತಿಳಿಸುತ್ತಾರೆ. ಇದರಿಂದ ಮಿದುಳಿನ

ಅಲೆಗಳು ತಗ್ಗುತ್ತವೆ. ಆದ್ದರಿಂದ ಸಹಜವಾಗಿಯೇ ಭಾವನೆಗಳು, ಸೃಜನಶೀಲತೆ, ಆಳವಾದ ಆಲೋಚನೆಗಳಿಗೆ ಸಂಬಂಧಿಸಿದ ಅಲೆಗಳು ದುರ್ಬಲವಾಗುತ್ತವೆ ಎಂಬುದಾಗಿ ಸ್ಪಷ್ಟಪಡಿಸುತ್ತಾರೆ. ಒಂಬತ್ತನೆಯ ಅಧ್ಯಾಯದಲ್ಲಿ ಗರ್ಭಿಣಿ ಸ್ತ್ರೀಯಾದವರು ಸಿಗರೇಟು ಮತ್ತು ಹೊಗೆಸೊಪ್ಪನ್ನು ಸೇವಿಸುವುದರಿಂದ, ಗರ್ಭದೊಳಗಿನ ಪಿಂಡಗೂಸಿನ ಮೇಲಿ ಮತ್ತು ನವಜಾತ ಶಿಶುವಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಎಂದಿದ್ದಾರೆ. ನಂತರ ಹೆರಿಗೆಯ ಅವಧಿಯಲ್ಲಿ ಉಂಟಾಗುವ ರಕ್ತಸ್ರಾವ ಮತ್ತು ಮಾಸುವಿನ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ಮಾಹಿತಿ ನೀಡಿದ್ದಾರೆ. ಲೇಖಕರು ಈ ಅಧ್ಯಾಯದಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದ ಸರ್ಜನ್ ಜನರಲ್ ವರದಿ ಮತ್ತು ಅನೇಕ ನಿಯತಕಾಲಿಕೆಗಳ ಪ್ರಬಂಧಗಳಲ್ಲಿ ದಾಖಲಾದ ವಿಷಯಗಳನ್ನು ತೆಗೆದುಕೊಂಡು ತುಂಬಾ ವೈಜ್ಞಾನಿಕವಾಗಿ ನಿರೂಪಿಸಿದ್ದಾರೆ.

ಹತ್ತನೆಯ ಅಧ್ಯಾಯದಲ್ಲಿ 'ಮಕ್ಕಳಲ್ಲಿ ಧೂಮಪಾನ' ಹೇಗೆ ಪ್ರಾರಂಭವಾಗುತ್ತದೆ ಎಂಬುದನ್ನು ವಿವರಿಸಿದ್ದಾರೆ. ''ದೊಡ್ಡವರಂತೆ ಕಾಣಿಸಿಕೊಳ್ಳಲು ಚಿಕ್ಕವರು, ಚಿಕ್ಕವರಂತೆ ಕಾಣಿಸಿಕೊಳ್ಳಲು ದೊಡ್ಡವರು ಧೂಮಪಾನ ಮಾಡುತ್ತಾರೆ ಎಂಬ ಮಾತಿದೆ. ಆದ್ದರಿಂದ ಮಕ್ಕಳು ಆಧುನಿಕ ಮಾದರಿಯ ಪ್ರಚಾರ, ಜಾಹಿರಾತುಗಳಿಂದ ಧೂಮಪಾನದ ಅಭ್ಯಾಸಕ್ಕೆ ಒಳಗಾಗುತ್ತಾರೆ. ಇದಕ್ಕೆ ಲೇಖಕರು ಸಲಹೆಯನ್ನು ಸೂಚಿಸುತ್ತಾ 'ಮಕ್ಕಳಿಗೆ ಆರೋಗ್ಯ ಶಿಕ್ಷಣವನ್ನು ಕೊಡಬೇಕು ಮತ್ತು ಹೊಗೆಸೊಪ್ಪಿನ ಅಪಾಯದ ಬಗ್ಗೆ ತಿಳಿವಳಿಕೆ ಮೂಡಿಸಬೇಕು. ಇದಕ್ಕೆ ಅತ್ಯಂತ ಮುಖ್ಯವಾದ ಸ್ಥಳ ಎಂದರೆ ಶಾಲೆ. ಇಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾಗಿರಬೇಕು ಆಗ ಮಾತ್ರ ಒಳ್ಳೆಯ ವಾತಾವರಣ ಸೃಷ್ಟಿಸಲು ಸಾಧ್ಯ ಎಂಬುದಾಗಿ ತಿಳಿಸುತ್ತಾರೆ.

ಹನ್ನೊಂದನೆಯ ಅಧ್ಯಾಯದಲ್ಲಿ ಪರೋಕ್ಷ ಧೂಮಪಾನದಿಂದ ವ್ಯಕ್ತಿಗಳ ಮೇಲೆ ಉಂಟಾಗುವ ಹಾನಿಯ ಬಗ್ಗೆ ತಿಳಿಸುತ್ತಾರೆ. ಧೂಮಪಾನಿಯು ಬಿಡುವ ಹೊಗೆಯನ್ನು ಧೂಮಪಾನ ಮಾಡದ ವ್ಯಕ್ತಿಗಳು ಸೇವಿಸಬೇಕಾಗಿ ಬರುವುದನ್ನು ಪರೋಕ್ಷ ಧೂಮಪಾನ ಎಂದು ಕರೆಯಬಹುದು. ಧೂಮಪಾನಿಗಳಲ್ಲದವರು ಕೂಡ ಇಂಥ ಹೊಗೆಯನ್ನು ಸೇವಿಸುವುದರಿಂದ ಹಲವಾರು ಆರೋಗ್ಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇದರಿಂದ ಶ್ವಾಸಕೋಶದ ಕ್ಯಾನ್ಸರ್ ಮತ್ತು ಹೃದಯಾಘಾತಗಳಿಂದ ಸಾವು ಸಂಭವಿಸಬಹುದು ಎಂಬ ಎಚ್ಚರಿಕೆಯನ್ನು ನೀಡಿದ್ದಾರೆ.

ಹೊಗೆಸೊಪ್ಪಿನ ಹೊಗೆಯಲ್ಲಿರುವ ರಾಸಾಯನಿಕ ವಸ್ತುಗಳು ಗಾಳಿಯಲ್ಲಿ ಸಂಚರಿಸಿ ಪರಿಸರ ಮಾಲಿನ್ಯವಾಗುವುದನ್ನು ಹನ್ನೆರಡನೆಯ ಅಧ್ಯಾಯದಲ್ಲಿ ವಿವರಿಸಿದ್ದಾರೆ. ಇದರಿಂದ ಹಲವಾರು ಕಾಯಿಲೆಗಳು ಉಂಟಾಗುತ್ತವೆ. ಆದ್ದರಿಂದ ಆಯಾ ರಾಷ್ಟ್ರಗಳಲ್ಲಿ ಸರ್ಕಾರ ಮಧ್ಯಪ್ರವೇಶಮಾಡಿ, ಇಂಥ ಮಾಲಿನ್ಯವನ್ನು ತಡೆಗಟ್ಟಬೇಕು ಎಂದು ಸೂಚಿಸಿದ್ದಾರೆ.

ಧೂಮಪಾನದ ಅಭ್ಯಾಸವನ್ನು ನಿಲ್ಲಿಸುವ ವಿಧಾನಗಳ ಬಗ್ಗೆ ೧೩ ಮತ್ತು ೧೪ ನೆಯ ಅಧ್ಯಾಯಗಳಲ್ಲಿ ವಿವರಿಸಿದ್ದಾರೆ. ವ್ಯಕ್ತಿ ತನ್ನನ್ನು ತಾನು ನಿಯಂತ್ರಿಸಿಕೊಳ್ಳುವುದಾದರೆ ಧೂಮಪಾನದ ಅಭ್ಯಾಸವನ್ನು ಬಿಡಬಹುದು ಎಂದಿದ್ದಾರೆ. ಎಲ್ಲರೂ ಮನಸ್ಸಿನ ಆರೋಗ್ಯ ಹೆಚ್ಚಿಸಿಕೊಳ್ಳಬೇಕು. ಇದನ್ನು ಹೆಚ್ಚಿಸಿಕೊಳ್ಳಲು ಕೆಲವು ಅಂಶಗಳನ್ನು ಪಾಲಿಸಬೇಕಾಗುತ್ತದೆ. ಅವು

ಗಳೆಂದರೆ ಸ್ವಾವಲೋಕನ, ಸರಳ ಜೀವನ, ಸ್ನೇಹ, ಪ್ರೀತಿ, ವಿಶ್ವಾಸ, ಕಷ್ಟ, ಸುಖ, ನೋವು ನಲಿವುಗಳನ್ನು ಆತ್ಮೀಯರೊಂದಿಗೆ ಹಂಚಿಕೊಳ್ಳಬೇಕು ಎಂದು ತಿಳಿಸುತ್ತಾರೆ. ಏನೆ ಮಾಡುವ ಮೊದಲು ಯೋಚಿಸಿ, ಇತರ 'ರೊಂದಿಗೆ ನಿಮ್ಮನ್ನು ನೀವು ಹೋಲಿಸಿಕೊಳ್ಳಬೇಡಿ, ನಿಮ್ಮದೇ ಆದ ಸ್ವಂತ ವ್ಯಕ್ತಿತ್ವವನ್ನು ಬೆಳಸಿ ಕೊಂಡು ಉತ್ತಮ ಜೀವನ ನಡೆಸಿದರೆ ಲೇಖಕರ ಶ್ರಮ ಸಾರ್ಥಕ ವಾಗುತ್ತದೆ.

ಒಟ್ಟಿನಲ್ಲಿ ಈ ಕೃತಿಯ ಮುಖ್ಯ ಉದ್ದೇಶವೇ 'ಧೂಮಪಾನ ನಿಲ್ಲಿಸಿ' ಎಂಬುದು. ಈ ಕೃತಿಯಲ್ಲಿ ಧೂಮಪಾನವನ್ನು ಮಾಡುವ ಅಥವಾ ಮಾಡದ ಸಾಮಾನ್ಯ ಓದುಗನಿಗೂ ಅರ್ಥವಾಗುವಂತೆ ಲೇಖಕರು ವಿಷಯವನ್ನು ಸವಿವರವಾಗಿ ನಿರೂಪಿಸಿದ್ದಾರೆ. ವ್ಯಕ್ತಿಯ ನಡವಳಿಕೆಯಲ್ಲಿ ಬದಲಾವಣೆ ತರುವ ಔಷಧವಿಲ್ಲ, ಮನವೊಲಿಕೆಯೋ ಉತ್ತಮ ವಿಧಾನ. ಶಾಲೆಗಳಲ್ಲಿ ಇದು ವಿದ್ಯಾಭ್ಯಾಸದ ಒಂದು ಪ್ರಮುಖ ಅಂಶವಾಗಬೇಕು. ತಂದೆತಾಯಿಗಳು ಈ ವಿಷಯದಲ್ಲಿ ಮಕ್ಕಳಿಗೆ ಮಾದರಿಯಾಗಿರಬೇಕು. 'ಚಟ ಚಟ್ಟ ಕಟ್ಟುವ ತನಕ' ಎಂಬ ಗಾದೆಯಂತೆ, ದುಶ್ಚಟಗಳು ಮನುಷ್ಯನನ್ನು ನಾಶದ ಹಂತಕ್ಕೆ ಕೊಂಡೊಯ್ಯುತ್ತವೆ. ಅವುಗಳಿಂದ ದೇಹದ ಆರೋಗ್ಯ ಕೆಡುವುದಲ್ಲದೆ ಮಾನಸಿಕವಾದ ದೌರ್ಬಲ್ಯಗಳು ಹೆಚ್ಚುತ್ತವೆ. ಅನಾದಿಕಾಲದಿಂದ ತಂಬಾಕಿನ ಚಟ ಬೆಳೆದು ಬಂದಿದೆ. ಆದ್ದರಿಂದ ಇಂಥ ಚಟಗಳಿಂದ ದೂರವಿರಬೇಕು. ಯುವ ಜನತೆಯಲ್ಲಿ ವಿವೇಕ ಮೂಡದಿದ್ದರೆ ಮನುಕುಲದ ಅಧೋಗತಿ ಖಂಡಿತ ಎಂದು ಹೇಳಬಹುದು. ಲೇಖಕರು ಕೃತಿಯಲ್ಲಿ ಎಲ್ಲಿಯೂ ತೊಡಕಾಗದಂತೆ ವಿಷಯಗಳನ್ನು ವೈಜ್ಞಾನಿಕವಾಗಿ ನಿರೂಪಿಸಿದ್ದಾರೆ. ಎಲ್ಲರೂ ಈ ಪುಸ್ತಕದಲ್ಲಿರುವ ವಿಷಯಗಳನ್ನು ಓದಿ ಮನನ ಮಾಡಿದರೆ ಹೊಗೆಸೊಪ್ಪಿನ ಸೇವನೆಯನ್ನು ಖಂಡಿತ ನಿಲ್ಲಿಸಬಹುದು. ಆಗ ಲೇಖಕರ ಶ್ರಮ ಸಾರ್ಥಕವಾಗುತ್ತದೆ ಎಂದು ಹೇಳಬಹುದು.

ಟಿ.ಕೆ. ಕೆಂಪೇಗೌಡ
ಕನ್ನಡ ಉಪನ್ಯಾಸಕ
ಶ್ರೀವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ
ಮೈಸೂರು-೧೨

Statement of ownership and other particulars about the monthly periodical **"PUSTAKA PRAPANCHA"** as required to be published under rule 8 of the Registration of Newspapers (Central) Rules 1956.

FORM IV

Place of Publication	— Karnataka State Adult Education Council 5/1 Vinoba Road Manasagangothri, Mysore-6
Periodicity	— Monthly
Printer's Name	— M- Krishnappa
Nationality & Address	— Indian Karnataka State Adult Education Council Printing Press 5/1 Vinoba Road Manasagangothri, Mysore-6
Publisher's Name & Address	— Srirangaraju General Secretary Karnataka State Adult Education Council · 5/1 Vinoba Road Manasagangothri, Mysore-6
Nationality	— Indian
Editor's Name	— R. Boraiah
Nationality	— Indian
Address	— Karnataka State Adult Education Council 5/1 Vinoba Road Manasagangothri, Mysore-6

I, the General Secretary here by declare that the particulars given above are true to the best of my knowledge and belief.

Srirangaraju
General Secretary
KARNATAKA STATE ADULT EDUCATION COUNCIL
MYSORE

1 March 2001

ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆಗಳು

ನೀವು ಓದಲೇಬೇಕಾದ ಪುಸ್ತಕಗಳು...

ಶರಣ ಚರಿತಾಮೃತ

ಸಣ್ಣ ಕತೆಗಳು ೧೩೮ : (ಸತ್ಯಕ್ಕೆ ಬೆಲೆ ಕೊಟ್ಟ ಗೆಳೆಯರು)

ನಾಗರಿಕತೆಯ ಇತಿಹಾಸ

ಸಂಪಾದಕೀಯ ಸಂಕಲನ

ಕಾರಂತ ದರ್ಶನ

ಸ್ವಾಮಿ ವಿವೇಕಾನಂದ

ನನ್ನೂರು

ನಳಚರಿತ್ರೆ ಸಂಗ್ರಹ

ಯುದ್ಧ ಮತ್ತು ಶಾಂತಿ : ಭಾಗ ೧, ೨, ಮತ್ತು ೩

ನಕ್ಷತ್ರ ವೀಕ್ಷಣೆ

ಕರ್ನಾಟಕ ಹವಾಸೂಚಿ

ಪ್ರಥಮ ಚಿಕಿತ್ಸೆ

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು ತರಿಸಿ ಓದಿರಿ

ಮುದ್ರಣ ಮತ್ತು ಪ್ರಕಟಣೆ : ಕ. ರಾ. ವ. ಶಿ. ಸಮಿತಿ, ಮೈಸೂರು-570 006